
"JANAPADA" Monthly - October 2016
"ಜನಪದ" ಮಾಸಿಕ – ಅಕ್ಟೋಬರ್ 2016

Page No. -52
RNI No. KAR/KAN/2010/20676

REGD NO. : KA/BG/GPO-2526/2015-17 License to post without prepayment WPP 34
Dt. 29th & 30th Posted at (Every month) Bangalore PSO, Mysore Road, Bangalore-26



ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ 'ಗಾಂಧಿ ಅಂಗಳ'


ಛಾಯಾಚಿತ್ರ : ಕೆ. ಭಾಗ್ಯಪ್ರಕಾಶ್

ಗಾಂಧೀ ಜಯಂತಿ ವಿಶೇಷ ಸಂಚಿಕೆ

ವಾರ್ಷಿಕ ಚಂದಾ ರೂ.25/–

# ಜನಪದ

ಅಕ್ಟೋಬರ್ 2016






# ಮರಳಿ ಬಂದಿದೆ ಗಾಂಧೀಜಿ ನೆನಪು

ಡಾ॥ ಎಂ. ಎಸ್. ಮೂರ್ತಿ ಅವರ

# ಕುಂಚದಲ್ಲಿ
# ಬಾಪು ನೆನಪು





# ಜನಪದ

ಸಂಪುಟ-59 • ಸಂಚಿಕೆ-7 • ಅಕ್ಟೋಬರ್ 2016

ಗಾಂಧೀ ಜಯಂತಿ ವಿಶೇಷ ಸಂಚಿಕೆ




ಈ ಭೂಮಿಯು ಮಾನವನ ಅಗತ್ಯಗಳನ್ನು
ಪೂರೈಸಬಲ್ಲದೇ ಹೊರತು ಅವರ
ದುರಾಸೆಗಳನ್ನು ಈಡೇರಿಸಲಾರದು...


**05** ರಚನಾತ್ಮಕ ಕಾರ್ಯಕ್ರಮವೆಂಬುದು ನಾಯಕತ್ವ ತರಬೇತಿ ಕಾರ್ಯಕ್ರಮವೇ ಆಗಿದೆ
• ಪ್ರಸನ್ನ

**12** ಗಾಂಧಿ ಮತ್ತು ಪರಿಸರ ಕಾಳಜಿ
• ಡಾ. ಕೆ. ಪುಟ್ಟಸ್ವಾಮಿ

**17** ಬದನವಾಳು ಸತ್ಯಾಗ್ರಹ
• ಕೆ. ಚೇತನ್

**21** ರಾಷ್ಟ್ರೀಯ ಶಿಕ್ಷಣ ಚಳುವಳಿ
• ಎಂ. ಜುಂಜಣ್ಣ

**26** ಖಾದಿ ನೂಲುವುದು ಹಾಗೂ ಕೈಮಗ್ಗ ನೇಯ್ಗೆ
• ಗುರುನಾಥ ಕಡಬೂರ

**29** ವ್ಯಾಜ್ಯ ಪರಿಹಾರ ಕಾರ್ಯಕ್ರಮ
• ಸಾಗರ್ ಕುಮಾರ್ ದೇಸಾಯಿ

**30** ಗಾಂಧೀ ಸ್ಮೃತಿಯಲ್ಲಿ ಮುಧೋಳ ಆಶ್ರಮ
• ಪ್ರಸನ್ನ

**34** ಪ್ರಾಣಿ ಬಲಿ ನಿಷೇಧ
• ನಾಗರಾಜ ಹರಪನಹಳ್ಳಿ

**35** ಅಸ್ಪೃಶ್ಯತಾ ನಿವಾರಣೆ
• ವೇಮಗಲ್ ಸೋಮಶೇಖರ್

**38** ದೇವಸ್ಥಾನದ ಪ್ರವೇಶದ ಚಳುವಳಿ
• ವಿನೀತ್ ರಾಜ್

**39** ಮಹಾತ್ಮಾ ಗಾಂಧೀಜಿಯವರ ರಚನಾತ್ಮಕ ಕಾರ್ಯಗಳು
• ಪ್ರೊ. ಎ. ಎಸ್. ವೇಣುಗೋಪಾಲರಾವ್

**45** ಗಾಂಧಿ ; ಆಚಾರ, ವಿಚಾರ ಮತ್ತು ಆಹಾರ ವಿಹಾರ
• ಎಸ್. ನಾರಾಯಣಸ್ವಾಮಿ

**47** ಗಾಂಧೀ ಗ್ರಾಮಸ್ವರಾಜ್ ಕಲ್ಪನೆಯ ಸಾಕಾರ BAIF



ಪ್ರಧಾನ ಸಂಪಾದಕರು
**ಎನ್. ಆರ್. ವಿಶುಕುಮಾರ್**
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
**ಎಂ. ರವಿಕುಮಾರ್**
ಜಂಟಿ ನಿರ್ದೇಶಕರು
**ಬಸವರಾಜ ಕಂಬಿ**
ಉಪ ನಿರ್ದೇಶಕರು

ಉಪ ಸಂಪಾದಕರು
**ಸಿ. ರೂಪಾ**
ಸಹಾಯಕ ನಿರ್ದೇಶಕರು

ಪ್ರಕಾಶಕರು
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 01
email : varthajanapada@yahoo.co.in

ಮುದ್ರಕರು
ಲಾವಣ್ಯ ಮುದ್ರಣ
#19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು – 50


ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ



# ಮಹಾತ್ಮ ಗಾಂಧೀಜಿ

## ನಮ್ಮ ಕಣ್ಣ ನೋಟದ ಬೆಳಕು...

**ಎನ್. ಆರ್. ವಿಶುಕುಮಾರ್**
ನಿರ್ದೇಶಕರು, ವಾರ್ತಾ ಮತ್ತು
ಸಾರ್ವಜನಿಕ ಸಂಪರ್ಕ ಇಲಾಖೆ

**ಗಾಂ**ಧೀಜಿ, ಮಹಾತ್ಮ ಗಾಂಧೀಜಿ, ನಮ್ಮ ಕಣ್ಣ ನೋಟದ ಬೆಳಕು, ಜಗತ್ತು ಆಧುನಿಕತೆಯೆಂಬ ನಾಗಾಲೋಟದಲ್ಲಿ ಮುನ್ನುಗ್ಗುತ್ತಿರುವಾಗ ಸಾವಧಾನದ, ಸಮಾಧಾನದ, ನೆಮ್ಮದಿಯ ಬದುಕಿನ ಬಗ್ಗೆ ತಮ್ಮ ಪ್ರಖರ ಚಿಂತನೆಗಳಿಂದ ಗಾಂಧೀಜಿ ನಮ್ಮ ಕಣ್ಣನ್ನು ತೆರೆಸುವ ಚಿಂತಕರಾಗಿ ಕಾಣಿಸುತ್ತಾರೆ. ಅಂತೆಯೆ ಜಗತ್ತಿನಾದ್ಯಂತ ಗಾಂಧೀ ಚಿಂತನೆಗಳು ಮತ್ತೆ ಮುನ್ನೆಲೆಗೆ ಬರುತ್ತಿವೆ. ಮಾನವ ಸಂಪನ್ಮೂಲವೇ ಬಹುದೊಡ್ಡ ಶಕ್ತಿಯಾಗುತ್ತಿರುವ ಇಂದಿನ ದಿನಮಾನಗಳಲ್ಲಿ ಗಾಂಧೀಜಿಯವರ ಗ್ರಾಮಾಧಾರಿತ ಯೋಜನೆಗಳು ಭಾರತದಂತಹ ದೇಶಕ್ಕೆ ಭರವಸೆಯ ಬೆಳಕಿನ ಕಿರಣಗಳಾಗಿವೆ. ಇದನ್ನು ಮನಗಂಡಿರುವ ಕರ್ನಾಟಕ ಸರ್ಕಾರ ಮರೆಯಾಗುತ್ತಿರುವ ಗಾಂಧೀಜಿಯವರ ಚಿಂತನೆಗಳನ್ನು ಮತ್ತು ಅವರ ರಚನಾತ್ಮಕ ಕಾರ್ಯಕ್ರಮಗಳನ್ನು ಜನತೆಗೆ ಮರುಪರಿಚಯಿಸುವ ಹಾಗೂ ಮುಂದಿನ ಪೀಳಿಗೆಗೆ ಗಾಂಧೀಜಿಯವರ ಜೀವನ ಸಂದೇಶಗಳನ್ನು ಪರಿಚಯಿಸುವ ಮಹತ್ತರ ಕಾರ್ಯವನ್ನು ಕೈಗೆತ್ತಿಕೊಂಡಿದೆ.

ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕದಲ್ಲಿ ಮಹಾತ್ಮ ಗಾಂಧೀಜಿಯವರ ಕನಸುಗಳನ್ನು ನನಸು ಮಾಡಲು ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದೆ. ಈ ನಿಟ್ಟಿನಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮುಂಚೂಣಿಯಲ್ಲಿ ನಿಂತು, ಸರ್ಕಾರದ ಪ್ರಯತ್ನಗಳನ್ನು ಜನರಿಗೆ ಮನವರಿಕೆ ಮಾಡಲು ಹತ್ತು ಹಲವು ರೀತಿಯಲ್ಲಿ ಪ್ರಯತ್ನಿಸುತ್ತಿದೆ. ಅಮೆರಿಕಾದ ಅಧ್ಯಕ್ಷ ಬರಾಕ್ ಒಬಾಮರವರು ತಮ್ಮ ಅಧಿಕಾರ ಪದಗ್ರಹಣ ಸಂದರ್ಭದಲ್ಲಿ ಮಹಾತ್ಮ ಗಾಂಧೀಜಿಯವರ ಹೆಸರನ್ನು ಪ್ರಸ್ತಾಪಿಸಿ ಅವರ ಜೀವನ ಸಂದೇಶಗಳೇ ನನಗೆ ಮಾರ್ಗದರ್ಶಿ ಎಂದು ಹೇಳಿದ್ದು ತಮಗೆ ನೆನಪಿರಬಹುದು. ದೂರದ ಅಮೆರಿಕಾ ಅಧ್ಯಕ್ಷರೇ ನಮ್ಮ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರನ್ನು ನೆನಪು ಮಾಡಿಕೊಳ್ಳುತ್ತಿರುವ ಸಂದರ್ಭದಲ್ಲಿ ನಮ್ಮವರೇ ಆದ ಗಾಂಧೀ ಚಿಂತನೆಗಳನ್ನು ನಾವು ಅವಜ್ಞೆ ಮಾಡುತ್ತಿರುವುದು ಎಷ್ಟು ಸರಿ ಎನ್ನುವ ಎಳೆಯನ್ನು ಹಿಡಿದು ವಾರ್ತಾ ಇಲಾಖೆ ಇತ್ತೀಚಿನ ವರ್ಷಗಳಲ್ಲಿ ಗಾಂಧೀಜಿಯವರ







**ಕರ್ನಾಟಕ ಶಕ್ತಿ ಕೇಂದ್ರ ವಿಧಾನಸೌಧ ಮತ್ತು ವಿಕಾಸಸೌಧದ ನಡುವೆ ರಾಷ್ಟ್ರದಲ್ಲಿಯೇ ಎತ್ತರದ್ದು ಎನ್ನುವ ಧ್ಯಾನಸ್ಥ ಗಾಂಧೀಜಿಯ ಬೃಹತ್ ಪ್ರತಿಮೆಯನ್ನು ಪ್ರತಿಷ್ಠಾಪಿಸುವ ಮೂಲಕ ಸರ್ಕಾರ ತನ್ನ ಗಾಂಧೀ ವಿಚಾರ ನಂಬುಗೆಗೆ ಸಾಕಾರ ರೂಪವನ್ನು ನೀಡಿದೆ.**

ಚಿಂತನೆಗಳನ್ನು ಜನಪ್ರಿಯಗೊಳಿಸಲು ತನ್ನದೇ ಆದ ರೀತಿಯಲ್ಲಿ ಪ್ರಯತ್ನಿಸುತ್ತದೆ.

ಇದಕ್ಕೆ ಅನುಗುಣವಾಗಿ ಗಾಂಧೀ ಚಿಂತನೆಯ ಚಟುವಟಿಕೆಗಳನ್ನು ಸಮನ್ವಯಗೊಳಿಸಲು ಕರ್ನಾಟಕ ಸರ್ಕಾರವು **"ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ"**ಯನ್ನು ಸಮನ್ವಯ ಇಲಾಖೆಯನ್ನಾಗಿ ನೇಮಿಸಿದೆ. ಈ ನಿಟ್ಟಿನಲ್ಲಿ, ಕಳೆದ ಮೂರು ವರ್ಷಗಳಿಂದ ವಾರ್ತಾ ಇಲಾಖೆಯು ನಿರಂತರ ಕಾರ್ಯಕ್ರಮಗಳನ್ನು ರೂಪಿಸುತ್ತಾ ಬರುತ್ತಿದೆ. ವಿಚಾರ ಸಂಕಿರಣ, ಜಾಗೃತಿ ಜಾಥಾ, ಚಿತ್ರ ಕಲಾ ಶಿಬಿರ, ಗಾಂಧೀ ಪ್ರಿಯ ಗೀತೆಗಳ ಗಾಯನ ಮುಂತಾದವುಗಳ ಮೂಲಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಗಾಂಧಿ ಜಯಂತಿಯನ್ನು ವಿಶಿಷ್ಟವಾಗಿ ಆಚರಿಸಲಾಗಿದೆ. ಇಲಾಖೆಯ ಆವರಣದಲ್ಲಿ ಅರಳಿರುವ **"ಗಾಂಧಿ ಅಂಗಳ"**, ಪತ್ರಕರ್ತರೂ ಆಗಿದ್ದ ಗಾಂಧಿಯವರ ಪ್ರತಿಬಿಂಬವಾಗಿದೆ.

ಗಾಂಧೀಜಿ ಮತ್ತು ಅವರ ಸಂದೇಶಗಳನ್ನು ಕುರಿತು ಹಲವಾರು ಪ್ರಕಟಣೆಗಳನ್ನು ಹೊರತರಲಾಗಿದೆ. ಗಾಂಧೀಜಿ ಕರ್ನಾಟಕಕ್ಕೆ ಪ್ರಥಮ ಭೇಟಿ ನೀಡಿ 100 ವರ್ಷಗಳು ಸಂದ ಹಿನ್ನೆಲೆಯಲ್ಲಿ 2015 ರಲ್ಲಿ ಈ ಭೇಟಿಯ ಶತಮಾನೋತ್ಸವವನ್ನು ಆಚರಿಸಲಾಗಿದೆ. ಬೆಂಗಳೂರಿನ ಗಾಂಧಿಭವನದಲ್ಲಿ **"ಗಾಂಧೀ ಕರ್ನಾಟಕ"** ಹೆಸರಿನ ಛಾಯಾಚಿತ್ರ ಪ್ರದರ್ಶನವನ್ನು ಸಜ್ಜುಗೊಳಿಸಲಾಗಿದೆ.

ಯುವ ಪೀಳಿಗೆಯ ಮನದಲ್ಲಿ ಗಾಂಧೀಜಿ ತತ್ವ ಚಿಂತನೆಗಳನ್ನು ಬಿತ್ತುವ ನಿಟ್ಟಿನಲ್ಲಿ ವಿದ್ಯಾರ್ಥಿ ಸಮೂಹವನ್ನು ಉದ್ದೇಶಿಸಿಯೇ ಹಲವು ಕಾರ್ಯಕ್ರಮಗಳನ್ನು ಆಯೋಜಿಸಿ ಅನುಷ್ಠಾನಗೊಳಿಸಲಾಗಿದೆ. **"ಕಲಾವಿದರು ಕಂಡಂತೆ ಗಾಂಧೀ"** ಚಿತ್ರ ಶಿಬಿರವನ್ನು ಆಯೋಜಿಸಿ ಗಾಂಧೀ ಎಂಬ ಮಹಾನ್ ದರ್ಶನದ ಹಲವು ಆಯಾಮಗಳನ್ನು ಹಿಡಿಯುವ ಯತ್ನ ಮಾಡಿದೆ. **"ಗಾಂಧೀಜಿ ಕನಸು – ಕರ್ನಾಟಕದಲ್ಲಿ ನನಸು"** ಎನ್ನುವ ಪ್ರಚಾರಾಂದೋಲನವನ್ನು ಕಳೆದ ವರ್ಷ ಆಯೋಜಿಸಲಾಗಿತ್ತು. ಕಳೆದ ಮೂರು ವರ್ಷಗಳಿಂದ ಇಲಾಖೆಯ **"ಜನಪದ"** ಮತ್ತು **"ಮಾರ್ಚ್ ಆಫ್ ಕರ್ನಾಟಕ"** ಮಾಸಿಕಗಳ ಅಕ್ಟೋಬರ್ ಸಂಚಿಕೆಯನ್ನು ಗಾಂಧೀ ವಿಶೇಷ ಸಂಚಿಕೆಗಳನ್ನಾಗಿ ರೂಪಿಸಿ ಹೊರತರಲಾಗಿದೆ.



▲ ಬೆಂಗಳೂರಿನ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ 'ಗಾಂಧಿ ಅಂಗಳ'ದಲ್ಲಿ ಸ್ಥಾಪಿಸಿರುವ ಗಾಂಧಿ ಪ್ರತಿಮೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2015ರ ಅಕ್ಟೋಬರ್ 2ರಂದು ಅನಾವರಣಗೊಳಿಸಿದರು.



▲ ಗಾಂಧೀಜಿಯವರ ಬದುಕಿನ ವಿವಿಧ ಘಟ್ಟಗಳ ಛಾಯಾಚಿತ್ರ ಪ್ರದರ್ಶನ




▲ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ಡಾ॥ ಹೋ. ಶ್ರೀನಿವಾಸಯ್ಯ ಅವರಿಗೆ ಮಹಾತ್ಮಾ ಗಾಂಧೀಜಿ ಸೇವಾ ಪ್ರಶಸ್ತಿ (2015) ನೀಡಿ ಗೌರವಿಸಲಾಯಿತು.

**ಗಾಂಧೀಜಿಯವರ ಜೀವನದ ಉಸಿರಾಗಿದ್ದ ಗ್ರಾಮೀಣಾಭಿವೃದ್ಧಿ ಪರಿಕಲ್ಪನೆಯನ್ನು ರಾಜ್ಯ ಸರ್ಕಾರದ ಗ್ರಾಮೀಣಾಭಿವೃದ್ಧಿ ಇಲಾಖೆ ಕೂಡ ಪ್ರಯತ್ನ ಪೂರ್ವಕವಾಗಿ ಸಾಕಾರಗೊಳಿಸಿ ತನ್ನ ಯೋಜನೆಗಳಿಗೆ ಗಾಂಧೀಜಿಯ ಚಿಂತನೆಯ ಮೆರಗನ್ನು ನೀಡುತ್ತಿದೆ. ಗ್ರಾಮೀಣಾಭಿವೃದ್ಧಿ ಸಚಿವರಾದ ಹೆಚ್.ಕೆ. ಪಾಟೀಲ್‌ರವರು ಇಲಾಖೆಯ ಕಾರ್ಯಚಟುವಟಿಕೆಗಳಿಗೆ ಗಾಂಧೀಜಿಯವರ ಹೆಸರನ್ನು ಜೋಡಿಸಿ ಜನರ ಬಳಿಗೆ ತೆಗೆದುಕೊಂಡು ಹೋಗಿದ್ದಾರೆ. ಅತ್ಯುತ್ತಮ ಸಾಧನೆ ಮಾಡುವ ಗ್ರಾಮ ಪಂಚಾಯತ್‌ಗಳಿಗೆ ಪ್ರತೀ ವರ್ಷ ಅಕ್ಟೋಬರ್ 2 ರ ಗಾಂಧೀ ಜಯಂತಿಯಂದು "ಮಹಾತ್ಮ ಗಾಂಧೀಜಿ ಪುರಸ್ಕಾರ" ನೀಡುವ ಪದ್ಧತಿ ಆರಂಭವಾಗಿದೆ. ಜನಸಾಮಾನ್ಯರಿಗೆ ಅತ್ಯಗತ್ಯವಾದ ನೂರು ಸೇವೆಗಳನ್ನು ಒಂದೇ ಸೂರಿನಡಿ ನೀಡುವ "ಬಾಪೂಜಿ" ಹೆಸರಿನ ಸಾವಿರ ಸೇವಾ ಕೇಂದ್ರಗಳು ಕರ್ನಾಟಕದಲ್ಲಿ ಕಣ್ತೆರೆದಿವೆ. ಹೀಗೆ ಗಾಂಧೀಜಿಯವರ ಹೆಸರಿನ ಚಟುವಟಿಕೆಗಳು ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ವಿಸ್ತೃತ ರೂಪ ಪಡೆದುಕೊಳ್ಳುತ್ತಿವೆ.**

ವಾರ್ತಾ ಇಲಾಖೆಯ ಈ ಗಾಂಧಿ ಚಿಂತನೆಯ ಕಾರ್ಯಕ್ಕೆ ಸಾರ್ವಜನಿಕ ಮತ್ತು ಸರ್ಕಾರಿ ವಲಯದಿಂದ ಮೆಚ್ಚುಗೆಯ ಮಾತುಗಳು ಹರಿದು ಬರತೊಡಗಿದವು. ಇದರಿಂದ ಮತ್ತಷ್ಟು ಪ್ರೇರಣೆ ಪಡೆದ ಇಲಾಖೆ, 2014 ರಲ್ಲಿ ಮಹಾತ್ಮ ಗಾಂಧೀಜಿಯವರ ಚಿಂತನೆಗಳ ಹಾದಿಯಲ್ಲಿ ಬದುಕುತ್ತಿರುವ ಹಾಗೂ ಚಿಂತನೆಗಳನ್ನು ಜನರಿಗೆ ತಲುಪಿಸುತ್ತಿರುವ ಮಹನೀಯರನ್ನು ಗುರುತಿಸಿ ಅವರಿಗೆ "ಮಹಾತ್ಮ ಗಾಂಧೀಜಿ ಸೇವಾ ಪ್ರಶಸ್ತಿ"ಯನ್ನು ಸ್ಥಾಪಿಸಿ ರಾಜ್ಯದ ಗಮನ ಸೆಳೆಯಿತು. ಪ್ರಶಸ್ತಿ ಸ್ಥಾಪನೆಯಾದ ಪ್ರಥಮ ವರ್ಷ ಗಾಂಧೀಜಿಯವರ ಸರ್ವೋದಯ ಚಟುವಟಿಕೆಗಳನ್ನು ಜಗತ್ತಿನಾದ್ಯಂತ ಪರಿಚಯಿಸುತ್ತಿರುವ ಕರ್ನಾಟಕದವರೇ ಆದ ಎಸ್.ಎನ್. ಸುಬ್ಬರಾವ್ ಇವರಿಗೆ ನೀಡಿ ಸನ್ಮಾನಿಸಿತು. ಈ ಪ್ರಶಸ್ತಿಯನ್ನು 2015 ರಲ್ಲಿ ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷರಾಗಿರುವ ಹೋ. ಶ್ರೀನಿವಾಸಯ್ಯನವರಿಗೆ ನೀಡಲಾಯಿತು. ಕರ್ನಾಟಕ ಸರ್ಕಾರದ ಈ ಗಾಂಧೀ ನಡೆಗಳು ಅಲ್ಪಕಾಲದಲ್ಲಿಯೇ ರಾಷ್ಟ್ರದ ಗಮನ ಸೆಳೆಯಿತು. ಗಾಂಧೀಜಿ ಹುಟ್ಟಿದ ರಾಜ್ಯ ಗುಜರಾತ್‌ನಲ್ಲಿಯೇ ನಡೆಯದಿರುವಷ್ಟು ಚಟುವಟಿಕೆಗಳು ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕದಲ್ಲಿ ನಡೆಯುತ್ತಾ, ಗಾಂಧೀಜಿಯವರ ಅನುಯಾಯಿಗಳು ಮತ್ತು ಗಾಂಧೀ ಪ್ರಣೀತ ಸಂಘ ಸಂಸ್ಥೆಗಳ ವಲಯದಲ್ಲಿ ಬಹುದೊಡ್ಡ ಸುದ್ದಿಯಾಗಿ ಬೃಹತ್ ಸಂಚಲನವನ್ನೇ ಮೂಡಿಸಿದೆ.

ಕರ್ನಾಟಕ ಸರ್ಕಾರದ ಈ ಗಾಂಧೀ ನಡೆಗಳಿಗೆಲ್ಲ ಕಲಶವಿಟ್ಟಂತೆ ಸಮಾಜವಾದಿ ಸಿದ್ಧಾಂತಗಳಲ್ಲಿ ನಂಬಿಕೆಯಿಟ್ಟಿರುವ ಹಾಗೂ ಗಾಂಧೀಜಿ ವಿಚಾರಗಳಲ್ಲಿ ವಿಶ್ವಾಸ ಹೊಂದಿರುವ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಮ್ಮ 2016–17 ನೇ ಸಾಲಿನ ಆಯವ್ಯಯದಲ್ಲಿ **"ಮಹಾತ್ಮ ಗಾಂಧೀಯವರ ವಿಚಾರಧಾರೆಗಳನ್ನು ಪ್ರಚುರಪಡಿಸಲು ಅನುಕೂಲವಾಗುವಂತೆ ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ತಲಾ 3 ಕೋಟಿ ರೂ. ವೆಚ್ಚದಲ್ಲಿ ಮುಂದಿನ 2 ವರ್ಷಗಳಲ್ಲಿ ಗಾಂಧೀ ಭವನಗಳನ್ನು ನಿರ್ಮಿಸಲಾಗುವುದು"** ಎಂದು ಘೋಷಿಸಿದರು. ಈ ಸಂಬಂಧ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಾಡಿನ ಆಯ್ದ ಗಾಂಧೀವಾದಿಗಳು ಹಾಗೂ ಸಮಾಜ ಚಿಂತಕರ ಸಭೆಯೂ ಕೂಡ ನಡೆದಿದೆ. ಕರ್ನಾಟಕದಲ್ಲಿ ಗಾಂಧೀಜಿಯ ಕನಸುಗಳನ್ನು ನನಸು ಮಾಡುವ ನಿಟ್ಟಿನಲ್ಲಿ ಸರ್ಕಾರ ದಿಟ್ಟ ಹೆಜ್ಜೆಗಳನ್ನಿಡುತ್ತಿದೆ.




**ಕರ್ನಾಟಕದಲ್ಲಿ ಗಾಂಧೀಜಿಯವರ ಚಿಂತನೆಗಳನ್ನು ರಚನಾತ್ಮಕ ಕಾರ್ಯಚಟುವಟಿಕೆಗಳ ಮೂಲಕ ಉದ್ದೀಪನಗೊಳಿಸುವ ಕಾರ್ಯದಲ್ಲಿ ನಿರತರಾಗಿರುವ ಹಿರಿಯ ರಂಗಕರ್ಮಿ ಹಾಗೂ ಚಿಂತಕ ಪ್ರಸನ್ನರವರು ಅಕ್ಟೋಬರ್ ತಿಂಗಳ ಜನಪದ ಸಂಚಿಕೆಯನ್ನು ಗೌರವ ಸಂಪಾದಕರಾಗಿ ನಿರೂಪಿಸಿದ್ದಾರೆ. ಈ ಸಂದರ್ಭದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಅವರನ್ನು ಅಭಿನಂದಿಸುತ್ತದೆ.**





# ರಚನಾತ್ಮಕ ಕಾರ್ಯಕ್ರಮವೆಂಬುದು ನಾಯಕತ್ವ ತರಬೇತಿ ಕಾರ್ಯಕ್ರಮವೇ ಆಗಿದೆ !

ಪ್ರಸನ್ನ
ಗೌರವ ಸಂಪಾದಕರು



> ಸರಕಾರಗಳು ಕಾನೂನುಗಳನ್ನು ಮಾಡುತ್ತವೆ. ತಾವು ಮಾಡಿದ ಕಾನೂನುಗಳು ಉತ್ತಮ ಫಲ ನೀಡಲಿ ಎಂದು ಅಪೇಕ್ಷಿಸುತ್ತವೆ. ಸರಕಾರಿ ಕೆಲಸಗಳು ನಿರೀಕ್ಷಿತ ಫಲ ನೀಡಬೇಕೆಂದರೆ ಸರಕಾರಿ ಕೆಲಸದೊಟ್ಟಿಗೆ ಮತ್ತೊಂದು ಮಹತ್ವದ ಕೆಲಸವು ಸಮಾಜದೊಳಗೆ ನಡೆಯುತ್ತಿರಬೇಕಾಗುತ್ತದೆ. ಅದುವೇ ರಚನಾತ್ಮಕ ಕಾರ್ಯಕ್ರಮ.

ರಚನಾತ್ಮಕ ಕಾರ್ಯಕ್ರಮವನ್ನು ಇತರೆ ಹೆಸರುಗಳಿಂದಲೂ ಕರೆಯುವ ವಾಡಿಕೆಯಿದೆ; ಜನಸೇವೆ ದೀನದಲಿತರ ಸೇವೆ ಜನತಾಜನಾರ್ಧನ ಸೇವೆ ಎಂಬಿತ್ಯಾದಿ ಹೆಸರುಗಳಿಂದಲೂ ಕರೆಯುವ ವಾಡಿಕೆಯಿದೆ. ಜನತಾಜನಾರ್ಧನ ಸೇವೆಯನ್ನು, ಸ್ವಾತಂತ್ರ್ಯ ಸಂಗ್ರಾಮವೆಂಬ ಪ್ರಯೋಗಶಾಲೆಯಲ್ಲಿ, ರಾಜಕೀಯ ಹಕ್ಕೊತ್ತಾಯ ಹೋರಾಟದ ಜೊತೆ ಜೊತೆಯಾಗಿ ಪ್ರಯೋಗಿಸುವ ಮೂಲಕ ಗಾಂಧೀಜಿ ಅದಕ್ಕೆ ಒಂದು ನಿರ್ದಿಷ್ಟ ರಾಜಕೀಯ ಆಯಾಮವನ್ನು ಒದಗಿಸಿದರು ಹಾಗೂ, ರಚನಾತ್ಮಕ ಕಾರ್ಯಕ್ರಮಗಳನ್ನು ನಾಯಕತ್ವ ತರಬೇತಿಯ ಯಶಸ್ವಿ ತಂತ್ರವಾಗಿ ಅಭಿವೃದ್ಧಿ ಪಡಿಸಿದರು.

ಸ್ವಾತಂತ್ರ್ಯ ಚಳುವಳಿಯ ಆರಂಭದ ದಿನಗಳವು. ದೀನದಲಿತರ ಪರವಾಗಿ ನಾಯಕತ್ವ ನೀಡಬೇಕಿದ್ದ ಉಳ್ಳವರಿಗೆ ದೀನದಲಿತರ ಪರಿಚಯವೇ ಇರಲಿಲ್ಲ, ದೀನದಲಿತರು ಭಾಗವಹಿಸದೆ ಸ್ವಾತಂತ್ರ್ಯ ಚಳುವಳಿ ಯಶಸ್ವಿಯಾಗುವ ಸಾಧ್ಯತೆಯೂ ಇರಲಿಲ್ಲ. ಸ್ವಾತಂತ್ರ್ಯ ಚಳುವಳಿಯೆಂಬುದು, ಮೇಲ್ಜಾತಿ ಮೇಲ್ವರ್ಗಗಳ 'ಲಾಯರಿಗಳ' ಸೀಮಿತ ಚಳುವಳಿಯಾಗಿದೆ ಎಂದು ಅರ್ಥಮಾಡಿಕೊಂಡ ಗಾಂಧೀಜಿಯವರು ರಚನಾತ್ಮಕ ಕಾರ್ಯಕ್ರಮಗಳನ್ನು ಸ್ವಾತಂತ್ರ್ಯ ಸಂಗ್ರಾಮದ ಅವಿಭಾಜ್ಯ ಅಂಗವಾಗಿಸಿದರು. ರಾಷ್ಟ್ರೀಯ ಶಿಕ್ಷಣ, ಆರೋಗ್ಯ, ನೈರ್ಮಲ್ಯ, ಸಾಮಾಜಿಕ ವಿಷಮತೆಗಳ ನಿವಾರಣೆ, ಮಾದಕವಸ್ತು ಹವ್ಯಾಸ ನಿವಾರಣೆ, ಖಾದಿನೂಲುವುದು, ಕೈಮಗ್ಗ ಬಟ್ಟೆ ನೇಯುವುದು, ಕರಕುಶಲ ವಸ್ತುಗಳಾದ ಪಾದರಕ್ಷೆ ಮಡಕೆ ಕುಡಿಕೆ ಮರದ ಸಾಮಾನು ಹಾಗೂ ಲೋಹ ಪದಾರ್ಥಗಳ ಉತ್ಪಾದನೆ, ಉತ್ಪಾದನಾ ತರಬೇತಿ, ಗ್ರಾಮೀಣ ಉತ್ಪಾದನಾ ಸಂಸ್ಥೆಗಳ ಸ್ಥಾಪನೆ, ನಾಯಕತ್ವ ತರಬೇತಿ, ಎಲ್ಲವೂ ರಚನಾತ್ಮಕ



ವ್ಯಕ್ತಿತ್ವ ವಿಕಾಸ ಹಾಗೂ ನಾಯಕತ್ವ ತರಬೇತಿ ಕಾರ್ಯಕ್ರಮವು ಗಾಂಧೀಜಿಯವರಿಗೆ ಅದೆಷ್ಟು ಮಹತ್ವದ ಸಂಗತಿಯಾಗಿತ್ತೆಂದರೆ, ಒಂದೊಮ್ಮೆ ಸ್ವಾತಂತ್ರ್ಯ ಸಿಕ್ಕುವುದು ಕೊಂಚ ತಡವಾದರೂ ಅಡ್ಡಿಯಿಲ್ಲ, ಮೊದಲು ತರಬೇತಿ ನಡೆಯಲಿ ಎಂದವರು ಹಟ ಹಿಡಿಯುತ್ತಿದ್ದುದುಂಟು.

ಕಾರ್ಯಕ್ರಮಗಳಾಗಿ ಸ್ವಾತಂತ್ರ್ಯ ಚಳುವಳಿಯನ್ನು ಸೇರಿಕೊಂಡವು.

ಸ್ವಾತಂತ್ರ್ಯಾ ನಂತರದಲ್ಲಿ ಪರಿಸ್ಥಿತಿ ಬದಲಾಯಿತು. ಈ ಎಲ್ಲ ಕಾರ್ಯಕ್ರಮಗಳೂ ಸರಕಾರಿ ಕಾರ್ಯಕ್ರಮಗಳಾದುವು. ರಚನಾತ್ಮಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದೆಂದರೆ, ಸರಕಾರಿ ಕೆಲಸದಲ್ಲಿ ಭಾಗವಹಿಸುವುದು, ಮಂತ್ರಿಯೋ ಅಧಿಕಾರಿಯೋ ಆಗುವುದು, ಕಾನೂನು ಮಾಡುವುದು, ಹಣ ಬಿಡುಗಡೆ ಮಾಡುವುದು ಮಾತ್ರ ಎಂಬ ತಪ್ಪು ಕಲ್ಪನೆ ನಮ್ಮಲ್ಲಿ ಬೇರೂರಿತು. ನಾವೇ ನಮ್ಮನ್ನು ಆಳಿಕೊಳ್ಳುತ್ತಿರುವ ಸಂದರ್ಭದಲ್ಲಿ, ಸಮಾಜ ಕಾರ್ಯದಲ್ಲಿ ಪ್ರಜೆಗಳು ರಚನಾತ್ಮಕವಾಗಿ ಭಾಗವಹಿಸುವಂತೆ ಮಾಡುವುದು ಹೇಗೆ ಎಂಬುದು ಇಂದಿನ ಸಮಸ್ಯೆಯಾಗಿತ್ತು. ಗಾಂಧೀಜಿಯವರಲ್ಲಿ ನಾವಿಂದು ಉತ್ತರ ಹುಡಕಬೇಕಿದೆ.

ಗಾಂಧೀಜಿಯವರ ಪ್ರಕಾರ ರಚನಾತ್ಮಕ ಕಾರ್ಯಕ್ರಮವು ಅಧಿಕಾರ ರಹಿತವಾದ ಕಾರ್ಯಕ್ರಮ, ನಿಸ್ವಾರ್ಥ ಸೇವೆಯ ಕಾರ್ಯಕ್ರಮ. ಅಧಿಕಾರವನ್ನು ನಿರ್ವಹಿಸಬೇಕಾಗಿರುವ ವ್ಯಕ್ತಿಯೂ ಸಹ ಅಧಿಕಾರ ರಹಿತನಾಗಿ ರಚನಾತ್ಮಕ ಚಳುವಳಿಯಲ್ಲಿ ಭಾಗವಹಿಸಬೇಕು. ಹೀಗೆ ಭಾಗವಹಿಸುವ ಮೂಲಕವೇ ನಾಯಕತ್ವ ತರಬೇತಿ ಪಡೆಯಬೇಕು. ಜೊತೆಗೆ, ಈ ದೇಶದ ಕೋಟ್ಯಾಂತರ ಪ್ರಜೆಗಳೂ ತರಬೇತಿ ಪಡೆಯಬೇಕು ಎಂಬುದು ಗಾಂಧೀಜಿಯವರು ಹಾಕಿಕೊಟ್ಟ ಮಾರ್ಗ. ಈ ಬಾರಿಯ ಜನಪದವು ರಚನಾತ್ಮಕ ಕಾರ್ಯಕ್ರಮವನ್ನು ಕುರಿತಾದ ವಿಶೇಷಾಂಕವಾಗಿದೆ.

ವ್ಯಕ್ತಿತ್ವ ವಿಕಾಸ ಹಾಗೂ ನಾಯಕತ್ವ ತರಬೇತಿ ಕಾರ್ಯಕ್ರಮವು ಗಾಂಧೀಜಿಯವರಿಗೆ ಅದೆಷ್ಟು ಮಹತ್ವದ ಸಂಗತಿಯಾಗಿತ್ತೆಂದರೆ, ಒಂದೊಮ್ಮೆ ಸ್ವಾತಂತ್ರ್ಯ ಸಿಕ್ಕುವುದು ಕೊಂಚ ತಡವಾದರೂ ಅಡ್ಡಿಯಿಲ್ಲ, ಮೊದಲು ತರಬೇತಿ ನಡೆಯಲಿ ಎಂದವರು ಹಟ ಹಿಡಿಯುತ್ತಿದ್ದುದುಂಟು. ನಾವಿಂದು ಅದೇ ರೀತಿ ಹಟ ಹಿಡಿಯಬೇಕಿದೆ. ರಾಜ್ಯ ಆಳುವ ಕೆಲಸ ಕೊಂಚ ಹಿಂದೆ ಬಿದ್ದರೂ ಅಡ್ಡಿಯಿಲ್ಲ, ರಚನಾತ್ಮಕ ಸಾಮಾಜಿಕ ಚಳುವಳಿಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ನಾಯಕರುಗಳು ಆಳುವ ಅರ್ಹತೆ ಪಡೆದುಕೊಳ್ಳಬೇಕು, ಹಾಗೂ ಪ್ರಜೆಗಳು ಸಾಮಾಜಿಕರಾಗುವ ತರಬೇತಿ ಪಡೆದುಕೊಳ್ಳಬೇಕು ಎಂದು ಹಟ ಹಿಡಿಯಬೇಕಿದೆ. ರಾಜಕೀಯ ನಾಯಕರು, ಧಾರ್ಮಿಕ ನಾಯಕರು, ಅಧಿಕಾರಿಗಳು, ವ್ಯಾಪಾರಿಗಳು, ಪ್ರಜೆಗಳು ಎಲ್ಲರಿಗೂ, ಗಾಂಧೀಜಿಯವರು ವಿಧಿಸಿರುವ ಸಾಮಾಜಿಕ ಬಾಧ್ಯಸ್ಥಿಕೆಯ ಈ ಶಿಸ್ತು ಅನ್ವಯವಾಗುತ್ತದೆ.

ಸರಕಾರದ ಕಾರ್ಯಕ್ರಮಗಳು, ಪ್ರಜೆಗಳಿಗೆ ಮುಖ್ಯವಾಗಿ ದೀನದಲಿತ ಪ್ರಜೆಗಳಿಗೆ ವಿವಿಧ ಬಗೆಯ ಹಕ್ಕುಗಳನ್ನು ನೀಡಿದರೆ, ರಚನಾತ್ಮಕ ಕಾರ್ಯಕ್ರಮಗಳು ಉಳ್ಳವರಿಗೆ ಸಾಮಾಜಿಕ ಬಾಧ್ಯತೆಯನ್ನು ಕಲಿಸಿಕೊಡುತ್ತದೆ. ಹಾಗಿದ್ದರೆ ದೀನದಲಿತರಿಗೆ ಬಾಧ್ಯತೆಗಳಿಲ್ಲವೇ? ಬಾಧ್ಯತೆಗಳಿವೆ, ಆದರದು ಚಾಲತಿಗೆ ಬರುವುದು ಸಮಾಜದ ಕಟ್ಟಕಡೆಯ ಸ್ಥಾನದಿಂದ ಅವರು ಮುಂದೆ ಬಂದಾಗ ಮಾತ್ರ. ಇದೇ ಮಾತನ್ನು ಗೌತಮ ಬುದ್ಧನು ಮತ್ತೊಂದು ರೀತಿಯಿಂದ ಹೇಳುತ್ತಾನೆ. 'ಹಸಿದವರಿಗೆ ಧರ್ಮಬೋಧಿಸಬೇಡ' ಎನ್ನುತ್ತಾನೆ ಬುದ್ಧ. ಸಮಾಜದ ಕಟ್ಟಕಡೆಯ ಪ್ರಜೆಯು, ಸರಕಾರದಿಂದ ತನಗೆ ದೊರಕುವ ಹಕ್ಕು



ಐಶಾರಾಮಿ ಬದುಕಿನ ಮೂಲಕ ದೀನದಲಿತರನ್ನು ದಿನನಿತ್ಯ ಅವಮಾನಗೊಳಿಸುತ್ತಿರುತ್ತೇವೆ ನಾವು. ರಚನಾತ್ಮಕ ಕಾರ್ಯಕರ್ತನೂ ಹೀಗೆಯೇ ಮಾಡಿದರೆ ಆತನ/ಆಕೆಯ ಕೆಲಸಗಳು ರಚನೆ ಕಳೆದುಕೊಂಡು ನಿರರ್ಥಕವಾಗುತ್ತದೆ ಎಂದವರು ನಂಬಿದ್ದರು. ತಾನೇ ಸರಳ ಬದುಕಿನ ಸೂತ್ರವನ್ನು ಅಳವಡಿಸಿಕೊಂಡು ಇತರರಿಗೆ ಮಾರ್ಗದರ್ಶನ ನೀಡುತ್ತಿದ್ದರು ಗಾಂಧೀಜಿ.

ಹಾಗೂ ಉಳ್ಳವರು ತನಗಾಗಿ ತೋರಿಸುವ ಬಾಧ್ಯಸ್ಥಿಕೆ ಇವುಗಳ ಜಂಟಿಕಾರ್ಯಾಚರಣೆಯ ಮೂಲಕ ಮಾತ್ರವೇ ಮುಂದೆ ಬರಬಲ್ಲನು, ಅಥವಾ ಬರಬಲ್ಲಳು. ಮುಂದೆ ಬಂದ ನಂತರ ಮಾತ್ರವೇ ಆತ/ಆಕೆಗೆ ತನಗಿಂತ ಹಿಂದುಳಿದ ಪ್ರಜೆಗಳ ಬಗ್ಗೆ ಬಾಧ್ಯಸ್ಥಿಕೆ ಶುರುವಾಗುತ್ತದೆ. ಇನ್ನೂ ಸರಳವಾಗಿ ಹೇಳುವುದಾದರೆ, ಅಂಬೇಡ್ಕರ್ ರೂಪಿಸಿರುವ ರಾಜ್ಯಾಂಗ ಹಾಗೂ ಗಾಂಧೀಜಿ ರೂಪಿಸಿರುವ ಸಮಾಜಕಾರ್ಯ, ಇವುಗಳ ಸಮರ್ಥ ಹಾಗೂ ಸಂಯುಕ್ತ ನಿರ್ವಹಣೆಯ ಮೂಲಕ ಮಾತ್ರವೇ ನಾವು ದೇಶ ಕಟ್ಟಬಹುದಾಗಿದೆ.

**ಸರಳ ಬದುಕಿನ ಶಿಸ್ತು**

ದೀನದಲಿತರ ಸೇವೆಯನ್ನು ಹೇಗೆ ಮಾಡಬೇಕೆಂಬ ಬಗೆಗೆ, ರಚನಾತ್ಮಕ ಕಾರ್ಯಕರ್ತರಿಗೆ, ಗಾಂಧೀಜಿ ಮಹತ್ವದ ನಿರ್ದೇಶನವೊಂದನ್ನು ನೀಡುತ್ತಾರೆ: ಸರಳವಾಗಿ ಬದುಕು ಎನ್ನುತ್ತಾರೆ. ಸರಳವಾಗಿ ಏಕೆ ಬದುಕಬೇಕು? ಐಶಾರಾಮಿ ಬದುಕಿನ ಮೂಲಕ ದೀನದಲಿತರನ್ನು ದಿನನಿತ್ಯ ಅವಮಾನಗೊಳಿಸುತ್ತಿರುತ್ತೇವೆ ನಾವು. ರಚನಾತ್ಮಕ ಕಾರ್ಯಕರ್ತನೂ ಹೀಗೆಯೇ ಮಾಡಿದರೆ ಆತನ/ಆಕೆಯ ಕೆಲಸಗಳು ರಚನೆ ಕಳೆದುಕೊಂಡು



ನಿರರ್ಥಕವಾಗುತ್ತದೆ ಎಂದವರು ನಂಬಿದ್ದರು. ತಾನೇ ಸರಳ ಬದುಕಿನ ಸೂತ್ರವನ್ನು ಅಳವಡಿಸಿಕೊಂಡು ಇತರರಿಗೆ ಮಾರ್ಗದರ್ಶನ ನೀಡುತ್ತಿದ್ದರು ಗಾಂಧೀಜಿ.

**ಹಸಿವೆ ಇಂಗಿಸಿದರೆ ಸಾಕೆ?**

ಸರಕಾರಿ ಕಾರ್ಯಕ್ರಮಗಳ ಮೂಲಕ ದೀನದಲಿತರ ಹಸಿವೆ ಇಂಗಿಸಿದರೆ ಸಾಲದು, ದೀನದಲಿತರ ಗೌರವ ಘನತೆ ಹಾಗೂ ಕರ್ತೃತ್ವ ಶಕ್ತಿಗಳು ಅವರಿಗೆ ದಕ್ಕುವಂತೆ ಮಾಡುವುದೇ ರಚನಾತ್ಮಕ ಚಳುವಳಿ ಎಂದು ಗಾಂಧೀಜಿ ಆಶಿಸಿದ್ದರು. ಗಾಂಧೀಜಿಯವರ ಈ ಆಶಯವನ್ನು ಸರಿಯಾಗಿ ಅರ್ಥಮಾಡಿಕೊಳ್ಳುವ ಅಗತ್ಯವಿದೆ. ಸಮಾಜಕಾರ್ಯವೆಂಬುದು ಸರಕಾರಿ ಕಾರ್ಯಕ್ರಮ ಮಾತ್ರವೇ ಆದಾಗ ಬಡವರು ಭಿಕ್ಷುಕರಾಗುವುದು, ಅಧಿಕಾರಸ್ಥರು ಅಹಂಕಾರಿಗಳಾಗುವುದು ಅನಿವಾರ್ಯವಾಗುತ್ತದೆ.

ಇಂದು ಆಗುತ್ತಿರುವುದು ಇದೇ ಆಗಿದೆ. ಮಾತ್ರವಲ್ಲ, ಬಡವ ಬಲ್ಲಿದರ ನಡುವಣ ಅಂತರ ದಿನೇ ದಿನೇ ಹೆಚ್ಚುತ್ತಿದೆ. ಉದ್ಯೋಗ ಸೃಷ್ಟಿಗಿಂತ ಮಿಗಿಲಾಗಿ ಸಂಪತ್ತಿನ ಸೃಷ್ಟಿಗೆ ನಾವು ಆದ್ಯತೆ ನೀಡುತ್ತಿದ್ದೇವೆ. ಬಡವರನ್ನು ಸ್ವಯಂಉದ್ಯೋಗಿಗಳನ್ನಾಗಿ ಮಾಡುವ ಗಂಭೀರ ಪ್ರಯತ್ನ ನಡೆಸಿದರು ಗಾಂಧೀಜಿ. ಬಡವರು ಶ್ರಮದ ದುಡಿಮೆಯ ಮೂಲಕವೇ ಸಂಪತ್ತಿನ ಸೃಷ್ಟಿ ಮಾಡಬಲ್ಲರು, ಅಂತಹ ಸಂಪತ್ತು ತಾರತಮ್ಯವನ್ನು ನಿವಾರಿಸಬಲ್ಲದು, ರಚನಾತ್ಮಕ ಚಳುವಳಿಯೇ ತಾರತಮ್ಯರಹಿತವಾದ ಉತ್ಪಾದನಾ ವ್ಯವಸ್ಥೆಯನ್ನು ನಿರ್ಮಿಸಬಲ್ಲದು ಎಂದು ಗಾಂಧೀಜಿ ನಂಬಿದ್ದರು. ರಚನಾತ್ಮಕ ಚಳುವಳಿ ಕೇವಲ ದಾನಧರ್ಮ ಮಾಡುವ ಕಾರ್ಯಕ್ರಮವಲ್ಲ, ಉದ್ಯೋಗ ಸೃಷ್ಟಿಯ ಮೂಲಕ ಬಡತನ ನಿರ್ಮೂಲನೆ ಮಾಡುವ ಕಾರ್ಯಕ್ರಮವೂ ಹೌದು ಎಂದವರು ನಂಬಿದ್ದರು.

**ಭ್ರಷ್ಟತೆಯ ಸಮಸ್ಯೆ**

ಸರಕಾರದ ಅಮೂಲ್ಯ ಸಂಪನ್ಮೂಲಗಳು ಭ್ರಷ್ಟತೆಯ ರೂಪದಲ್ಲಿ ಸೋರಿಹೋಗಬಾರದೆಂದರೆ ರಚನಾತ್ಮಕ ಚಳುವಳಿ ಬೇಕೇ ಬೇಕು. ರಾಜಕೀಯ ಆಶಯಗಳಿಗೆ ಪೂರಕವಾದ ಸಾಮಾಜಿಕ ಆಕಾರ ದೊರೆಯಬೇಕೆಂದರೆ ರಚನಾತ್ಮಕ ಚಳುವಳಿ ಬೇಕೇ ಬೇಕು, ಪ್ರವಾದಿಯೇ ಬೆಟ್ಟಕ್ಕೆ ಬರಲಿ ಎಂದು ಕಾಯುತ್ತ ಕೂರುವ ಬದಲು ಬೆಟ್ಟವೇ ಪ್ರವಾದಿಯತ್ತ ಬರುವಂತೆ ಮಾಡಲಿಕ್ಕೆ ರಚನಾತ್ಮಕ ಚಳುವಳಿ ಬೇಕೇ ಬೇಕು. ಕಾನೂನು ಪ್ರವಾದಿ ಎನ್ನುವುದಾದರೆ ದೀನದಲಿತರು ಚಲಿಸದೆ ನಿಂತಿರುವ ಬೆಟ್ಟವಿದ್ದಂತೆ. ರಚನಾತ್ಮಕ ಕೆಲಸಗಳು ಮಾತ್ರವೇ ಬೆಟ್ಟ ಚಲಿಸುವಂತೆ ಮಾಡಬಲ್ಲದು.

ರಚನಾತ್ಮಕ ಕಾರ್ಯಕ್ರಮ ಸರಕಾರಿ ಕಾರ್ಯಕ್ರಮವಾಗಲಿಕ್ಕೆ ಸಾಧ್ಯವಿಲ್ಲ, ಮಾತ್ರವಲ್ಲ, ಪಕ್ಷರಾಜಕಾರಣದ ಭಾಗವಾಗುವುದು ಕೂಡಾ ಸಾಧುವಲ್ಲ. ಹಾಗೆಂದ ಮಾತ್ರಕ್ಕೆ, ರಚನಾತ್ಮಕ ಕಾರ್ಯಕ್ರಮವು ಆಡಳಿತ ವಿರೋಧಿ ಅಥವಾ ಪಕ್ಷವಿರೋಧಿ ಕಾರ್ಯಕ್ರಮವಾಗಬೇಕಿಲ್ಲ. ರಚನಾತ್ಮಕ ಕಾರ್ಯಕ್ರಮಗಳು ಸಮರ್ಥವಾಗಿ ನಡೆದಾಗ ಉಂಟಾಗುವ ಸಾಮಾಜಿಕ ಅರಿವೆಂಬುದು ಜನತೆಯ ಸಂಯುಕ್ತ ಧ್ವನಿಯಾಗುತ್ತದೆ. ಸರಕಾರಗಳು ದಾರಿತಪ್ಪದಂತೆ ನೋಡಿಕೊಳ್ಳುತ್ತದೆ. ಆದರೆ ರಚನಾತ್ಮಕ ಚಳುವಳಿಯ ಅನುಪಸ್ಥಿತಿಯಲ್ಲಿ, ಪ್ರಜಾಪ್ರಭುತ್ವ ವ್ಯವಸ್ಥೆಯೆಂಬುದು, ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷಗಳ ನಡುವಣ ಕೆಸರೆರಚಾಟದ ಪ್ರಹಸನ ಮಾತ್ರವೇ ಆಗಬಲ್ಲುದಾಗಿದೆ.

ರಾಜಕಾರಣ ಹಾಗೂ ರಚನಾತ್ಮಕ ಕಾರ್ಯಕ್ರಮಗಳ ನಡುವಣ ಸಂಬಂಧವನ್ನು ಗಾಂಧೀಜಿ ನಿರ್ವಹಿಸುತ್ತಿದ್ದ ರೀತಿ ಅನನ್ಯವಾದದ್ದು. ನಾಟಕಗಳಲ್ಲಿ ದ್ವಿಪಾತ್ರ ನಿರ್ವಹಿಸುವ ನಟನಂತೆ ಅವರು ಎರಡೂ ಕ್ಷೇತ್ರಗಳಲ್ಲಿ ಇರುತ್ತಿದ್ದರು. ಎರಡೂ ಕ್ಷೇತ್ರಗಳಲ್ಲಿ ಇದ್ದುಕೊಂಡೂ, ರಾಜಕೀಯ ಕ್ಷೇತ್ರದ ಅವಸರ ಪ್ರವೃತ್ತಿ ಹಾಗೂ ಅತಿರೇಕದ ಒತ್ತಡಗಳು ಸೇವಾಕ್ಷೇತ್ರದ ಪ್ರಶಾಂತತೆಯನ್ನು ಕದಡದಂತೆ ಎಚ್ಚರ ವಹಿಸುತ್ತಿದ್ದರು. ರಚನಾತ್ಮಕ ಕಾರ್ಯವು ಗಾಂಧೀಜಿಯವರಿಗೆ, ಧ್ಯಾನ ನೀಡುವ ಎಲ್ಲ ಲಾಭಗಳನ್ನೂ ನೀಡುತ್ತಲೇ ಸಮಾಜದೊಟ್ಟಿಗೆ ಸಕ್ರಿಯ ಸಂಪರ್ಕವನ್ನೂಒದಗಿಸುತ್ತಿತ್ತು.

ಆದರೆ ಇಂದಿನ ಪರಿಸ್ಥಿತಿಯನ್ನು ಗಮನಿಸಿ; ಹಕ್ಕು ಹಂಚುವುದು ಹಾಗೂ ಹಕ್ಕುಗಳಿಗಾಗಿ ಹೋರಾಡುವುದು ಮಾತ್ರವೇ ಇಂದಿನ ನಾಯಕತ್ವದ ಲಕ್ಷಣಗಳಾಗಿವೆ.ಈ ಪರಿಸ್ಥಿತಿಯಿಂದ ಉಂಟಾಗಬಹುದಾದ ಸಹಜ ಅಹಂಕಾರವನ್ನು ಕಳೆದುಕೊಳ್ಳುವ ಸೂಕ್ತ ಮಾರ್ಗಗಳೇ ಇಲ್ಲದಂತಾಗಿದೆ. ಮಾತ್ರವಲ್ಲ, ಎಲ್ಲ ನಾಯಕರೂ ಉಳ್ಳವರೇ ಆಗುವುದು ಇಂದು ಅನಿವಾರ್ಯವಾಗಿದೆ. ಕೇವಲ ಉಳ್ಳವನಾಗಿ, ಅಥವಾ ಮೇಲ್ಜಾತಿಯವನಾಗಿ, ಸಮಾಜಕ್ಕೆ ಸಮರ್ಥನಾಯಕತ್ವ ನೀಡುವುದು ಸಾಧ್ಯವಿಲ್ಲ. ಕೆಳಜಾತಿ ಕೆಳವರ್ಗಗಳಿಂದ ಬಂದವರಿಗ 'ಇಂದು ನಾಯಕತ್ವ ತರಬೇತಿಯ ಬಹುದೊಡ್ಡ ಅಗತ್ಯವಿದೆ. ತರಬೇತಿ ವ್ಯವಸ್ಥೆ ಮಾತ್ರ ಮರೆಯಾಗಿದೆ. ಗ್ರಾಮೀಣ ಜನತೆಗೆ ನಗರ ವ್ಯವಸ್ಥೆಯ ಭಾಗವಾಗುವುದು, ಮಾರುಕಟ್ಟೆ ವ್ಯವಸ್ಥೆಯ ದಾಸರಾಗುವುದು, ಮಾತ್ರವೇ ನಾಯಕತ್ವ ತರಬೇತಿ ಎಂದು ತಿಳಿಸಲಾಗುತ್ತಿದೆ.

ಆದರೆ ಕಳಚಿಕೊಳ್ಳುವುದು ಸುಲಭವಲ್ಲ. ಇಂದಿನ ಅಬ್ಬರದ ಯಂತ್ರ ನಾಗರೀಕತೆಯ ಸಂದರ್ಭದಲ್ಲಿ ಸರಳಬದುಕನ್ನು ಅಳವಡಿಸಿಕೊಳ್ಳುವುದು, ಅಧಿಕಾರ ರಹಿತ ರಚನಾತ್ಮಕ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದು ಸುಲಭವಲ್ಲ. ಆದರೆ ಅಸಾಧ್ಯವೂ ಅಲ್ಲ. ಉಳ್ಳವರ ಅನಗತ್ಯ ಆತಂಕಗಳನ್ನು ರಚನಾತ್ಮಕ ಚಳುವಳಿ ನಿವಾರಿಸುತ್ತದೆ. ಉಳ್ಳವನಾಗುವುದೆಂದರೆ ಕೇವಲ ಹಣ ಗಳಿಸುವುದಲ್ಲ. ಸಮಾಜದ ಪ್ರೀತಿ ಗಳಿಸುವ ಪ್ರಕ್ರಿಯೆಯೂ ಹೌದು ಎಂದು ಅದು ಕಲಿಸುತ್ತದೆ.


**ಖಾದಿ, ಕೈಮಗ್ಗ**

ಗಾಂಧೀಜಿಯವರು ರಚನಾತ್ಮಕ ಕಾರ್ಯಕ್ರಮಗಳ ಪಟ್ಟಿಯಲ್ಲಿ ಖಾದಿ ನೂಲು ತೆಗೆಯುವ ಹಾಗೂ ಕೈಮಗ್ಗ ಬಟ್ಟೆ ನೇಯುವ ಕಾರ್ಯಕ್ರಮವನ್ನು ಅಗ್ರಗಣ್ಯವಾಗಿ ನಿಲ್ಲಿಸಿದರು. ಇದಕ್ಕೆ ಕಾರಣವಿದೆ. ಖಾದಿ ಹಾಗೂ ಕೈಮಗ್ಗಗಳು ಗ್ರಾಮೀಣ ಉದ್ಯೋಗ ಸೃಷ್ಟಿಯಲ್ಲಿ ಅಸಾಧಾರಣ ಸಾಧ್ಯತೆ ಹೊಂದಿವೆ. ಕೃಷಿಗೆ ಪೂರಕವಾಗಬಲ್ಲ, ಸಾಮಾಜಿಕ ಅಸಮಾನತೆ ತೊಲಗಿಸಬಲ್ಲ, ಹಾಗೂ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ, ಮೂರೂ ಅಗತ್ಯಗಳನ್ನು ಪೂರೈಸಬಲ್ಲ ರಾಷ್ಟ್ರೀಯ ವ್ಯಾಪ್ತಿಯ ಬೃಹತ್ ಕಾರ್ಯಕ್ರಮವಾಗಿದೆ ಇದು. ಈ ಮಾತು ಅಂದಿಗೆ ಮಾತ್ರವಲ್ಲ, ಇಂದಿಗೂ ಸತ್ಯವಾಗಿದೆ. ಆದರೂ ಖಾದಿ ಮತ್ತು ಕೈ ಮಗ್ಗಗಳು ಹಿಂದೆ ಬಿದ್ದಿವೆ. ಇದಕ್ಕೆ ಕಾರಣವೆಂದರೆ ಸ್ವಾತಂತ್ರ್ಯಾ ನಂತರದಲ್ಲಿ, ಮಿಕ್ಕೆಲ್ಲ ರಚನಾತ್ಮಕ ಕಾರ್ಯಕ್ರಮಗಳಂತೆಯೇ, ಖಾದಿ ಹಾಗೂ ಕೈಮಗ್ಗಗಳೂ ಸಹಿತ ಸರಕಾರಿ ಕಾರ್ಯಕ್ರಮಗಳಾದುವು. ಖಾದಿ ಹಾಗೂ ಕೈಮಗ್ಗ ಸಹಕಾರ ಸಂಘಗಳು ತಮ್ಮ ರಚನಾತ್ಮಕತೆಯನ್ನು ಕಳೆದುಕೊಂಡವು.

ಈಗ ವಾತಾವರಣ ಮತ್ತೊಮ್ಮೆ ಬದಲಾಗತೊಡಗಿದೆ. ಪರಿಸರ ಪ್ರಜ್ಞೆ ಬೆಳೆದಂತೆ, ಪರ್ಯಾವರಣ ನಾಶ ಹೆಚ್ಚಿದಂತೆ, ಆರ್ಥಿಕ ಹಿಂಜರಿತ ಹೆಚ್ಚಿದಂತೆ, ಖಾದಿ ಹಾಗೂ ಕೈಮಗ್ಗಗಳ ಪ್ರಾಮುಖ್ಯತೆ ದಿನೇ ದಿನೇ ಹೆಚ್ಚುತ್ತಿದೆ. ಅಪ್ಪಟ ಖಾದಿ ಹಾಗೂ ಕೈಮಗ್ಗ ವಸ್ತ್ರಗಳ ಬೇಡಿಕೆಯು, ದೇಶದೊಳಗೆ ಮಾತ್ರವಲ್ಲ, ಹೊರಗೂ ಏರಿಕೆಯಾಗತೊಡಗಿದೆ. ಔದ್ಯೋಗೀಕರಣದ ಬೃಹತ್ ಬೇಡಿಕೆಯನ್ನು ಸಮರ್ಥವಾಗಿ ನಿಭಾಯಿಸಬಲ್ಲ ಹಸಿರು ಉದ್ದಿಮೆ ಇದೊಂದೇ ಎಂಬ ಅರಿವು ಅಭಿವೃದ್ಧಿ ಹರಿಕಾರರಲ್ಲಿ ಮೂಡತೊಡಗಿದೆ. ಈ ಉದ್ದಿಮೆಗೆ ಬೇಕಾದ ಪಾರಂಪರಿಕ ತಂತ್ರಜ್ಞಾನ, ಮೂಲಸೌಲಭ್ಯಗಳು, ಕಚ್ಚಾವಸ್ತು ಎಲ್ಲವೂ ಭಾರತದಲ್ಲಿ ಲಭ್ಯವಿದೆ. ಮಾತ್ರವಲ್ಲ, ಭಾರತದಲ್ಲಿ ಮಾತ್ರವೇ ಲಭ್ಯವಿದೆ.

ಪರಿಸರ ಪ್ರಜ್ಞೆ ಬೆಳೆದಂತೆ, ಪರ್ಯಾವರಣ ನಾಶ ಹೆಚ್ಚಿದಂತೆ, ಆರ್ಥಿಕ ಹಿಂಜರಿತ ಹೆಚ್ಚಿದಂತೆ, ಖಾದಿ ಹಾಗೂ ಕೈಮಗ್ಗಗಳ ಪ್ರಾಮುಖ್ಯತೆ ದಿನೇ ದಿನೇ ಹೆಚ್ಚುತ್ತಿದೆ. ಅಪ್ಪಟ ಖಾದಿ ಹಾಗೂ ಕೈಮಗ್ಗ ವಸ್ತ್ರಗಳ ಬೇಡಿಕೆಯು, ದೇಶದೊಳಗೆ ಮಾತ್ರವಲ್ಲ, ಹೊರಗೂ ಏರಿಕೆಯಾಗತೊಡಗಿದೆ. ಔದ್ಯೋಗೀಕರಣದ ಬೃಹತ್ ಬೇಡಿಕೆಯನ್ನು ಸಮರ್ಥವಾಗಿ ನಿಭಾಯಿಸಬಲ್ಲ ಹಸಿರು ಉದ್ದಿಮೆ ಇದೊಂದೇ ಎಂಬ ಅರಿವು ಅಭಿವೃದ್ಧಿ ಹರಿಕಾರರಲ್ಲಿ ಮೂಡತೊಡಗಿದೆ.

ವಿಶ್ವದ ಎಲ್ಲಾ ದೇಶಗಳನ್ನೂ ಸೇರಿಸಿದರೂ, ಅವರಲ್ಲಿರುವ ಒಟ್ಟು ಚಾಲತಿ ಮಗ್ಗಗಳಿಗಿಂತ ಹೆಚ್ಚಿನ ಸಂಖ್ಯೆಯ ಮಗ್ಗಗಳು ನಮ್ಮ ದೇಶ ಒಂದರಲ್ಲೇ ಚಾಲತಿಯಲ್ಲಿವೆ. ಉದ್ಯೋಗ ಸೃಷ್ಟಿಯ ವಿಷಯಕ್ಕೆ ಬಂದರೆ ಕೈಮಗ್ಗವು ವಿದ್ಯುತ್ ಮಗ್ಗಗಳಿಗಿಂತ ಹನ್ನೆರಡು ಪಟ್ಟು ಹೆಚ್ಚಿನ ಗ್ರಾಮೀಣ ಉದ್ಯೋಗವನ್ನು ಸೃಷ್ಟಿಸಬಲ್ಲುದಾಗಿದೆ. ನಮಗದರ ಅಗತ್ಯವಿದೆ ಕೂಡಾ. ಅಪ್ಪಟ ಕೈಮಗ್ಗ ವಸ್ತ್ರ ಉತ್ಪಾದನೆಯ ವಿಷಯದಲ್ಲಿ ಚೀನಾದೇಶ ನಮಗೆ ಪ್ರತಿಸ್ಪರ್ಧಿಯಾಗಲಾರದು, ವಿಯೆಟ್ನಾಂ ಕೊರಿಯಾ ಫಿಲಿಪೀನ್ಸ್ ಯಾವುದೂ ಪ್ರತಿಸ್ಪರ್ಧಿಯಾಗಲಾರದು. ನಾವು ಮಾತ್ರ ಉತ್ಪಾದಿಸಬಲ್ಲೆವು, ಅಪ್ಪಟ ಕೈಮಗ್ಗದ ಹತ್ತಿ ಹಾಗೂ ರೇಷಿಮೆ ಬಟ್ಟೆಗಳನ್ನು. ಮಾತ್ರವಲ್ಲ, ನೈಸರ್ಗಿಕ ಬಣ್ಣದಲ್ಲಿ ಅದ್ದಿ ಉತ್ಪಾದಿಸಬಲ್ಲೆವು. ಅಭಿವೃದ್ಧಿಯ ಹರಿಕಾರರು ಹಾಗೂ ಸರಕಾರಗಳು ಈ ಕಡೆಗೆ ಗಂಭೀರವಾಗಿ ಗಮನಹರಿಸುವ ಅಗತ್ಯವಿದೆ.



# ಗಾಂಧಿ ಮತ್ತು ಪರಿಸರ ಕಾಳಜಿ


ಡಾ. ಕೆ. ಪುಟ್ಟಸ್ವಾಮಿ



**ಗಾಂ**ಧೀಜಿ ಒಬ್ಬ ಅಪ್ರತಿಮ ಪರಿಸರ ಚಿಂತಕ ಎಂಬುದನ್ನು ಅವರು ಕಾಲವಾದ ನಂತರ ಜಗತ್ತು ಗುರುತಿಸತೊಡಗಿದೆ. ಗಾಂಧೀಜಿ ಬದುಕಿದ್ದ ಕಾಲದಲ್ಲಿ ಜಗತ್ತು ಇಷ್ಟೊಂದು ಉಪಭೋಗವಾದಿಯಾಗಿರಲಿಲ್ಲ. ಯಂತ್ರಗಳ ಜಾಲದಲ್ಲಿ ಬಂಧಿಯಾಗಿರಲಿಲ್ಲ. ಬದುಕು ವೇಗದ ಆಕರ್ಷಣೆಗೆ ಒಳಗಾಗಿರಲಿಲ್ಲ. ಪ್ರಾಕೃತಿಕ ಸಂಪನ್ಮೂಲಗಳನ್ನು ಈಗಿನಂತೆ ಮನಬಂದಂತೆ ಸೂರೆಮಾಡಿ ನಿಸರ್ಗದ ಲಯವನ್ನು ಭಂಗಗೊಳಿಸಿರಲಿಲ್ಲ. ವನ್ಯಜೀವಿಗಳು ನೆಲೆತಪ್ಪಿ ಮನುಷ್ಯನ ವಾಸಸ್ಥಳಗಳಿಗೆ ಆಗ ದಾಳಿ ಮಾಡುತ್ತಿರಲಿಲ್ಲ. ನಿಸರ್ಗದ ಜೊತೆ ತಾದ್ಯಾತ್ಮತೆಯಿಂದ ಬಾಳುತ್ತಿದ್ದ ರೈತ ಸಮುದಾಯಗಳನ್ನು ನಾವು ಒಕ್ಕಲೆಬ್ಬಿಸಿರಲಿಲ್ಲ. ಯಂತ್ರಗಳ ಜೊತೆಗೆ ಮನುಷ್ಯ ಸಂಬಂಧಗಳು ವ್ಯವಹಾರದ ಮಟ್ಟಕ್ಕೆ ಈಗಿನಂತೆ ಆಗ ಇಳಿದಿರಲಿಲ್ಲ. ಕಾಡು ಬರಿದಾಗಿರಲಿಲ್ಲ. ನದಿಗಳು ಕೊಳಕಾಗಿರಲಿಲ್ಲ. ಭೂಮಿಗೆ ವಿಷವನ್ನು ಸುರಿದಿರಲಿಲ್ಲ.

ಇಪ್ಪತ್ತನೆಯ ಶತಮಾನದ ಎಪ್ಪತ್ತರ ದಶಕದಿಂದ ಪರಿಸರ ಕಾಳಜಿ ಗಟ್ಟಿಯಾಗತೊಡಗಿತು. ಜಗತ್ತಿನ ಚಿಂತನೆಯಾಗಿ ಹರಡಿತು. ಪರಿಸರದ ಬಿಕ್ಕಟ್ಟುಗಳಿಗೆ ಗಾಂಧೀಜಿಯ ಚಿಂತನೆಯಲ್ಲಿ ಪರಿಹಾರ ಅಡಗಿರುವುದು ಬಹುಬೇಗನೆ ಚಿಂತಕರಿಗೆ ಅರಿವಾಯಿತು. ಗಾಂಧೀಜಿಯವರ ಚಿಂತನೆ, ಬದುಕು ಮತ್ತು ವರ್ತನೆಗಳನ್ನು ಪರಿಸರಾತ್ಮಕ ದೃಷ್ಟಿಕೋನದಿಂದ ಅಭ್ಯಸಿಸುವ ಹೊಸ ವಿಧಾನವೊಂದು ಆರಂಭವಾಯಿತು.

> ಪರಿಸರ ಮಾಲಿನ್ಯ ಹಾಗೂ ಪರಿಸರ ನಾಶದ ಪ್ರಮಾಣ ಪ್ರತಿ ವರ್ಷ ಹೆಚ್ಚುತ್ತಲೇ ಇದೆ. ಭೂಮಿಯು ರಿಪೇರಿ ಮಾಡಲಾಗದ ಹಂತದತ್ತ ಸಾಗಿದೆ. ಉಪಭೋಗವಾದ ಹಾಗೂ ನವ ಆರ್ಥಿಕತೆಯಿಂದಾಗಿ ಹೆಚ್ಚಿದ ಔದ್ಯಮಿಕ ಚಟುವಟಿಕೆ, ಅಗತ್ಯಕ್ಕಿಂತಲೂ ಹೆಚ್ಚಿನ ಉತ್ಪಾದನೆ ಮಾಡುತ್ತಿವೆ.





ಜಗತ್ತಿಗೆ ಅಂಟಿಕೊಂಡ ಈ ಉನ್ಮಾದವನ್ನು ಶಮನಗೊಳಿಸಿ ಪರಿಸರವನ್ನು ಸಂರಕ್ಷಿಸಲು ಜಗತ್ತಿನಾದ್ಯಂತ ಇಂದು ಅನೇಕ ಸಂಘಟನೆಗಳು ಅರ್ಜಿಸಿಕೊಂಡಿದೆ. ಆದರೆ 'ಪರಿಸರ ನಾಶ' ಎಂಬ ವಿದ್ಯಮಾನದ ಬಗೆಗಿನ ಚಿಂತನೆಯು ನಮ್ಮ ದೇಶದಲ್ಲಿ ಇತ್ತೀಚೆಗೆ ಆರಂಭವಾದದ್ದಲ್ಲ. ಸುಮಾರು ನೂರು ವರ್ಷಗಳಿಗೂ ಹಿಂದೆಯೇ ಈ ಬಗೆಗಿನ ಚಿಂತನೆ ನಮ್ಮ ದೇಶದಲ್ಲಿ ಆರಂಭವಾಗಿತ್ತು.

ಪರಿಸರ ಮಾಲಿನ್ಯ ಹಾಗೂ ಪರಿಸರ ನಾಶದ ಪ್ರಮಾಣ ಪ್ರತಿ ವರ್ಷ ಹೆಚ್ಚುತ್ತಲೇ ಇದೆ. ಭೂಮಿಯು ರಿಪೇರಿ ಮಾಡಲಾಗದ ಹಂತದತ್ತ ಸಾಗಿದೆ. ಉಪಭೋಗವಾದ ಹಾಗೂ ನವ ಆರ್ಥಿಕತೆಯಿಂದಾಗಿ ಹೆಚ್ಚಿದ ಔದ್ಯಮಿಕ ಚಟುವಟಿಕೆ, ಅಗತ್ಯಕ್ಕಿಂತಲೂ ಹೆಚ್ಚಿನ ಉತ್ಪಾದನೆ ಮಾಡುತ್ತಿವೆ. ಅತಿಯಾದ ರಾಸಾಯನಿಕಗಳ ಬಳಕೆ, ದುಡಿಮೆಯನ್ನು ಬೆನ್ನಟ್ಟಿ ಕಳೆದುಕೊಂಡ ವೈಯಕ್ತಿಕ ನೆಮ್ಮದಿ–ಹೀಗೆ ಜಗತ್ತು ಅತಿ ಉತ್ಪಾದನೆಯ ಹುಚ್ಚಿನಲ್ಲಿ ಭೂಮಿಯನ್ನು ನಾಶಗೊಳಿಸುವ ದಿಕ್ಕಿನತ್ತ ಮುನ್ನಡೆದಿದೆ.

ಜಗತ್ತಿಗೆ ಅಂಟಿಕೊಂಡ ಈ ಉನ್ಮಾದವನ್ನು ಶಮನಗೊಳಿಸಿ ಪರಿಸರವನ್ನು ಸಂರಕ್ಷಿಸಲು ಜಗತ್ತಿನಾದ್ಯಂತ ಇಂದು ಅನೇಕ ಸಂಘಟನೆಗಳು ಅರ್ಜಿಸಿಕೊಂಡಿದೆ. ಆದರೆ 'ಪರಿಸರ ನಾಶ' ಎಂಬ ವಿದ್ಯಮಾನದ ಬಗೆಗಿನ ಚಿಂತನೆಯು ನಮ್ಮ ದೇಶದಲ್ಲಿ ಇತ್ತೀಚೆಗೆ ಆರಂಭವಾದದ್ದಲ್ಲ. ಸುಮಾರು ನೂರು ವರ್ಷಗಳಿಗೂ ಹಿಂದೆಯೇ ಈ ಬಗೆಗಿನ ಚಿಂತನೆ ನಮ್ಮ ದೇಶದಲ್ಲಿ ಆರಂಭವಾಗಿತ್ತು. ಹಾಗೆ ನೋಡಿದರೆ, ಸಹಬಾಳ್ವೆ, ನೆಮ್ಮದಿ ಮತ್ತು ಸಮಸ್ತ ಜೀವರಾಶಿ ಹಾಗೂ ಭೂ ಮಂಡಲದ ಸಂರಕ್ಷಣೆಯ ಮಹತ್ವದ ಬಗ್ಗೆ ವೇದ ಉಪನಿಷತ್‌ಗಳಲ್ಲೇ ಉಲ್ಲೇಖಗಳು ದೊರೆಯುತ್ತವೆ. ಆದರೆ ಒಂದು ಚಿಂತನೆಯಾಗಿ, ಆಚರಣೆಯಾಗಿ ಮತ್ತು ಚಳವಳಿಯಾಗಿ ಅಧಿಕೃತವಾಗಿ ರೂಪುಗೊಂಡಿದ್ದು ಇಪ್ಪತ್ತನೆಯ ಶತಮಾನದ ಆರಂಭದಲ್ಲಿ.





1910ರಲ್ಲಿ ಗಾಂಧೀಜಿಯವರು ಲಂಡನ್ ಮಾರ್ಗವಾಗಿ ದಕ್ಷಿಣ ಆಫ್ರಿಕಾಗೆ ಪ್ರಯಾಣಿಸುತ್ತಿದ್ದ ಅವಧಿಯಲ್ಲಿ 'ಹಿಂದ್ ಸ್ವರಾಜ್' ಎಂಬ ಪುಸ್ತಿಕೆಯನ್ನು ಗುಜರಾತಿ ಭಾಷೆಯಲ್ಲಿ ಬರೆದರು. ಅದು ಬ್ರಿಟಿಷರಿಂದ ಭಾರತಕ್ಕೆ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳುವ ಅಗತ್ಯವನ್ನು ಮಾತ್ರ ಚಿಂತನೆಗೆ ಒಡ್ಡಿರಲಿಲ್ಲ. ಜಗತ್ತು ತನ್ನಲ್ಲಿನ ಸಂಪನ್ಮೂಲಗಳನ್ನು ಹಿಂಸೆ ಮತ್ತು ಆಕ್ರಮಣವಿಲ್ಲದೆ ಸುಸ್ಥಿರವಾಗಿ ಬಳಸುವ, ಶಾಂತಿಯ ಮಾರ್ಗಗಳನ್ನು ಹುಡುಕುವ ಚಿಂತನೆಯೂ ಆಗಿತ್ತು. ಆ ಕೃತಿಯಲ್ಲಿ ಗಾಂಧಿಯವರು ಬೃಹತ್ ಯಂತ್ರಗಳ ಬಗ್ಗೆ ತಮಗಿದ್ದ ಆತಂಕ ಮತ್ತು ಅವು ಹೊತ್ತು ತರುವ ಹಿಂಸೆ ಮತ್ತು ಅಸಮಾನತೆಯ ಜೊತೆಗೆ ಅಸ್ಥಿರಗೊಳ್ಳುವ ನಾಗರಿಕ ಬದುಕಿನ ಬಗೆಯೂ ಚಿಂತನೆ ನಡೆಸಿದ್ದಾರೆ. ಸತ್ಯ ಮತ್ತು ಅಹಿಂಸೆ, ಸರಳ ಜೀವನಶೈಲಿ ಮತ್ತು ಸರಳ ಅಭಿವೃದ್ಧಿಯ ಆಧಾರದ ಮೇಲೆ ಸತ್ಯಾಗ್ರಹವನ್ನು ರೂಪಿಸಬೇಕೆಂಬ ಅವರ ಚಿಂತನೆಯು ನಿಸರ್ಗ ಮತ್ತು ಸಹಜೀವಿಗಳಿಗೆ ಹಾನಿ ಮಾಡದೆಯೇ ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸುವ ಬಗೆಯನ್ನು ಅದು ವಿಷದಪಡಿಸುತ್ತದೆ. "ಪ್ರಕೃತಿ ಎಲ್ಲರ ಅಗತ್ಯಗಳನ್ನು ಪೂರೈಸಬಲ್ಲದೇ ಹೊರತು ಯಾವೊಬ್ಬನ ದುರಾಸೆಯನ್ನಲ್ಲ" ಎಂದು ಅವರು ನೂರು ವರ್ಷಗಳ ಹಿಂದೆ ಹೇಳಿದ ಮಾತುಗಳು ಇಂದಿನ ಆಧುನಿಕ ಪರಿಸರ ಚಿಂತನೆಯ ನೈತಿಕ ದ್ರವ್ಯವಾಗಿದೆ.

ನಿಸರ್ಗದ ದುರಂತ ಆರಂಭವಾಗಿದ್ದೇ ಕೈಗಾರಿಕಾ ಕ್ರಾಂತಿಯ ನಂತರ. ವಿಜ್ಞಾನ ಮತ್ತು ತಂತ್ರಜ್ಞಾನ ಬೆಳೆದಂತೆಲ್ಲ ಆರ್ಥಿಕ ಚಟುವಟಿಕೆಗಳು ಹಿಗ್ಗತೊಡಗಿದವು. ನೈಸರ್ಗಿಕ ಸಂಪನ್ಮೂಲ ಕಚ್ಚಾ ವಸ್ತುಗಳಾಗಿ ಸೂರೆಯಾಯಿತು. ವಿಜ್ಞಾನದ 'ನೀತಿನಿರ್ಲಿಪ್ತ' ನಡೆಯಿಂದ ಜಗತ್ತು ಉತ್ಪಾದನೆಯ ಕಾರ್ಖಾನೆಯಾಯಿತು. ನಾವೇ ಸೃಷ್ಟಿಸಿದ ಯಂತ್ರ ರಾಕ್ಷಸನಿಂದ ಪ್ರಕೃತಿ ಬಳಲಿತು. ಆದರೆ ಗಾಂಧೀಜಿಯವರ ಸರಳ ಜೀವನ ಶೈಲಿ, ಸತ್ಯ, ಅಹಿಂಸೆ ಮತ್ತು ಸಹಬಾಳ್ವೆಯ ತತ್ವಗಳು ಈ ಯಂತ್ರ ನಾಗರಿಕತೆಗೆ ಒಡ್ಡಿದ ಸವಾಲುಗಳಾಗಿದ್ದವು. ಗಾಂಧಿ ಇಡೀ ಭೂಮಿಯೇ ಒಂದು ಜೀವಿ ಎಂದು ನಂಬಿದ್ದರು. ಅವರು ತಮ್ಮ ಬದುಕಿನುದ್ದಕ್ಕೂ, ಸಮೂಹದ ಬದುಕು, ಗ್ರಾಮ ಸ್ವರಾಜ್ಯ, ಅಸ್ಪೃಶ್ಯತಾ ನಿರ್ಮೂಲನೆ ಮತ್ತು ಸ್ತ್ರೀ ಸಮಾನತೆ ಬಗ್ಗೆ ನಡೆಸಿದ ಚಿಂತನೆಗಳನ್ನು ಈಗಿನ ಚಿಂತಕರು ವಿಶ್ಲೇಷಿಸುತ್ತಿದ್ದಾರೆ. ಅವರ ಪ್ರಕಾರ ಗಾಂಧೀಜಿಯವರು ಅಭಿವ್ಯಕ್ತಿಪಡಿಸಿದ ಚಿಂತನೆಗಳನ್ನು ಎರಡು ನಿಯಮಗಳಲ್ಲಿ ನಿರೂಪಿಸಬಹುದು. ಒಂದು ಕಾಸ್ಮಿಕ್ ನಿಯಮ. ಮತ್ತೊಂದು ಜೀವಿಗಳ ನಿಯಮ. ಕಾಸ್ಮಿಕ್ ಅಥವಾ ಬ್ರಹ್ಮಾಂಡ ನಿಯಮವೆಂದರೆ, ಅವರ ಮಾತಿನಲ್ಲೇ ಹೇಳುವುದಾದರೆ "ಇಡೀ ವಿಶ್ವವೇ ಒಂದು ಕಾಸ್ಮಿಕ್ ಚೈತನ್ಯದಿಂದ ರಚನೆಗೊಂಡು ನಡೆಯುತ್ತಿದೆ. ಹಾಗಾಗಿ ಮನುಷ್ಯರೂ ಸೇರಿದಂತೆ ಎಲ್ಲ ಜೀವಿಗಳೂ ಸೃಷ್ಟಿಯಾಗಿರುವುದು ಪರಸ್ಪರ ಸಹಬಾಳ್ವೆಯ ನಿಯಮದಿಂದ ಮುಂದುವರೆಯುತ್ತವೆ. ಹಾಗಾಗಿ ಗಾಂಧಿಯವರ ಪ್ರಕಾರ ನವ ಸಮಾಜವು





ಗಾಂಧೀಜಿಯವರ ಪ್ರಕಾರ ಯಂತ್ರ ವ್ಯಾಮೋಹ ಶ್ರೀಮಂತಿಕೆಯನ್ನು ಗಳಿಸುವ ದಾಹವನ್ನು ಹೆಚ್ಚಿಸುತ್ತದೆ. ಆ ಹಾದಿಯಲ್ಲಿ ಮನುಷ್ಯ ಲೌಕಿಕ ಸುಖದ ಲೋಲುಪ್ತತೆಯಲ್ಲಿ ಮುಳುಗುತ್ತಾನೆ. ಯಂತ್ರಪ್ರಣೀತ ಆಧುನಿಕ ನಾಗರಿಕತೆಯನ್ನು ಅವರು 'ಸೈತಾನ' ಎಂದು ಪರಿಭಾವಿಸಿದ್ದರು.

ನಿಸರ್ಗವನ್ನಾಗಲೀ, ಯಾವುದೇ ಜೀವಿಯನ್ನಾಗಲೀ ಅನಗತ್ಯವಾಗಿ ಶೋಷಿಸಬಾರದು. ಇದು ಮನುಕುಲದ ಉಳಿವಿಗೆ ನಾಗರಿಕತೆ ತೋರಬೇಕಾದ ಸಂವೇದನೆ ಮತ್ತು ಹೊಣೆಗಾರಿಕೆ". ಹಾಗಾಗಿ ಗಾಂಧೀಜಿ ಭಾರತದ ಅಷ್ಟೇ ಏಕೆ ಜಗತ್ತಿನ ಪರಿಸರವಾದಿಯಾಗಿ ಹೊಮ್ಮಿದ್ದಾರೆ.

ಗಾಂಧೀಜಿಯವರು ತಮ್ಮ ಹಿಂದ್ ಸ್ವರಾಜ್ ಪುಸ್ತಕದಲ್ಲಿ ಆಧುನಿಕ ಕೈಗಾರಿಕ ನಾಗರಿಕತೆಯು ಮನುಕುಲದ ಮೇಲೆ ಬೀರುವ ಘೋರ ಪರಿಣಾಮಗಳನ್ನು ಕುರಿತು ಚಿಂತಿಸಿದ್ದರು. ಅದು ಒಟ್ಟು ಜನಸಂಖ್ಯೆಯಲ್ಲಿ ಮುಷ್ಟಿಯಷ್ಟು ಜನರನ್ನು ಶ್ರೀಮಂತರನ್ನಾಗಿಸಿ, ಬಹುತೇಕ ಜನರನ್ನು ದರಿದ್ರ ಮತ್ತು ಅತಂತ್ರಸ್ಥಿತಿಗೆ ದೂಡುತ್ತದೆ ಎಂದು ಪ್ರತಿಪಾದಿಸಿದ್ದರು. ಗಾಂಧೀಜಿಯವರ ಪ್ರಕಾರ ಯಂತ್ರ ವ್ಯಾಮೋಹ ಶ್ರೀಮಂತಿಕೆಯನ್ನು ಗಳಿಸುವ ದಾಹವನ್ನು ಹೆಚ್ಚಿಸುತ್ತದೆ. ಆ ಹಾದಿಯಲ್ಲಿ ಮನುಷ್ಯ ಲೌಕಿಕ ಸುಖದ ಲೋಲುಪ್ತತೆಯಲ್ಲಿ ಮುಳುಗುತ್ತಾನೆ. ಯಂತ್ರಪ್ರಣೀತ ಆಧುನಿಕ ನಾಗರಿಕತೆಯನ್ನು ಅವರು 'ಸೈತಾನ' ಎಂದು ಪರಿಭಾವಿಸಿದ್ದರು. ಆಧುನಿಕ ನಾಗರಿಕತೆಯನ್ನು ಸಂಕೇತಿಸುವ ಯಂತ್ರವನ್ನು 'ಪಾಪ' ಎಂದು ನಂಬಿದ್ದರು. ಆದರೆ ಎಲ್ಲ ಯಂತ್ರಗಳನ್ನೂ ಪಾಪ ಎಂದು ನಂಬಿರಲಿಲ್ಲ. "ನಮ್ಮ ದೇಹವೇ ಒಂದು ಯಂತ್ರ, ಹಾಗಾಗಿ ನಾನೇಕೆ ಯಂತ್ರವನ್ನು ದ್ವೇಷಿಸಲಿ. ಚರಕವೂ ಒಂದು ಯಂತ್ರ, ಚರಕ ನನಗೆ ಸರ್ವಸ್ವವಲ್ಲವೇ! ಮನುಷ್ಯನ ಸುಸ್ಥಿರ ಬದುಕಿಗೆ ಅಗತ್ಯವಾದ ನೇಗಿಲು, ಕೃಷಿ ಉಪಕರಣ ತಯಾರಿಸುವ ಕುಲುಮೆ, ಬಟ್ಟೆಯನ್ನು ತಯಾರಿಸುವ ಮಗ್ಗ, ನೂಲಿನ ತಕಲಿ, ಕುಂಬಾರನ ಚಕ್ರ, ಬಡಗಿಯ ಸಾಧನಗಳೆಲ್ಲವೂ ಯಂತ್ರವೇ. ಆದರೆ ಅಸಮಾನತೆಯನ್ನು ಸೃಷ್ಟಿಸಿ ಮನುಷ್ಯ ಸಂಬಂಧಗಳನ್ನು ಛಿದ್ರಗೊಳಿಸುವ ಯಂತ್ರ ನಾಗರಿಕತೆ ಬಗ್ಗೆ ನನ್ನ ವಿರೋಧವಿದೆ" ಎಂದು ಸ್ಪಷ್ಟಪಡಿಸಿದ್ದರು. ಆಧುನಿಕ ನಾಗರಿಕತೆಯು ನಿಸರ್ಗದ ಮೇಲೆ ಆಕ್ರಮಣ ಮಾಡುತ್ತದೆ. ಹಿಂಸೆಯನ್ನು ಬಿತ್ತುತ್ತದೆ. ನಿಸರ್ಗದೊಡನೆ ಇರುವ ಮನುಷ್ಯನ ಅವಿನಾಭಾವ ಏಕತೆಯನ್ನು ಮುರಿಯುತ್ತದೆ. ನಿಸರ್ಗದೊಡನೆ ಸಹಬಾಳ್ವೆ ನಡೆಸಿದ ಸಮುದಾಯಗಳನ್ನು ಅತಂತ್ರಗೊಳಿಸುತ್ತದೆ. ಈಗಿನ ಪಾಶ್ಚಾತ್ಯ ಪರಿಸರವಾದಿಗಳು "ನಿಸರ್ಗದೆಡೆಗೆ ಹಿಂದಿರುಗಿ" ಎಂದು ಪ್ರಚಾರ ಮಾಡುತ್ತಿದ್ದರೆ ಅಂದು ಗಾಂಧೀಜಿ ಅವರು "ಹಳ್ಳಿಗಳಿಗೆ ಹಿಂದಿರುಗಿ" ಎಂದು ಕರೆ ನೀಡಿದ್ದರು. ನಿಸರ್ಗ ಶೋಷಣೆಯ ವಿರುದ್ಧ ಭುಗಿಲೆದ್ದ 'ಚಿಪ್ಕೊ' ಚಳುವಳಿ ಮತ್ತು ನರ್ಮದಾ ಉಳಿಸಿ ಹೋರಾಟಗಳು ಗಾಂಧೀಜಿಯ ಚಿಂತನೆಯ ಮೂಸೆಯಲ್ಲಿ ಅರಳಿದ ಹೋರಾಟಗಳೆಂದೇ ಈಗ ಗುರುತಿಸಲಾಗಿದೆ. ಪರಿಸರವಾದಿಗಳಾದ ಚಂಡಿ ಪ್ರಸಾದ್ ಭಟ್, ಬಾಬಾ ಆಮ್ಟೆ, ಸುಂದರಲಾಲ್ ಬಹುಗುಣ, ಮೇಧಾ ಪಾಟ್ಕರ್ ಮೊದಲಾದವರು ಗಾಂಧೀಜಿಯವರ ಚಿಂತನೆಗಳಿಂದ ಸ್ಫೂರ್ತಿಗೊಂಡು ಹೋರಾಟ ನಡೆಸಿದವರಾದ್ದರಿಂದ ಗಾಂಧೀಜಿಯ ತತ್ವಗಳು ಬೀಜರೂಪದಲ್ಲಿ ನೂರು ವರ್ಷಗಳ ಹಿಂದೆಯೇ ನೆಲೆಯಾಗಿದ್ದವು.

ಪರಿಸರ ಆಂದೋಲನವು ವ್ಯಾಪಕ ಪ್ರಮಾಣದಲ್ಲಿ ಗರಿಗಟ್ಟಿಕೊಳ್ಳುವ ಹಲವಾರು ದಶಕಗಳ ಹಿಂದೆಯೇ ಗಾಂಧೀಜಿಯವರು ಅತಿಭೋಗ, ಮನುಷ್ಯ ಮತ್ತು ನಿಸರ್ಗದ ಮೇಲಿನ ಹಿಂಸೆ ಮುಂತಾದ ಪರಿಸರಾತ್ಮಕ ವಿಷಯಗಳನ್ನು ಕುರಿತು ಚಿಂತಿಸಿದರು. ಪರಿಸರಕ್ಕಾಗುತ್ತಿರುವ ಅನ್ಯಾಯಗಳ ವಿರುದ್ಧ ಈಗ ಜಗತ್ತಿನಾದ್ಯಂತ ಅನೇಕ ಹೋರಾಟಗಳು ನಡೆಯುತ್ತಿವೆ. ಕೆಲವು ಹಿಂಸೆಯ ಸ್ವರೂಪವನ್ನು ಪಡೆದುಕೊಂಡಿವೆ. ಆದರೆ ಭಾರತದಲ್ಲಿ ಮಾತ್ರ ಗಾಂಧಿಯವರ ಶಾಂತಿ, ಅಹಿಂಸೆಯ ಮಾರ್ಗದಲ್ಲಿ ನಡೆಯುತ್ತಿವೆ.

ಆದರೆ ಆಧುನಿಕ ಪರಿಸರವಾದಿಗಳಿಗೂ ಗಾಂಧೀಜಿಗೂ ಒಂದು ಮುಖ್ಯ ವ್ಯತ್ಯಾಸವಿದೆ. ಗಾಂಧೀಜಿಯವರು ಪರಿಸರ ನಾಶಕ್ಕೆ ಹೇರಳವಾದ ಸಾಕ್ಷ್ಯವನ್ನು ಹುಡುಕಿ ವಿಶ್ಲೇಷಣೆಯ ಮೂಲಕ ಪ್ರತಿಪಾದಿಸುವುದಿಲ್ಲ. ಪರಿಸರ ಮಾಲಿನ್ಯದ ವಿರುದ್ಧ ಕ್ರಮಗಳನ್ನು ಸೂಚಿಸಲಿಲ್ಲ. ಪರಿಸರ ಸಂರಕ್ಷಣೆಯ ಮಾರ್ಗಗಳನ್ನು ಹೇಳಿಕೊಡಲಿಲ್ಲ. ಅವರಿಗೆ ರೋಗವನ್ನು ಗುಣಪಡಿಸುವ ವಿಧಾನಕ್ಕಿಂತ ಅದನ್ನು ತಡೆಯುವುದರಲ್ಲಿ ನಂಬಿಕೆಯಿತ್ತು. ತಮ್ಮ ಜೀವನದುದ್ದಕ್ಕೂ ಅವರು ಸರಳ ಜೀವನ ಶೈಲಿ, ಆರೋಗ್ಯ, ನೈರ್ಮಲ್ಯದ ಮಹತ್ವವನ್ನು ಆಚರಿಸುತ್ತಾ ಬೋಧಿಸುತ್ತಾ ಸಾಗಿದರು. ಹೀಗೆ ಪರಿಸರ ಚಳುವಳಿ ಹಾಗೂ ಬಡತನ ನಿರ್ಮೂಲನೆಯ ಚಳುವಳಿಗಳನ್ನು ಒಂದುಗೂಡಿಸಿ ಒಂದು ಜನಪರ ಚಳುವಳಿಯಾಗಿ ಅದನ್ನು ರೂಪಿಸಿದ ಹಿರಿಮೆ ಗಾಂಧೀಜಿಯವರದ್ದು.

ಜಗತ್ತಿನ ಯಾವುದೇ ರಾಜಕೀಯ ನಾಯಕ ಬದುಕನ್ನು ಹಸನುಗೊಳಿಸುವ ಇಂಥ ವಿಚಾರಗಳ ಬಗ್ಗೆ ಗಾಂಧೀಜಿಯವರಷ್ಟು ಸಮಯವನ್ನು ವ್ಯಯ ಮಾಡಿಲ್ಲ ಮತ್ತು ಅಷ್ಟು ಅರ್ಪಣಾ ಮನೋಭಾವದಿಂದ ದುಡಿಯಲಿಲ್ಲ. ಪರಿಸರ ಸಂರಕ್ಷಣೆಯ ಸಂದೇಶವನ್ನು ತಮ್ಮ ಬದುಕಿನ ಮೂಲಕವೇ ಜನರಿಗೆ ತಲುಪಿಸಿ ಅವರನ್ನು ಮುನ್ನಡೆಸಿದರು. ಹಾಗಾಗಿ ಅವರು ಜಗತ್ತಿನ ವಿಭಿನ್ನ ಪರಿಸರವಾದಿ.





# ಬದನವಾಳು ಸತ್ಯಾಗ್ರಹ




ಕೆ. ಚೇತನ್

ಮೈಸೂರು ಜಿಲ್ಲೆಯ ಬದನವಾಳು ಗ್ರಾಮದ ಚಾರಿತ್ರಿಕ ಮಹತ್ವದ ಖಾದಿ ಕೇಂದ್ರದ ಆವರಣದಲ್ಲಿ 2015 ರ ಏಪ್ರಿಲ್ ತಿಂಗಳಿನಲ್ಲಿ ಬದನವಾಳು ಸತ್ಯಾಗ್ರಹ ನಡೆಯಿತು. ಆಧುನಿಕೋತ್ತರ ಸಂದರ್ಭದಲ್ಲಿ ರಚನಾತ್ಮಕ ಸಾಮಾಜಿಕ ಚಳುವಳಿಗಳ ಪ್ರಾಮುಖ್ಯತೆಯನ್ನು ಪುನರ್ ಸ್ಥಾಪಿಸಿದ ಮಹತ್ವದ ಒಂದು ಚಳುವಳಿಯಾಗಿತ್ತು ಬದನವಾಳು ಸತ್ಯಾಗ್ರಹ.

2015, ಮಾರ್ಚ್ 21 ರಂದು ಉತ್ತರ ಕರ್ನಾಟಕದ ಗಜೇಂದ್ರಗಡದಲ್ಲಿ ಆರಂಭಗೊಂಡು ಏಪ್ರಿಲ್ 19ಕ್ಕೆ ಬದನವಾಳು ಖಾದಿ ಕೇಂದ್ರದ ಆವರಣದಲ್ಲಿ ಸುಸ್ಥಿರ ಬದುಕಿನ ಬೃಹತ್ ಸಮಾವೇಶದಲ್ಲಿ ಪರ್ಯಾವಸಾನ ಹೊಂದಿದ ಈ ಸತ್ಯಾಗ್ರಹದಲ್ಲಿ ವಿವಿಧ ರಚನಾತ್ಮಕ ಕಾರ್ಯಕ್ರಮಗಳಲ್ಲಿ ನಿರತರಾಗಿರುವ, ಕರ್ನಾಟಕ ಹಾಗೂ ಹೊರರಾಜ್ಯಗಳ, ನೂರಾರು ಸ್ವಯಂ ಸೇವಾ ಸಂಸ್ಥೆಗಳು, ಸಾವಿರಾರು ರಚನಾತ್ಮಕ ಕಾರ್ಯಕರ್ತರು, ಹಿರಿಯ ಗಾಂಧೀವಾದಿಗಳು, ಸಾಹಿತಿ ಕಲಾವಿದರು, ಯುವಕರು, ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

ಗ್ರಾಮ ಭಾರತವಿರಲಿ, ಹಸಿರು ಉದ್ದಿಮೆಗಳಿರಲಿ, ಗ್ರಾಮೀಣ ಉದ್ಯೋಗ ಸೃಷ್ಟಿಯಾಗಲಿ ಎಂಬ ಆಶಯವು ಅಲ್ಲಿ ಮೇಲೆದ್ದು ಬಂದಿತು. ಸ್ಮಾರ್ಟ್ ಸಿಟಿಗಳು ಬೃಹತ್ ಯಂತ್ರೋದ್ಯಮಗಳು ಹಾಗೂ ಮಾರುಕಟ್ಟೆ ಪ್ರಣೀತ ಆರ್ಥಿಕತೆಗೆ ಆದ್ಯತೆ ಕಡಿಮೆಯಾಗಲಿ ಎಂಬ ಒತ್ತಾಸೆ ಬಲವಾಗಿ ಮೂಡಿ ಬಂದಿತು. ಜನಪರವಾದ, ಜೀವಪರವಾದ ಹಾಗೂ ಪರಿಸರ ಪ್ರಿಯ ಸಂಘಟನೆಗಳ ಸಂಯುಕ್ತ ವೇದಿಕೆಯಾಗಿ ಮೂಡಿ ಬಂತು ಬದನವಾಳು ಸತ್ಯಾಗ್ರಹ.






ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ಪುಟ್ಟ ಗ್ರಾಮ. ನಂಜನಗೂಡು ಪಟ್ಟಣದಿಂದ 10 ಕಿ.ಮೀ. ದೂರದಲ್ಲಿರುವ, ಚಾಮರಾಜನಗರ ರಸ್ತೆ ಮಾರ್ಗದಲ್ಲಿ ಬರುವ ಈ ಗ್ರಾಮಕ್ಕೆ ರಾಷ್ಟ್ರಪಿತ ಮಹಾತ್ಮಾಗಾಂಧೀಜಿ ಅವರು ಒಂದಲ್ಲಾ ಎರಡು ಬಾರಿ ಬಂದಿದ್ದರು ಎಂಬುವುದೇ ವಿಶೇಷ !

ಯಂತ್ರ ನಾಗರೀಕತೆ ನಿಗ್ರಹಿಸುವ ಹಾಗೂ ಸ್ವದೇಶಿ ಚಳವಳಿಯನ್ನು ಪ್ರೋತ್ಸಾಹಿಸುವ ಕಾಲಘಟ್ಟ ಉತ್ತುಂಗದಲ್ಲಿದ್ದ ದಿನಗಳು. ಒಂಭತ್ತು ದಶಕದ ಹಿಂದೆಯೇ 'ನೂಲುವ–ನೇಯುವ' ಕಾಯಕದ ಮೂಲಕ ಸ್ವಾವಲಂಬನೆ ಬದುಕನ್ನು ಕಂಡುಕೊಂಡಿದ್ದವರು ಬದನವಾಳಿನ ಅನೇಕ ಕುಟುಂಬದವರು. ನವನಾಗರೀಕತೆಯ ಸೋಂಕು ಅಷ್ಟಾಗಿ ತಗಲದೆ ಇದ್ದ ಹಾಗೂ ಹೆಸರೇ ಕೇಳದ ರಾಷ್ಟ್ರದ ಸಹಸ್ರಾರು ಗ್ರಾಮಗಳಲ್ಲಿ ಬದನವಾಳು ಸಹ ಒಂದಾಗಿತ್ತು. ಇಂತಹ ಕುಗ್ರಾಮಕ್ಕೆ ಗ್ರಾಮ ಸ್ವರಾಜ್ ಕ್ರಾಂತಿಯ ನೇತಾರ–ರಾಷ್ಟ್ರಪಿತನನ್ನೇ ತನ್ನತ್ತ ಸೆಳೆದು ರಾಷ್ಟ್ರಜ್ಞಾಗಿರಾದದ್ದು ಇತಿಹಾಸ.

1927ರ ಜುಲೈ 19 ರಿಂದ 23ರವರೆಗೆ ಮೈಸೂರು ಸಂಸ್ಥಾನದಲ್ಲಿ ಪ್ರವಾಸ ಹಮ್ಮಿಕೊಂಡಿದ್ದ ಗಾಂಧೀಜಿ ಅವರು, ಅದಾಗಲೇ ಚರಕ ಕ್ರಾಂತಿಯ ಮೂಲಕ ಖಾದಿ ಉತ್ಪನ್ನ ಹೆಚ್ಚಿಸಿ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಜನಸಾಮಾನ್ಯರನ್ನು ಪ್ರೇರೇಪಿಸುವ ಆಂದೋಲನಕ್ಕೆ ಮುನ್ನುಡಿ ಬರೆದಿದ್ದರು. ಅತ್ತ, ಅದೇ ಸಮಯ ಬದನವಾಳು ಗ್ರಾಮದ ಚರಕಗಳು ಸರಸರ ಸುತ್ತತ್ತಲೇ ಇದ್ದವು, ತಕಲಿಗಳಲ್ಲಿ ನೂಲು ಉಂಡೆ–ಉಂಡೆಗಳಾಳುತ್ತಲೇ ಇದ್ದವು.

ಈ ಪುಟ್ಟ ಗ್ರಾಮದ ಹಿರಿಮೆ ಮಹಾತ್ಮನನ್ನೇ ಸೆಳೆದಿತ್ತು. ಬದನವಾಳು ಈ ಭಾಗಕ್ಕೆ ಖಾದಿ ಒದಗಿಸುವ ಪ್ರಧಾನ ಕೇಂದ್ರವಾಗಿತ್ತು. ಜೊತೆಗೆ, ಇಲ್ಲಿನ ಕುಟುಂಬಗಳು ಕತ್ತಾಳೆ ನಾರು ಉತ್ಪಾದನೆ, ಎಣ್ಣೆ ಗಾಣ, ಕಾಗದ ತಯಾರಿಕೆ ಸೇರಿದಂತೆ ಅನೇಕ ಕಸುಬುಗಳಲ್ಲಿ ಕುಶಲರಾಗಿದ್ದರು. ಪುಟ್ಟ

ನವನಾಗರೀಕತೆಯ ಸೋಂಕು ಅಷ್ಟಾಗಿ ತಗಲದೆ ಇದ್ದ ಹಾಗೂ ಹೆಸರೇ ಕೇಳದ ರಾಷ್ಟ್ರದ ಸಹಸ್ರಾರು ಗ್ರಾಮಗಳಲ್ಲಿ ಬದನವಾಳು ಸಹ ಒಂದಾಗಿತ್ತು. ಇಂತಹ ಕುಗ್ರಾಮ ಗ್ರಾಮ ಸ್ವರಾಜ್ ಕ್ರಾಂತಿಯ ನೇತಾರ–ರಾಷ್ಟ್ರಪಿತನನ್ನೇ ತನ್ನತ್ತ ಸೆಳೆದು ರಾಷ್ಟ್ರಜ್ಞಾಗಿರಾದದ್ದು ಇತಿಹಾಸ.



## ಬದನವಾಳು: ಸಂಕ್ಷಿಪ್ತ ಪರಿಚಯ

- ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ಗ್ರಾಮ
- ನಂಜನಗೂಡಿನಿಂದ ಪೂರ್ವಕ್ಕೆ 13 ಕಿ.ಮೀ. ದೂರದಲ್ಲಿದೆ (ಚಾಮರಾಜನಗರ ರಸ್ತೆ ಮಾರ್ಗ)
- ಒಟ್ಟು ಕುಟುಂಬಗಳ ಸಂಖ್ಯೆ: 632 (2011ರ ಜನಗಣತಿ ಪ್ರಕಾರ)
- ಗ್ರಾಮದ ಜನಸಂಖ್ಯೆ: 2,784
- ಈ ಪೈಕಿ ಪರಿಶಿಷ್ಟರ ಜನಸಂಖ್ಯೆ: 1,153
- ಸಾಕ್ಷರತೆ ಪ್ರಮಾಣ: 63.22 % (ಪುರುಷರು–70.31%)
- ರೈಲು ಮತ್ತು ಬಸ್ಸು ಸೌಲಭ್ಯ ಹೊಂದಿದೆ
- ಗ್ರಾಮದಲ್ಲಿ ಗ್ರಾಮ ಪಂಚಾಯಿತಿ
- ಪ್ರಾಥಮಿಕ ಆರೋಗ್ಯ ಉಪ ಕೇಂದ್ರ

**ಈಗಲೂ ನೇಯ್ಗೆ ನಡೆಯುತ್ತಿದೆ..:**

1927ಕ್ಕೂ ಮುಂಚೆ ಬದನವಾಳು ಗ್ರಾಮದಲ್ಲಿ ದೊಡ್ಡ ಮಟ್ಟದಲ್ಲಿ ಉತ್ಪಾದನೆ ಆಗುತ್ತಿದ್ದ ಖಾದಿ ಪ್ರಮಾಣ ದಿನೇದಿನೇ ಕುಸಿಯುತ್ತಿದೆ. ಆಧುನಿಕತೆ ನಾಗಾಲೋಟ ಇಲ್ಲೂ ಬದಲಾವಣೆಗೆ ನಾಂದಿ ಆಗಿದೆ. ಒಂದೆರಡು ಕೋಣೆಗಳಲ್ಲಿ ನೂಲುವ ಮತ್ತು ನೇಯುವ ಕಾರ್ಯ ಈಗಲೂ ನಡೆಯುತ್ತಿದೆ. ವಿಶಾಲವಾದ ಬಯಲಿನಲ್ಲಿರುವ ಮನೆಗಳು ತೀರಾ ಶಿಥಿಲವಾಗಿದ್ದು, ಪಳೆಯುಳಿಕೆಯಂತೆ ಇವೆ.


ನೇಯ್ಗೆ ಕೇಂದ್ರ



### ಗಾಂಧೀಜಿ ಅವರು ಗ್ರಾಮ ಕೈಗಾರಿಕೆಗಳೆಂದರೆ ಏನೆಂಬುದರ ಚಿತ್ರಣವನ್ನು ಕೊಡುತ್ತಾ ಹೀಗೆ ಹೇಳುತ್ತಾರೆ...

"ಬಡವರಿಗೆ ಅನ್ನವೇ ದೇವರು. ಅದೇ ರೀತಿ ನಾವು ಬಡವರಿಗೆ ಖಾದಿಯ ಮೂಲಕ ಅನ್ನವನ್ನು ಒದಗಿಸಬೇಕು"

"ಗ್ರಾಮ ಕೈಗಾರಿಕೆ ಎಂಬ ಸೌರವ್ಯೂಹದಲ್ಲಿ ಖಾದಿ ಸೂರ್ಯನಿದ್ದಂತೆ. ಉಳಿದೆಲ್ಲಾ ಕೈಗಾರಿಕೆಗಳೂ ಖಾದಿ ಉದ್ಯಮದಿಂದ ಶಾಖ ಪಡೆದು ಸಂರಕ್ಷಣೆಗೊಳ್ಳುತ್ತವೆ"

"ಸಾವಿರಾರು ಜನರನ್ನು ವೃತ್ತಿಹೀನರನ್ನಾಗಿ ಮಾಡಿ ಯಂತ್ರದಿಂದ ತಯಾರಾದ ಈ ಅಗ್ಗದ ಬಟ್ಟೆಯು ಹಳ್ಳಿಯವರು ನೇಯ್ದ ದುಬಾರಿ ಬೆಲೆಯ ಖಾದಿಗಿಂತಲೂ ದುಬಾರಿಯೇ ಆಯಿತು. ಹೇಗೆಂದರೆ, ಕಲ್ಲಿದ್ದಲು ಗಣಿಯಲ್ಲಿ ಕೆಲಸ ಮಾಡುವವರಿಗೆ ಅವರು ಬಳಸುವ ಕಲ್ಲಿದ್ದಲು ದುಬಾರಿ ಎಂದೆನಿಸುವುದಿಲ್ಲ. ಹಾಗೆಯೇ, ತನ್ನ ಬಟ್ಟೆಯನ್ನು ತಾನು ನೇಯ್ದುಕೊಳ್ಳುವವನಿಗೆ ಖಾದಿ ದುಬಾರಿ ಎನಿಸುವುದಿಲ್ಲ".

"ನಾವು, ಹಳ್ಳಿಗರು ತಯಾರಿಸಿದ ಪದಾರ್ಥಗಳನ್ನೇ ಕೊಳ್ಳಬೇಕು. ಅವರು ತಯಾರಿಸಿದ ಪದಾರ್ಥಗಳು ಒರಟಾಗಿಯೇ ಇರಬಹುದು. ಪರದೇಶದ ಅಥವಾ ನಗರದ ಕಾರ್ಖಾನೆಗಳಲ್ಲಿ ತಯಾರಾದ ಪದಾರ್ಥಗಳು ಉತ್ತಮವಾಗಿವೆ ಎಂಬ ಕಾರಣದಿಂದ ಹಳ್ಳಿಗರು ತಯಾರಿಸಿದ ವಸ್ತುಗಳನ್ನು ನಿರಾಕರಿಸದೆ, ಅವರು ತಮ್ಮ ವಸ್ತುಗಳ ಗುಣಮಟ್ಟವನ್ನು ಸುಧಾರಿಸಲು ನೆರವಾಗಬೇಕು. ಒಂದೇ ಮಾತಿನಲ್ಲಿ ಹೇಳುವುದಾದರೆ, ಹಳ್ಳಿಗರಲ್ಲಿ ಗುಪ್ತವಾಗಿರುವ ಕಲಾಕೌಶಲ್ಯವನ್ನು ನಾವು ಜಾಗೃತಗೊಳಿಸಬೇಕು.."

"ಖಾದಿಯ ಪ್ರಚಾರ ಮಾಡುವಾಗ ನಮ್ಮ ಗುರಿ ಪೂರ್ಣವಾಗಿ ಜನೋಪಕಾರ. ಅಂದರೆ, ಆರ್ಥಿಕ ನೆರವು ಆಗಿರಬೇಕು. ಬೇರೆ ಎಲ್ಲಾ ರಾಜಕೀಯ ಉದ್ದೇಶಗಳನ್ನು ಬದಿಗೊತ್ತಬೇಕು. ಆದರೆ ಅದು ಖಂಡಿತವಾಗಿಯೂ ಮುಖ್ಯವಾದ ರಾಜಕೀಯ ಪರಿಣಾಮಗಳನ್ನು ಉಂಟು ಮಾಡುತ್ತದೆ.."

"ಪ್ರತಿಯೊಬ್ಬ ಮನುಷ್ಯನೂ ತಾನು ನಿತ್ಯ ಬಳಸುವ ಆಹಾರ, ಬಟ್ಟೆ ಮುಂತಾದ ಪ್ರತಿಯೊಂದು ವಸ್ತುವನ್ನೂ ಪರೀಕ್ಷಿಸಿ ಅನ್ಯದೇಶ ಅಥವಾ ನಗರದಲ್ಲಿ ಉತ್ಪಾದಿಸಿದ ವಸ್ತುಗಳ ಬದಲು ಹಳ್ಳಿಗರು ಸರಳವಾದ ಹೆಚ್ಚು ಬೆಲೆಯಿಲ್ಲದ ಸಾಧನಗಳಿಂದ ಮನೆಗಳಲ್ಲಿ ಅಥವಾ ಜಮೀನುಗಳಲ್ಲಿ ತಯಾರಿಸಿದ ವಸ್ತುಗಳನ್ನು ಬಳಸಬೇಕು. ಈ ರೀತಿಯ ಬದಲಾವಣೆಯೇ ಒಂದು ರೀತಿಯಲ್ಲಿ ಮಹತ್ವ ಪೂರ್ಣವಾದ ಶಿಕ್ಷಣ ಹಾಗೂ ನಿಶ್ಚಿತ ಉಪಕ್ರಮ.."

(ಆಧಾರ: ಮಹಾತ್ಮ, ಸಂಪುಟ–4, ಗಾಂಧೀ ಭವನ, ಮೈಸೂರು ವಿವಿ)

# ಕರಗಿತು ಮನ–
# ಕಳಚಿತು ವಿದೇಶಿ
# ದಿರಿಸಿನ ಮೋಹ...!

ವೃತ್ತಿಯಲ್ಲಿ ವಕೀಲರಾಗಿದ್ದ ಗಾಂಧೀಜಿ ಅವರು ಎಲ್ಲರಂತೆ ಸಾಮಾನ್ಯ ದಿರಿಸುಗಳನ್ನು ಧರಿಸಿಕೊಂಡೇ ಓಡಾಡುತ್ತಿದ್ದರು. ಸ್ವಾತಂತ್ರ್ಯಕ್ಕಾಗಿ ರಾಷ್ಟ್ರಪರ್ಯಟನೆ ಮಾಡಿದ ಸಂದರ್ಭಗಳಲ್ಲಿ ಬದುಕಿನ ಕಟುಸತ್ಯಗಳ ಅನಾವರಣ, ಭಾರತದ ನಿಜದರ್ಶನ ಗಾಂಧೀಜಿ ಅವರ ಅರಿವಿಗೆ ಬಂತು. ಅದೆಷ್ಟೋ ದೇಶವಾಸಿಗಳ ಮೈಮೇಲೆ ತುಂಡು ಬಟ್ಟೆ ಇಲ್ಲದ್ದು ಗಾಂಧೀಜಿ ಅವರನ್ನು ಚಿಂತನೆಗೆ ಹಚ್ಚಿತು. ದೀನದಲಿತರ ಸ್ಥಿತಿ ಮನಸ್ಸು ಕರಗಿಸಿತು. ಅಂತರ್ವಾಣಿಯ ಕರೆಗೆ ಓಗೊಟ್ಟ ಗಾಂಧೀಜಿ ಅವರು ಇನ್ನೆಂದು ವಿದೇಶಿ ಧಿರಿಸುವ ತೊಡದಿರಲು ಶಪಥ ಮಾಡಿದರು. ದೇಶಿಗರಿಗೆ ಮೈಮುಚ್ಚುವಷ್ಟು ಆರ್ಥಿಕ ಚೈತನ್ಯ ಬರುವವರೆಗೂ ತಾವೂ ತುಂಡುಡುಗೆ ತೊಡಲು ನಿರ್ಧರಿಸಿದರು.

ಗ್ರಾಮ ಜೀವನವನ್ನು ಪುನಶ್ಚೇತನಗೊಳಿಸಬೇಕು. ಗ್ರಾಮ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸಬೇಕು. ಸ್ವದೇಶಿ ಉತ್ಪನ್ನಗಳನ್ನು ಬಳಸಬೇಕು. ತಮ್ಮ ಅಗತ್ಯತೆಯ ಉತ್ಪನ್ನಗಳನ್ನು ತಾವೇ ತಯಾರಿಸಬೇಕು. ಇದರಿಂದ ಬಡತನ ಮತ್ತು ನಿರುದ್ಯೋಗ ತಡೆಗಟ್ಟಬಹುದು ಎನ್ನುವುದು ಗಾಂಧೀಜಿ ಅವರ ಬಲವಾದ ನಿಲುವಾಗಿತ್ತು. ಹಾಗಾಗಿಯೇ, ಸ್ವದೇಶಿ ಚಳವಳಿಯನ್ನು ಆರಂಭಿಸಿದರು. ಇದಕ್ಕಾಗಿ ದೇಶ ಸುತ್ತಿ ವ್ಯಾಪಕ ಪ್ರಚಾರ ಕೈಗೊಂಡರು. ಖಾದಿ ಉದ್ಯಮಕ್ಕೆ ಶಕ್ತಿ ತುಂಬಿದರು. ಇದೇ, ಅಖಿಲ ಭಾರತ ಗ್ರಾಮ ಕೈಗಾರಿಕೆಗಳ ಸಂಸ್ಥೆಯ ರಚನೆಗೂ ನಾಂದಿಯಾಯಿತು.

ಗ್ರಾಮದ ಓಣಿ–ಹಾದಿಗಳಲ್ಲಿನ ಮನೆಗಳಲ್ಲಿ ಒಂದಲ್ಲಾ ಒಂದು ಗುಡಿ ಕೈಗಾರಿಕಾ ಕ್ರಿಯೆಗಳು ಸಕ್ರಿಯವಾಗಿರುತ್ತಿದ್ದವು. ಇಲ್ಲಿ ಸಾಕಷ್ಟು ಮಂದಿ ನುರಿತ ಕುಶಲಕರ್ಮಿಗಳಿದ್ದು, ಗ್ರಾಮ ಜೀವನವನ್ನು ಬಲಪಡಿಸುವ ಹಲವಾರು ಚಟುವಟಿಕೆಗಳು ನಡೆಯುತ್ತಿದ್ದುದ್ದರಿಂದ ಸಹಜವಾಗಿಯೇ ಬದನವಾಳು ಹೆಸರುವಾಸಿಯಾಗಿತ್ತು.

**ಖಾದಿ ಕೇಂದ್ರ**

ಗಾಂಧೀವಾದಿ–ಸ್ವತಂತ್ರ್ಯ ಸೇನಾನಿ ತಗಡೂರು ರಾಮಚಂದ್ರರಾವ್ ಅದಾಗಲೇ (1927) ಗ್ರಾಮದ ಹೊರವಲಯದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಕೇಂದ್ರವನ್ನು ಸ್ಥಾಪಿಸಿದ್ದರು. ಕೇಂದ್ರದ ಚಟುವಟಿಕೆಗಳಲ್ಲಿ ಗ್ರಾಮದ ದಲಿತರು, ವಿಶೇಷವಾಗಿ ಮಹಿಳೆಯರು, ಅತ್ಯಾಸಕ್ತಿಯಿಂದ ತೊಡಗಿಸಿಕೊಳ್ಳುತ್ತಿದ್ದರು. ದಲಿತರನ್ನು ದೇವರ ಮಕ್ಕಳು (ಹರಿಜನ) ಎಂದೇ ಪ್ರೀತಿಯಿಂದ ಕರೆಯುತ್ತಿದ್ದ ಗಾಂಧೀಜಿ, ಇಲ್ಲಿನ ಖಾದಿ ಕೇಂದ್ರಕ್ಕೆ ಆಗಮಿಸಿ ತಕಲಿ ಮತ್ತು ಚರಕದಿಂದ ನೂಲುವ–ನೇಯುವ ಮೂಲಕ ಖಾದಿ ಉಡುಪಿನ ಜೊತೆಗೆ ಇನ್ನಿತರೆ ಉತ್ಪನ್ನಗಳನ್ನು ತಯಾರಿಸುತ್ತಿದ್ದ ಇಲ್ಲಿನ ಜನರ ಕೆಲಸ ಕಂಡು ಸಂಭ್ರಮಿಸಿದ್ದರು.

ಜನರನ್ನು ಕುರಿತು, ಗ್ರಾಮ ಕೈಗಾರಿಕೆ, ಸ್ವದೇಶಿ ಉತ್ಪನ್ನ ತಯಾರಿಕೆ ಮತ್ತು ಬಳಕೆಯ ಮಹತ್ವದ ಬಗೆಗೂ ಸಾಕಷ್ಟು ಮಾತನಾಡಿದ್ದರು. ಜೀವನೋಪಾಯದ ಕಸುಬಾಗಿರುವ ಖಾದಿ ಉತ್ಪಾದನೆಯನ್ನು ಮುಂದುವರೆಸಬೇಕು ಎಂದೂ ಸಲಹೆ ನೀಡಿದ್ದರು.

ಎಂಟು ವರ್ಷಗಳ ತರುವಾಯ: ಗಾಂಧೀಜಿ ಬದನವಾಳು ಗ್ರಾಮಕ್ಕೆ ಮತ್ತೆ ಬಂದಿದ್ದು ಎಂಟು ವರ್ಷಗಳ ತರುವಾಯ. ಅದು, ಅಸ್ಪೃಶ್ಯತೆ ನಿರ್ಮೂಲನೆಗಾಗಿ 'ಹರಿಜನ ಯಾತ್ರೆ' ಹೆಸರಿನಲ್ಲಿ ಪ್ರಾರಂಭಿಸಿದ್ದ ರಾಷ್ಟ್ರೀಯ ಚಳವಳಿ ಸಂದರ್ಭದಲ್ಲಿ. ಗಾಂಧೀಜಿ ಅವರು 1934ರಲ್ಲಿ ಮೈಸೂರು ಸಂಸ್ಥಾನದಲ್ಲಿ ಪ್ರವಾಸ ಕೈಗೊಂಡಿದ್ದ ವೇಳೆ ಬದನವಾಳು ಗ್ರಾಮಕ್ಕೆ ಮತ್ತೆ ಬಂದಿದ್ದರು. ದೇಶಿತನದ ಉತ್ಪನ್ನಗಳು ತಯಾರಿಕೆ, ಸ್ವಾವಲಂಬನೆಯ ಬದುಕು ಗಾಂಧೀಜಿ ಅವರನ್ನು ಮತ್ತೊಮ್ಮೆ ಬದನವಾಳುವಿನತ್ತ ಸೆಳೆಯಿತು.

**ನೆನಪಿಗೊಂದು ಶಾಸನ:**

ರಾಷ್ಟ್ರಪಿತ ಗಾಂಧೀಜಿ ಅವರು ಈ ಗ್ರಾಮಕ್ಕೆ ಮೊದಲು ಭೇಟಿ ನೀಡಿದ್ದನ್ನು ಚಿರಸ್ಮರಣೀಯವಾಗಿಸುವ, ಹಸಿರಾಗಿಸುವ ಸದುದ್ದೇಶದಿಂದ '1927 ಮತ್ತು ಚರಕ ಚಿನ್ಹೆ'ಯನ್ನು ಕೆತ್ತಿರುವ ಕಲ್ಲನ್ನು (ಮೈಲುಗಲ್ಲು ರೂಪದಲ್ಲಿರುವ) ಇಲ್ಲಿ ಪ್ರತಿಷ್ಠಾಪಿಸಲಾಗಿದೆ. ಕೇಂದ್ರದ ಹಳೆಯ ಕಟ್ಟಡವನ್ನು 1927ರಲ್ಲಿ ನಿರ್ಮಿಸಲಾಗಿದ್ದು, ಇದರ ಮೇಲೆ 'ಬದನವಾಳು ನೂಲುವ ಪ್ರಾಂತ್ಯ' ಎನ್ನುವ ಕೆತ್ತನೆ ಇದೆ. ನಂತರದಲ್ಲಿ ಕೇಂದ್ರವನ್ನು ವಿಸ್ತರಿಸಿ ಮತ್ತೊಂದು ಕಟ್ಟಡ ನಿರ್ಮಿಸಲಾಗಿದ್ದು ಅದನ್ನು ಅಂದಿನ ಮೈಸೂರು ಸಂಸ್ಥಾನದ ಗ್ರಾಮಾಂತರ ಕೈಗಾರಿಕಾ ನಿರ್ದೇಶಕ (ಡೈರೆಕ್ಟರ್ ಆಫ್ ಇಂಡಸ್ಟ್ರೀಸ್) ಶ್ರೀ ಬಿ.ಬೀರಪ್ಪ ಅವರು 1956ರ ಅಕ್ಟೋಬರ್ 29ರಂದು ಉದ್ಘಾಟಿಸಿದ್ದರು.

ಸದ್ಯ, ಕರ್ನಾಟಕ ರಾಜ್ಯ ಖಾದಿ ಗ್ರಾಮೋದ್ಯೋಗ ಮಂಡಳಿಯ ಸುಪರ್ದಿಯಲ್ಲಿರುವ ಈ ಕೇಂದ್ರದಲ್ಲಿ ನೂಲುವ ಮತ್ತು ನೇಯ್ಗೆ ಬಗ್ಗೆ ತರಬೇತಿ ನೀಡಲಾಗುತ್ತಿದೆ. ಹಾಸನ ಜಿಲ್ಲೆ ಹೊಳೆನರಸೀಪುರದ ಖಾದಿ ಮತ್ತು ಗ್ರಾಮೋದ್ಯೋಗ ಸಹಕಾರ ಸಂಘದವರು ಅರಳೆ ನೂಲುವ ಮತ್ತು ನೇಯ್ಗೆ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ. ಸುಮಾರು 60 ಮಂದಿ ಮಹಿಳೆಯರು ಇದೇ ಕಾಯಕದಲ್ಲಿ ನಿರತರಾಗಿದ್ದಾರೆ. ಈವೊಂದು ಪ್ರಾಂಗಣದಲ್ಲೇ ಶಾಂತಚಿತ್ತದಿಂದ ಧ್ಯಾನಸ್ಥ ಸ್ಥಿತಿ ಭಂಗಿಯಲ್ಲಿರುವ ಗಾಂಧೀಜಿ ಅವರ ಪುತ್ಥಳಿಯನ್ನು ಸ್ಥಾಪಿಸಲಾಗಿದೆ.

ಬದಲಾದ ಕಾಲಘಟ್ಟದಲ್ಲಿನ ಆಧುನಿಕತೆ, ನವೀನ ತಾಂತ್ರಿಕತೆ, ಕೌಶಲಗಳು ಹಲವು ಉದ್ಯೋಗಗಳನ್ನು ನುಂಗಿದೆ. ಜನರೂ ಬದಲಾವಣೆಗೆ ಮುಖ ಮಾಡಿದ್ದಾರೆ. ಒಂದು ಕಾಲದಲ್ಲಿ ಚಟ್‌ಪಟ್ ಚಟ್‌ಪಟ್ ಸದ್ದಿನ ಮೂಲಕ ಆರ್ಥಿಕತೆ ಚಟುವಟಿಕೆಯ ಕೇಂದ್ರವಾಗಿದ್ದ ಬದನವಾಳುವಿನ ನೂಲುವ ಕೇಂದ್ರದ ಚಿತ್ರಣ ಇದೀಗ ಸಂಪೂರ್ಣ ಬದಲಾಗಿದೆ. ಪುತ್ಥಳಿ ರೂಪದಲ್ಲಿ ನೆಲಸಿರುವ ಗಾಂಧೀಜಿ ಎಲ್ಲಾ ಬದಲಾವಣೆಯನ್ನು ಮೌನವಾಗಿ ನೋಡುತ್ತಾ ತಪೋಭಂಗಿಯಲ್ಲಿ ಕುಳಿತಿದ್ದಾರೆ. ■










ಬದನವಾಳುವಿನಲ್ಲಿ ನಡೆದ ಸುಸ್ಥಿರ ಸಮಾವೇಶದಲ್ಲಿ ಪರಿಸರವಾದಿ ಮೇಧಾ ಪಾಟ್ಕರ್, ಸಿದ್ದೇಶ್ವರ ಸ್ವಾಮೀಜಿ, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರೊಡನೆ ಪ್ರಸನ್ನ

ಖಾದಿ ಕ್ರಾಂತಿ, ತನ್ಮೂಲಕ ರಾಷ್ಟ್ರಪಿತನನ್ನು ಆಕರ್ಷಿಸಿದ ಬದನವಾಳು ಕೆಲ ವಿದೇಶೀ ಪತ್ರಿಕೆಗಳಲ್ಲಿಯೂ ಸುದ್ದಿಯಾಗಿತ್ತು. ಆದರೆ, ಎರಡು ದಶಕಗಳ ಹಿಂದೆ ವರ್ಗ ಸಂಘರ್ಷದ ದಳ್ಳುರಿಗೆ ಸಿಲುಕಿ ನೆಗೆಟೀವ್ ಕಾರಣಗಳಿಂದಲೂ ಸುದ್ದಿಯಾಗಿತ್ತು.

ಮತ್ತೆ, ಬದನವಾಳು ರಾಷ್ಟ್ರಮಟ್ಟದಲ್ಲಿ ಸುದ್ದಿಯಾದದ್ದು ಕಳೆದ ವರ್ಷ ನಡೆದ 'ಬದನವಾಳು ಸತ್ಯಾಗ್ರಹ'ದ ಮೂಲಕ.

ಹಿರಿಯ ರಂಗಕರ್ಮಿ ಪ್ರಸನ್ನರ ಒತ್ತಾಸೆಯ ಮೇರೆಗೆ ಕಳೆದ ವರ್ಷದ ಏಪ್ರಿಲ್‌ನಲ್ಲಿ ಈ ಗ್ರಾಮದಲ್ಲಿ ಅಖಿಲ ಭಾರತ ಕೈಮಗ್ಗ ಸಂಘಟನೆಗಳ ಒಕ್ಕೂಟವು 'ಸುಸ್ಥಿರ ಬದುಕಿನ ರಾಷ್ಟ್ರೀಯ ಸಮಾವೇಶ' ಮತ್ತು ಬದನವಾಳು ಸತ್ಯಾಗ್ರಹ ಆಯೋಜಿಸಿತ್ತು. ಕಾರ್ಯಕ್ರಮಕ್ಕೆ ಖ್ಯಾತ ಪರಿಸರವಾದಿ ಮೇಧಾ ಪಾಟ್ಕರ್, ಗಾಂಧೀ ಚಿಂತಕರು ಹಾಗೂ ಸಾಮಾಜಿಕ ಸ್ವಾಮೀಜಿ ಶ್ರೀ ಸಿದ್ದೇಶ್ವರ ಸ್ವಾಮಿಗಳು ಹಾಗೂ ರಂಗಕರ್ಮಿ, ಖ್ಯಾತ ಚಲನಚಿತ್ರ ನಟ ಇರ್ಫಾನ್ ಖಾನ್ ಸೇರಿ ರಾಷ್ಟ್ರದ ವಿವಿಧ ಭಾಗಗಳಿಂದ ನೂರಾರು ಮಂದಿ ಪ್ರಾಜ್ಞರು ಪಾಲ್ಗೊಂಡಿದ್ದರು. ಪರಂಪರೆ ಮತ್ತು ಗ್ರಾಮೀಣ ಸೊಗಡನ್ನು ಉಳಿಸುವ ಉದ್ದೇಶದಿಂದ ಮೈಸೂರಿನಿಂದ ಪಾದಯಾತ್ರೆಯನ್ನೂ ಕೈಗೊಳ್ಳಲಾಗಿತ್ತು.



# ರಾಷ್ಟ್ರೀಯ ಶಿಕ್ಷಣ ಚಳುವಳಿ

**ಎಂ. ಜುಂಜಣ್ಣ**
ಸಹಾಯಕ ನಿರ್ದೇಶಕರು
ವಾರ್ತಾ ಮತ್ತು ಸಾರ್ವಜನಿಕ
ಸಂಪರ್ಕ ಇಲಾಖೆ
ಹಾವೇರಿ ಜಿಲ್ಲೆ

> ಗುರುಕುಲ ಶಿಕ್ಷಣವು ಮಕ್ಕಳಲ್ಲಿ ತಾನು ಭಾರತೀಯನೆಂದು ಹೇಳುವ ಧೈರ್ಯ ನೀಡುತ್ತದೆ. ತಾನೇ ನೂತು ನೇಯ್ದ ಬಟ್ಟೆಗಳನ್ನು ಧರಿಸಿ ತಾನೇ ದುಡಿದು ಬೆಳೆದ ಆಹಾರವನ್ನು ಉಂಡು ನೆಮ್ಮದಿಯ ಸಹಜೀವನ ನಡೆಸುವ ಸ್ವಾವಲಂಬನೆಯ ಶಿಕ್ಷಣವಿದು.



**ಹಾ**ವೇರಿ ಜಿಲ್ಲೆಯ ಹೊಸರಿತ್ತಿಯ ಹಳ್ಳಿಕೇರಿಯವರಿಗೆ ತಮ್ಮ ಹುಟ್ಟೂರಾದ ಹೊಸರಿತ್ತಿ ಬಗ್ಗೆ ಅಪಾರ ಅಭಿಮಾನ. ಈ ಗ್ರಾಮದಲ್ಲಿ ಗ್ರಾಮೀಣ ಮಕ್ಕಳಿಗಾಗಿ ಮಹಾತ್ಮ ಗಾಂಧೀಜೀಯವರ ಆದರ್ಶಗಳನ್ನು ಪ್ರತಿಬಿಂಬಿಸುವ ಒಂದು ಗುರುಕುಲವನ್ನು ಸ್ಥಾಪಿಸಬೇಕೆಂಬುದು ಅವರ ಬಯಕೆ. ಅವರ ಷಷ್ಠಬ್ದಿಯ ಸಮಯದಲ್ಲಿ ಸ್ನೇಹಿತರು, ಹಿತೈಷಿಗಳು ಅರ್ಪಿಸಿದ ಹಮ್ಮಣಿಯನ್ನು ಗ್ರಾಮೀಣ ಗುರುಕುಲ ಸ್ಥಾಪನೆಗಾಗಿ ಹಳ್ಳಿಕೇರಿ ಗುದ್ಲೆಪ್ಪನವರು ಸಮರ್ಪಿಸಿದರು.

ದೇಶದ ವಿವಿಧ ಭಾಗಗಳಲ್ಲಿನ ಪ್ರಸಿದ್ಧ ವಸತಿ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಿ, ಶಿಕ್ಷಣ ತಜ್ಞರನ್ನು ಕಂಡು, ಗ್ರಾಮೀಣ ಮಕ್ಕಳಿಗೆ ಉಪಯುಕ್ತವಾಗಬಲ್ಲ ಸ್ವಾವಲಂಬನೆ ಶಿಕ್ಷಣ ಪದ್ಧತಿಯ ಬಗ್ಗೆ ವಿವರಗಳನ್ನು ಸಂಗ್ರಹಿಸಿದರು. ವರದಾ ಆಶ್ರಮದಲ್ಲಿ ಜೀವನ ಶಿಕ್ಷಣ ತರಬೇತಿಯನ್ನು ಪಡೆದ ಶಿಕ್ಷಣ ತಜ್ಞ ಶ್ರೀ ಮ.ಗು. ಹಂದ್ರಾಳರು ಈ ಗುರುಕುಲದ ವಿಶೇಷ ಯೋಜನೆಯನ್ನು ರೂಪಿಸಿದರು.





ಈ ಗುರುಕುಲ ವಿಶೇಷ ಯೋಜನೆಗೆ ಕರ್ನಾಟಕ ಸರ್ಕಾರದ ಅಂಗಿಕಾರ ಪಡೆದು, 1984 ಅಕ್ಟೋಬರ್ 2 ರಂದು ಗಾಂಧಿ ಜಯಂತಿಯಂದು ಹೊಸರಿತ್ತಿಯಲ್ಲಿ ಗಾಂಧಿ ಗ್ರಾಮೀಣ ಗುರುಕುಲ ಪ್ರಾರಂಭವಾಯಿತು. ಈ ಗುರುಕುಲವು ವಿಶಾಲವಾದ 32 ಎಕರೆ ವಿಸ್ತೀರ್ಣದಲ್ಲಿ ಪಸರಿಸಿಕೊಂಡಿದೆ. ಈ ಭೂಮಿಯಲ್ಲಿ ತೆಂಗು, ಹಣ್ಣೂ, ಕಾಯಿಪಲ್ಲೆ ಬೆಳೆಯಲಾಗುತ್ತದೆ.

ಗುರುಕುಲ ಶಿಕ್ಷಣವು ಮಕ್ಕಳಲ್ಲಿ ತಾನು ಭಾರತೀಯನೆಂದು ಹೇಳುವ ಧೈರ್ಯ ನೀಡುತ್ತದೆ. ತಾನೇ ನೂತು ನೇಯ್ದ ಬಟ್ಟೆಗಳನ್ನು ಧರಿಸಿ ತಾನೇ ದುಡಿದು ಬೆಳೆದ ಆಹಾರವನ್ನು ಉಂಡು ನೆಮ್ಮದಿಯ ಸಹಜೀವನ ನಡೆಸುವ ಸ್ವಾವಲಂಬನೆಯ ಶಿಕ್ಷಣವಿದು. ದೇಶದ ಆಂತರಿಕ ಕಲಹಗಳನ್ನು ಕಿತ್ತೆಸೆಯುವ ಹಾಗೂ ವೈಜ್ಞಾನಿಕ ಪ್ರಗತಿಪರ ಮಾರ್ಗ ಹೊಂದುವ ಶಿಕ್ಷಣವಿದು. ಬಡ ಕುಟುಂಬದಲ್ಲಿ ಜನಿಸಿ ಆರ್ಥಿಕ ಮುಗ್ಗಟ್ಟಿನಿಂದ ಬಳಲಿ ನಿಸ್ಸಹಾಯಕ ಸ್ಥಿತಿಯಲ್ಲಿರುವ ಗ್ರಾಮಾಂತರ ಪ್ರತಿಭಾವಂತ ಬಾಲಕರಿಗಾಗಿ ಆಶಾದಾಯಕ ಸಂಸ್ಥೆ ಇದು.

ಇಲ್ಲಿ ಶಿಕ್ಷಣ ಪ್ರಾಥಮಿಕ ಹಂತದಿಂದಲೇ ಪ್ರಾರಂಭವಾಗುತ್ತದೆ. 5ನೇ ವರ್ಗದಿಂದ 10ನೇ ವರ್ಗದವರೆಗೆ ಕರ್ನಾಟಕ ರಾಜ್ಯ ಅಭ್ಯಾಸ ಪಠ್ಯಕ್ರಮ ಕಲಿಸಲಾಗಿದೆ. ಸಾಮಾನ್ಯ ಶಿಕ್ಷಣದ ಜೊತೆಗೆ ಗ್ರಾಮೀಣ ಜನತೆಗೆ

**ದೈಹಿಕ ಸಾಂಸ್ಕೃತಿಕ ಹಾಗೂ ಬೌದ್ಧಿಕ ವಿಕಾಸವನ್ನು ಸಾಧಿಸುವುದು, ನಾಗರಿಕ ಪ್ರಜ್ಞೆ ಮೂಡಿಸುವುದು, ಸ್ವದೇಶಾಭಿಮಾನ, ಸ್ವಾವಲಂಬನೆ, ಸದಾಚಾರ, ಸಾದಾ ಜೀವನ ಇವು ಈ ವಿದ್ಯಾರ್ಥಿಗಳಲ್ಲಿ ಮೂಡಿಸುವುದರ ಕಡೆಗೆ ಇಲ್ಲಿ ವಿಶೇಷ ಗಮನ ನೀಡಲಾಗಿದೆ.**







**ಈ ಗುರುಕುಲ ವಿಶೇಷ ಯೋಜನೆಗೆ ಕರ್ನಾಟಕ ಸರ್ಕಾರದ ಅಂಗಿಕಾರ ಪಡೆದು, 1984 ಅಕ್ಟೋಬರ್ 2 ರಂದು ಗಾಂಧಿ ಜಯಂತಿಯಂದು ಹೊಸರಿತ್ತಿಯಲ್ಲಿ ಗಾಂಧಿ ಗ್ರಾಮೀಣ ಗುರುಕುಲ ಪ್ರಾರಂಭವಾಯಿತು. ಈ ಗುರುಕುಲವು ವಿಶಾಲವಾದ 32 ಎಕರೆ ವಿಸ್ತೀರ್ಣದಲ್ಲಿ ಪಸರಿಸಿಕೊಂಡಿದೆ.**



ಸ್ವಾವಲಂಬಿಯಾಗುವಂತಹ ಉದ್ಯೋಗಗಳಾದ ಕೈ–ತೋಟ, ಕೃಷಿ, ನೂಲು, ನೇಯ್ಗೆ, ರೇಷ್ಮೆ, ವ್ಯವಸಾಯ, ಹೈನುಗಾರಿಕೆ, ಆಧುನಿಕ ಕೃಷಿ, ಕಂಪ್ಯೂಟರ್ ಜ್ಞಾನ ನೀಡಲಾಗುತ್ತದೆ. ಇದರೊಂದಿಗೆ ವಿದ್ಯಾರ್ಥಿಗಳ ಗುಣಮಟ್ಟ ಹೆಚ್ಚಿಸುವುದು, ಶೀಲ ಸಚ್ಚಾರಿತ್ರ್ಯ ರೂಪಿಸುವುದು, ದೈಹಿಕ ಸಾಂಸ್ಕೃತಿಕ ಹಾಗೂ ಬೌದ್ಧಿಕ ವಿಕಾಸವನ್ನು ಸಾಧಿಸುವುದು, ನಾಗರಿಕ ಪ್ರಜ್ಞೆ ಮೂಡಿಸುವುದು, ಸ್ವದೇಶಾಭಿಮಾನ, ಸ್ವಾವಲಂಬನೆ, ಸದಾಚಾರ, ಸಾದಾ ಜೀವನ ಇವು ಈ ವಿದ್ಯಾರ್ಥಿಗಳಲ್ಲಿ ಮೂಡಿಸುವುದರ ಕಡೆಗೆ ಇಲ್ಲಿ ವಿಶೇಷ ಗಮನ ನೀಡಲಾಗಿದೆ.

ವಸತಿ ಗೃಹಗಳಲ್ಲಿ ವಿದ್ಯಾರ್ಥಿಗಳೇ ತಮ್ಮ ಪಾಲಿನ ಕರ್ತವ್ಯಗಳನ್ನು ನೆರವೇರಿಸಿಕೊಳ್ಳುವರು. ಶೌಚಾಲಯ, ಸ್ನಾನಗೃಹ, ಅಡುಗೆಮನೆ ಸ್ವಚ್ಛತೆಯನ್ನು ಪರ್ಯಾಯ ಕ್ರಮಗಳಲ್ಲಿ ವಿದ್ಯಾರ್ಥಿಗಳೇ ನಿರ್ವಹಿಸುವರು. ಶ್ರೀಮಂತ, ಬಡವ ಎಂಬ ಬೇಧ–ಭಾವವಿಲ್ಲದೇ ಎಲ್ಲರೂ ಸಹೋದರರರಂತೆ ಸಹಬಾಳ್ವೆಯ ಸಹ ಜೀವನ ನಡೆಸುವುದು ಮಾದರಿಯಾಗಿದೆ. ವಿದ್ಯಾರ್ಥಿಗಳಿಗೆ ಖಾದಿ ಸಮವಸ್ತ್ರ ಮತ್ತು ಊಟ, ಪಠ್ಯಪುಸ್ತಕ, ನೋಟ್‌ಬುಕ್, ಲೇಖನ ಸಾಮಗ್ರಿ, ಬಟ್ಟೆ ತೊಳೆಯುವ ಸೋಪು ಹಾಗೂ ಮೈಗೆ ಹಚ್ಚುವ ಸೋಪು, ಪೇಸ್ಟ್ ಉಚಿತವಾಗಿ ನೀಡಲಾಗುತ್ತಿದೆ. ಇಲ್ಲಿ ಯಾವುದೇ ಶುಲ್ಕ ಸಂಗ್ರವಿಲ್ಲ.

ಕರ್ನಾಟಕದ ಕರ್ಮಯೋಗಿ ಗಾಂಧಿವಾಧಿ ಉಕ್ಕಿನಾಳು ಹಳ್ಳಿಕೇರಿ ಗುದ್ಲೆಪ್ಪನವರ 111ನೇ ಜಯಂತ್ಯುತ್ಸವವನ್ನು ಇದೇ ಜೂನ್ 6ರಂದು ಹುಟ್ಟೂರು ಹೊಸರಿತ್ತಿಯಲ್ಲಿ ಸಡಗರ ಸಂಭ್ರಮದಿಂದ ಆಚರಿಸಲಾಯಿತು. ವಿದ್ಯೆಯಿಂದಲೇ ವಿಶ್ವ ಉದ್ಧಾರ ಸಾಧ್ಯ ಎಂದು ಮನಗಂಡಿದ್ದರು ಹಳ್ಳಿಕೇರಿಯವರು. ಅಂತೆಯೇ ನಾಡಿನಾದ್ಯಾಂತ ಹುಟ್ಟಿಕೊಂಡು ಸಂಭ್ರಮಿಸುತ್ತಿರುವ ಹತ್ತಾರು ಶಿಕ್ಷಣ ಸಂಸ್ಥೆಗಳಿಗೆ ಅವರ ಸ್ಫೂರ್ತಿಯೇ ಮೂಲ ಉಸಿರು.



**ವಸತಿ ಗೃಹಗಳಲ್ಲಿ ವಿದ್ಯಾರ್ಥಿಗಳೇ ತಮ್ಮ ಪಾಲಿನ ಕರ್ತವ್ಯಗಳನ್ನು ನೆರವೇರಿಸಿಕೊಳ್ಳುವರು. ಶೌಚಾಲಯ, ಸ್ನಾನಗೃಹ, ಅಡುಗೆಮನೆ ಸ್ವಚ್ಛತೆಯನ್ನು ಪರ್ಯಾಯ ಕ್ರಮಗಳಲ್ಲಿ ವಿದ್ಯಾರ್ಥಿಗಳೇ ನಿರ್ವಹಿಸುವರು. ಶ್ರೀಮಂತ, ಬಡವ ಎಂಬ ಬೇಧ–ಭಾವವಿಲ್ಲದೇ ಎಲ್ಲರೂ ಸಹೋದರರಂತೆ ಸಹಬಾಳ್ವೆಯ ಸಹ ಜೀವನ ನಡೆಸುವುದು ಮಾದರಿಯಾಗಿದೆ.**





# ಖಾದಿ ನೂಲುವುದು ಹಾಗೂ ಕೈಮಗ್ಗ ನೇಯ್ಗೆ

**ಗುರುನಾಥ ಕಡಬೂರ**
ಹಿರಿಯ ಸಹಾಯಕ ನಿರ್ದೇಶಕರು
ವಾರ್ತಾ ಮತ್ತು ಸಾರ್ವಜನಿಕ
ಸಂಪರ್ಕ ಇಲಾಖೆ
ಬೆಳಗಾವಿ

ಚಿತ್ರಗಳು : ಪಿ.ಕೆ. ಬಡಿಗೇರ್



**ಹು**ದಲಿ ಗಂಗಾಧರರಾವ್ ದೇಶಪಾಂಡೆ ಅಪ್ಪಟ ಗಾಂಧಿವಾದಿ ಹಾಗೂ ಖಾದಿಪ್ರೇಮಿಯಾಗಿದ್ದರು. ದೇಶಪಾಂಡೆ ಅವರ ಪರಿಶ್ರಮದ ಫಲವಾಗಿ 1923ರಲ್ಲಿ ಹುದಲಿಯಲ್ಲಿ ಖಾದಿ ಕೆಲಸ ಆರಂಭಗೊಂಡಿತು.

ಆ ಸಂದರ್ಭದಲ್ಲಿ ಮಹಾತ್ಮಾ ಗಾಂಧೀಜಿ(ಸಾಬರಮತಿ), ಸರ್ದಾರ ವಲ್ಲಭಭಾಯಿ ಪಟೇಲ್(ಬಾರ್ಡೋಲಿ), ರಾಜಾಜಿ(ತ್ರಿಚುನಗೂಡ), ಆಚಾರ್ಯ ಕೃಪಲಾನಿ(ಸೇವಾಪುರಿ) ರಾಜೇಂದ್ರ ಪ್ರಸಾದ(ಸದಾಕತ) ಹಾಗೂ ಗಂಗಾಧರರಾವ್ ದೇಶಪಾಂಡೆ(ಹುದಲಿ) ಅವರ ನೇತೃತ್ವದಲ್ಲಿ ದೇಶದಾದ್ಯಂತ ಆರು ಆಶ್ರಮಗಳು ಆರಂಭಗೊಂಡವು.

1923ರಲ್ಲಿ ಕುಮರಿ ಆಶ್ರಮದಲ್ಲಿ ಖಾದಿ ಬೀಜಾಂಕುರಗೊಂಡರೂ 1925ರಿಂದ ಹುದಲಿ ಗ್ರಾಮದಲ್ಲಿ ಖಾದಿ ಉತ್ಪಾದನೆಗೆ ಚಾಲನೆ ದೊರಕಿತು.

ರಾಮಚಂದ್ರ ವಡವಿ, ಪುಂಡಲೀಕಜಿ ಕಾತಗಡೆ, ತಿಮ್ಮಪ್ಪ ನಾಯಕ, ಅಣ್ಣಾ ಬಸಪ್ಪ, ವಾಮನರಾವ್ ಬಿದರಿ, ಅಣ್ಣು ಗುರೂಜಿ, ಗಂಗಪ್ಪಾ ಯಮಕನಮರ್ಡಿ ಸೇರಿದಂತೆ ಅನೇಕ ಗಾಂಧಿವಾದಿಗಳು ಖಾದಿ ಪ್ರಚುರಪಡಿಸುವಲ್ಲಿ ಪ್ರಮುಖ ಪಾತ್ರವಹಿಸಿದರು.

> ಸ್ವಾವಲಂಬನೆಯ ಪ್ರತೀಕವಾಗಿರುವ ಖಾದಿ ಉತ್ಪಾದನೆಯ ಉದ್ದೇಶದೊಂದಿಗೆ ಆರಂಭಗೊಂಡಿರುವ ಹುದಲಿಯ ಸಂಘವು ಗುಣಮಟ್ಟದ ಖಾದಿಯ ಜತೆಗೆ ರುಚಿಕರ ಉಪ್ಪಿನಕಾಯಿ, ಆರೋಗ್ಯಸ್ನೇಹಿ ಸಾಬೂನು, ಪರಿಸರಸ್ನೇಹಿ ಗೋಬರ್‌ಗ್ಯಾಸ್ ಮತ್ತು ಅಗರಬತ್ತಿ ಉತ್ಪಾದನೆಯಲ್ಲೂ ಸೈ ಎನಿಸಿಕೊಂಡಿದೆ.





ಈ ಸಂದರ್ಭದಲ್ಲಿ ನಡೆದ ಕಾಯ್ದೆ ಭಂಗ ಚಳವಳಿ ಹಾಗೂ ಉಪ್ಪಿನ ಸತ್ಯಾಗ್ರಹದ ಪರಿಣಾಮ ಕುಮರಿ ಆಶ್ರಮದ ಮೇಲೆ ಬ್ರಿಟೀಷ್‌ರ ಕಣ್ಣುಬಿತ್ತು. ಆಶ್ರಮ ಜಪ್ತು ಮಾಡಿದ ಬ್ರಿಟೀಷರು ಅನೇಕ ಮುಖಂಡರನ್ನು ಜೈಲಿಗೆ ಕಳುಹಿಸಿದರು.

ಈ ಘಟನೆಯ ಬಳಿಕ ಕುಮರಿ ಆಶ್ರಮದ ಖಾದಿ ಕೆಲಸವು 1934ರಿಂದ 1944ರವರೆಗೆ ಚರಕಾ ಸಂಘದಿಂದ ಮುಂದುವರೆಸಲ್ಪಟ್ಟಿತು. ಪುಂಡಲೀಕಜಿ ಕಾತಗಡೆ ಅವರು 1944ರಲ್ಲಿ ಗ್ರಾಮ ಸೇವಾ ಸಮಿತಿ ಸ್ಥಾಪಿಸಿ ಅದರ ಮೂಲಕ ಖಾದಿ ಉತ್ಪಾದನೆಯನ್ನು ಆರಂಭಿಸಿದರು. ಹುದಲಿಯಲ್ಲಿ ಖಾದಿ ಕೆಲಸವು ಈಗಲೂ ಯಶಸ್ವಿಯಾಗಿ ನಡೆದಿದೆ.



ಸ್ವಾವಲಂಬನೆಯ ಪ್ರತೀಕವಾಗಿರುವ ಖಾದಿ ಉತ್ಪಾದನೆಯ ಉದ್ದೇಶದೊಂದಿಗೆ ಆರಂಭಗೊಂಡಿರುವ ಹುದಲಿಯ ಸಂಘವು ಗುಣಮಟ್ಟದ ಖಾದಿಯ ಜತೆಗೆ ರುಚಿಕರ ಉಪ್ಪಿನಕಾಯಿ, ಆರೋಗ್ಯಸ್ನೇಹಿ ಸಾಬೂನು, ಪರಿಸರಸ್ನೇಹಿ ಗೋಬರ್‌ಗ್ಯಾಸ್ ಮತ್ತು ಅಗರಬತ್ತಿ ಉತ್ಪಾದನೆಯಲ್ಲೂ ಸೈ ಎನಿಸಿಕೊಂಡಿದೆ.

ಎಂಭತ್ತೈದು ವರ್ಷದ ಗಂಗಪ್ಪ ಮಾಳಗಿ ಅವರು, ಗಾಂಧೀಜಿ ಹುದಲಿ ಗ್ರಾಮಕ್ಕೆ ಭೇಟಿ ನೀಡಿದಾಗಿನ ಸಂಭ್ರಮವನ್ನು ಈ ರೀತಿ ಮೆಲುಕು ಹಾಕುತ್ತಾರೆ.

'ಸಮೀಪದ ಸುಣಧಾಳ ರೈಲು ನಿಲ್ದಾಣದಲ್ಲಿ ಬಂದಿಳಿದ ಗಾಂಧೀಜಿ ಹುದಲಿ ಗ್ರಾಮದ ಕಡೆ ಬಂಡಿಯಲ್ಲಿ ಬರುವಾಗ ಇಡೀ ಊರಿಗೆ ಊರೇ ಅವರ ಸ್ವಾಗತಕ್ಕೆ ಕಾದು ನಿಂತಿತ್ತು. ಗಾಂಧೀಜಿ ಹಾಗೂ ಅವರ ಜತೆಗೆ ಆಗಮಿಸಿದ್ದ ಸುಮಾರು ಎರಡು ನೂರು ಜನರ ವಸತಿಗಾಗಿ ತಾತ್ಕಾಲಿಕವಾಗಿ ಜೋಳದ ದಂಟು ಹಾಗೂ ಹುಲ್ಲಿನ ಮನೆಗಳನ್ನು ನಿರ್ಮಿಸಲಾಗಿತ್ತು. ನೂಲುವುದಕ್ಕೆ ಹಂಜಿ ನೀಡಲು ಹೋದಾಗ ಗಾಂಧೀಜಿ ಅವರು ನನ್ನ ಬೆನ್ನು ಚಪ್ಪರಿಸಿದ್ದು ಈಗಲೂ ನೆನಪಿದೆ' ಎನ್ನುತ್ತಾರೆ ಗಂಗಪ್ಪ ಮಾಳಗಿ.

ಹುದಲಿ ಗ್ರಾಮದ ಪ್ರತಿ ಕುಟುಂಬದ ಹಿರಿಯರು ಗಾಂಧೀಜಿಯವರ ಜತೆ ಏಳು ದಿನಗಳನ್ನು ಕಳೆದಿರುವುದರಿಂದ ಹುದಲಿಯ ಮನೆ ಮನೆಗಳಲ್ಲಿ ಖಾದಿ ಬಗ್ಗೆ ಈಗಲೂ ಅಭಿಮಾನ ಹುದುಗಿದೆ.

ಪ್ರತಿದಿನ ಬೆಳಿಗ್ಗೆ ಹುದಲಿ ಖಾದಿ ಗ್ರಾಮೋದ್ಯೋಗಕ್ಕೆ ಬರುವ ಎಂಭತ್ತೈದು ವರ್ಷದ ಬಸಮ್ಮ ಶಂಕ್ರಪ್ಪ ಬನದವರ ಈಗಲೂ ಚರಕಾದಲ್ಲಿ ಖಾದಿ ನೂಲುವ ಮೂಲಕ ದಿನಕ್ಕೆ ಕನಿಷ್ಠ 160 ರೂಪಾಯಿ ಗಳಿಸುತ್ತಾರೆ! ಇದು ಗಾಂಧಿಗ್ರಾಮ ಎಂದು ಕರೆಯಲ್ಪಡುವ ಹುದಲಿ ಜನರ ಖಾದಿ ಪ್ರೇಮಕ್ಕೆ ಸಾಕ್ಷಿ.



ವ್ಯಾಜ್ಯ ಕೇಂದ್ರ

# ವ್ಯಾಜ್ಯ ಪರಿಹಾರ ಕಾರ್ಯಕ್ರಮ

ಸಾಗರ್‌ಕುಮಾರ್ ದೇಸಾಯಿ.

ಯಾದಗಿರಿ ಜಿಲ್ಲೆ ಸುರಪುರ ತಾಲ್ಲೂಕಿನ ಬಲಶೆಟ್ಟಿಹಾಳ ಗ್ರಾಮದಲ್ಲಿ ಮಹಾತ್ಮ ಗಾಂಧೀಜಿಯವರಿಗೊಂದು ಗುಡಿಯಿದೆ. 1949 ರಲ್ಲಿ ಇಲ್ಲಿನ ಆದರ್ಶ ಶಿಕ್ಷಕ ದಿ. ಹಂಪಣ್ಣ ಸಾಹುಕಾರ್ ಸ್ವತಃ ಸಿಮೆಂಟ್‌ನಿಂದ ಗಾಂಧೀಜಿಯ ಪುತ್ಥಳಿ ತಯಾರಿಸಿ, ಗುಡಿಯನ್ನು ನಿರ್ಮಿಸಿದ್ದಾರೆ. ಅಂದಿನಿಂದಲೂ ಈವರೆಗೂ ಇಲ್ಲಿ ನಿತ್ಯವೂ ಗಾಂಧೀ ಸ್ಮರಣೆ ನಡೆಯುತ್ತದೆ.

ಗ್ರಾಮದ ಸರ್ಕಾರಿ ಶಾಲೆ ಆವರಣದಲ್ಲಿರೋ 'ಗಾಂಧೀ ಗುಡಿ'ಯ ಕಟ್ಟೆಯಲ್ಲೇ ಸ್ಥಳೀಯ ವ್ಯಾಜ್ಯಗಳನ್ನು ಬಗೆಹರಿಸಲಾಗುತ್ತದೆ. ಬಲಶೆಟ್ಟಿಹಳ್ಳಿಯ ಗಾಂಧಿಗುಡಿಯು ಸ್ಥಳೀಯ ವ್ಯಾಜ್ಯ ಪರಿಹಾರಕ್ಕೆ ಒಂದು ಮಾದರಿ ವ್ಯವಸ್ಥೆಯಾಗಿದೆ. ಕಳೆದ ವರ್ಷ ಗುಡಿ ಜೀರ್ಣೋದ್ಧಾರ ಕಂಡಿದೆ. ಗಾಂಧೀಜಿಯ ಹುಟ್ಟೂರು ಪೋರಬಂದರಿನ ನಂತರ ಗಾಂಧೀಜಿ ಗುಡಿ ಇರುವುದು ಇಲ್ಲಿ ಮಾತ್ರ.



# ಗಾಂಧಿ ಸ್ಮೃತಿಯಲ್ಲಿ ಮುಧೋಳ ಆಶ್ರಮ

ಪ್ರಸನ್ನ
ಹಿರಿಯ ರಂಗಕರ್ಮಿ ಹಾಗೂ ಗಾಂಧೀ ಚಿಂತಕರು

ಚಿತ್ರಗಳು : ಎಂ. ಹೆಚ್. ನದಾಫ್

**ಮು**ಧೋಳದಲ್ಲೊಂದು ಆಶ್ರಮವಿದೆ. ವಾತ್ಸಲ್ಯಧಾಮ ಎಂದು ಅದರ ಹೆಸರು. ಮುಧೋಳದಿಂದ ಬೆಳಗಾವಿಗೆ ಹೋಗುವ ರಸ್ತೆಯಲ್ಲಿ ಮುಕ್ಕಾಲು ಕಿಲೋಮೀಟರು ನಡೆದರೆ ರಸ್ತೆಯ ಎಡಬದಿಯಲ್ಲಿದೆ ಸಣ್ಣದೊಂದು ಆಶ್ರಮ. ವಿನೋಬಾಭಾವೆಯವರ ಕೆಲವು ಶಿಷ್ಯರು, ಇಂದಿಗೆ ಮೂವತ್ತಮೂರು ವರ್ಷಗಳ ಹಿಂದೆ ಆರಂಭಿಸಿದ ಆಶ್ರಮವಿದು. ಮಣ್ಣಿನ ಬಣ್ಣದಲ್ಲಿರುವ ಮಣ್ಣಲ್ಲೇ ಅಡಗಿ ಕುಳಿತಿರುವ, ರೈತಾಪಿ ಆಶ್ರಮ.

ಆಶ್ರಮದ ಉದ್ದೇಶ ಋಷಿಖೇತಿ ಮಾಡುವುದು. ಅರ್ಥಾತ್, ಬೇಸಾಯ ಹೈನುಗಾರಿಕೆ ಹಾಗೂ ನೂಲುವಿಕೆಯ ಮೂಲಕ ಹಿಂದಿನ ಕಾಲದ ಋಷಿಗಳಂತೆ ಶ್ರಮಸಹಿತವಾದ ಸರಳಬದುಕನ್ನು ಬದುಕುವುದು, ಸಮಾನತೆ ಹಾಗೂ ಸಹಕಾರ ಮನೋಭಾವದಿಂದ ಬದುಕುವುದು. ಆಶ್ರಮದ ಮತ್ತೊಂದು ಉದ್ದೇಶ ಕಾಂಚನ ಮುಕ್ತಿ. ಅರ್ಥಾತ್, ಸಾಧ್ಯವಿದ್ದಷ್ಟೂ ಹಣದ ಮೇಲಿನ ಅವಲಂಬನೆಯಿಂದ ಮುಕ್ತರಾಗಿ ಬದುಕುವುದು.


ಈಗ, ಆಶ್ರಮವಾಸಿಗಳಿಗೆ ವಯಸ್ಸಾಗಿದೆ. ಕೃಷಿಯ ಕೆಲಸಕ್ಕಾಗಿ ಕೆಲವೊಮ್ಮೆ ಕೃಷಿ ಕಾರ್ಮಿಕರನ್ನು ಬಳಸಿಕೊಳ್ಳಲಾಗುತ್ತಿದೆ. ಉಪ್ಪು ಬೆಂಕಿಪೊಟ್ಟಣ ಎಣ್ಣೆ ಮೊದಲಾದ ಪದಾರ್ಥಗಳನ್ನು ಕೊಂಡು ತರಲಾಗುತ್ತಿದೆ. ವಿದ್ಯುಚ್ಛಕ್ತಿಯ ಬಳಕೆ ಮಾಡಲಾಗುತ್ತಿದೆ. ಮಿಕ್ಕಂತೆ, ಈಗಲೂ ಆಶ್ರಮವಾಸಿಗಳು ತಾವು ಬೆಳೆದದ್ದನ್ನು ತಿನ್ನುತ್ತಾರೆ, ಬೆಳೆಯಲಾರದ್ದು ಅಥವಾ ತಮ್ಮದೇ ಕೈಗಳಿಂದ ಉತ್ಪಾದಿಸಲಾಗದ್ದನ್ನು ಬಳಸದೆ ಉಳಿಯುತ್ತಾರೆ.

ಶ್ರೀಮಂತ ಆಶ್ರಮಗಳ ಅಟ್ಟಹಾಸ, ಅಲ್ಲಿನ ವ್ಯರ್ಥಕ್ರಿಯಾವಿಧಿಗಳು ಹಾಗೂ ಮೂಢನಂಬಿಕೆಗಳನ್ನು ಕಂಡು ಸಿನಿಕರಾಗಿರುವ ನಮ್ಮನ್ನು ವಾತ್ಸಲ್ಯಧಾಮದ ಸರಳತೆ ಸೆಳೆಯುತ್ತದೆ. ಬೃಹದಾಕಾರದ ಕಾಂಪೌಂಡುವಾಲುಗಳು ಈ ಆಶ್ರಮವನ್ನು ಸುತ್ತುವರೆದಿಲ್ಲ, ಗನ್ನು ಧರಿಸಿರುವ ಸೆಕ್ಯೂರಿಟಿಗಾರ್ಡುಗಳು ಆಶ್ರಮದ ರಕ್ಷಣೆಗೆ ನಿಂತಿಲ್ಲ, ಕಾರು ಹೆಲಿಕಾಪ್ಟರುಗಳು ಜನರೇಟರುಗಳು ಇಲ್ಲಿ ಆರ್ಭಟಿಸುತ್ತಿಲ್ಲ, ಫಳಫಳ ಹೊಳೆಯುವ ಕಾವಿ ಬಟ್ಟೆ ಇಲ್ಲಿ ಕಾಣಸಿಗುವುದಿಲ್ಲ, ಮೂರೂ ಹೊತ್ತು ಮಂತ್ರಗಳನ್ನು ಉಗುಳುತ್ತಿರುವ ಸ್ಪೀಕರುಗಳು ಇಲ್ಲಿಲ್ಲ, ಶಂಖ ಜಾಗಟೆಗಳು ಯಾಗಶಾಲೆಗಳು ಊಟದ ಮನೆಗಳು, ಉಂಡಎಲೆಗಳಿಗಾಗಿ ಕಚ್ಚಾಡುವ ನಾಯಿಗಳು ಇಲ್ಲಿ ಕಣ್ಣಿಗೆ ಬೀಳುವುದಿಲ್ಲ. ದೇಶಾವರಿ ನಗೆ ಬೀರುವ ಮ್ಯಾನೇಜರುಗಳು ನಿಮಗೆ ಅಡ್ಡಹಾಯುವುದಿಲ್ಲ.

ವಿನೋಬಾಭಾವೆಯವರ ತಾಯಿ ಈ ಭಾಗದವರು, ಜಮಖಂಡಿಯವರು. ಕನ್ನಡ ಮಾತನಾಡುತ್ತಿದ್ದವರು. ಅವರ ವಾತ್ಸಲ್ಯದ ನೆನಪಿನಲ್ಲಿ ಸ್ಥಾಪಿಸಿದ ಆಶ್ರಮವಿದು. ಆಶ್ರಮದ ಮುಖ್ಯಸ್ಥರಾಗಿದ್ದ ಸ್ವಾಮಿ ಸೇವಾನಂದರು ಹೋದವರ್ಷ ತಮ್ಮ ತೊಂಬತ್ತೇಳನೆಯ ವಯಸ್ಸಿನಲ್ಲಿ ತೀರಿಕೊಂಡರು. ಈಗ ಅಲ್ಲಿ ಉಳಿದಿರುವುದು, ಎಂಬತ್ತೆಂಟು ವರ್ಷ ವಯಸ್ಸಿನ ಒಬ್ಬ ವೃದ್ಧೆ, ಹೆಸರು ಮೀರಾಕೊಪ್ಪಿಕರ್, ಹಾಗೂ ಅರವತ್ತರ ಗಡಿಯಲ್ಲಿರುವ ಒಬ್ಬ ಗಂಡಸು, ಹೆಸರು ರಮೇಶ್, ಮಾತ್ರ.

ಕೆಲವು ವಾರಗಳ ಹಿಂದೆ ನಾನಲ್ಲಿಗೆ ಹೋಗಿದ್ದೆ. ಆಶ್ರಮದ ಕಡೆ ಹೋಗುವ ಬೆಳಗಾವಿ ರಸ್ತೆಯ ಅಗಲೀಕರಣ ನಡೆದಿತ್ತು. ಬೃಹತ್‌ಗಾತ್ರದ ಜೆಸಿಬಿ ಯಂತ್ರವೊಂದು ರಸ್ತೆಯನ್ನು ಬಗೆದು ಬಗೆದು ಕೆದರುತ್ತಿತ್ತು. ವಿವಿಧ ಬಗೆಯ ರಸ್ತೆತಯಾರಿ ಯಂತ್ರಗಳು, ಮಾನವರಿಗೆ ಬೆದರಿಕೆಯೊಡ್ಡುತ್ತ, ಹಿಂದಕ್ಕೆ ಮುಂದಕ್ಕೆ ಚಲಿಸುತ್ತಿದ್ದವು. ಮುರಿದ ರಸ್ತೆಯ ಜಲ್ಲಿಕಲ್ಲಿನ ರಾಶಿಯ ಮೇಲೆ ಕಾಲೂರಲಾರದೆ ಕಾಲೂರುತ್ತ ನಡೆದಿದ್ದೆ. ನನ್ನಂತೆಯೇ ನಡೆದಿದ್ದ ಹಳ್ಳಿಗನೊಬ್ಬನನ್ನು ಆಶ್ರಮವೆಲ್ಲಿದೆ ಎಂದು ಕೇಳಿದೆ. ಬನ್ನಿ ನಾನೂ ಅಲ್ಲಿಗೇ ಹೋಗುತ್ತಿದ್ದೇನೆ, ಹಾಲು ತರಲಿಕ್ಕೆ, ಎಂದು ಹೇಳಿ ಹೆಜ್ಜೆ ಹಾಕಿದ.

ಆಶ್ರಮದ ಗೇಟು ಮುರಿದಿತ್ತು, ತೆರೆದಿತ್ತು. ಒಳಗೆ, ಒಂದು ಬದಿಯಲ್ಲಿ ಉತ್ತಲಿಕ್ಕೆ ಹದಮಾಡಿಟ್ಟ ನೆಲ, ಮತ್ತೊಂದು ಬದಿಯಲ್ಲಿ ಈಗಷ್ಟೆ ನೆಟ್ಟ ಬಾಳೆಯ ತೋಟ. ಮಧ್ಯದಾರಿ. ದಾರಿಯ ಇಕ್ಕೆಲಗಳಲ್ಲಿ ಮೇವಿಗೆಂದು ಬೆಳೆಸಲಾಗಿದ್ದ ಸರಕಾರಿ ಹುಲ್ಲು ಆಳೆತ್ತರ ಬೆಳೆದಿತ್ತು. ಎದುರಿಗೆ, ಕೊಂಚ ದೂರದಲ್ಲಿ



ವಿನೋಬಾ ಭಾವೆ

> ಆಶ್ರಮದ ಉದ್ದೇಶ ಋಷಿಖೇತಿ ಮಾಡುವುದು. ಅರ್ಥಾತ್, ಬೇಸಾಯ ಹೈನುಗಾರಿಕೆ ಹಾಗೂ ನೂಲುವಿಕೆಯ ಮೂಲಕ ಹಿಂದಿನ ಕಾಲದ ಋಷಿಗಳಂತೆ ಶ್ರಮಸಹಿತವಾದ ಸರಳಬದುಕನ್ನು ಬದುಕುವುದು, ಸಮಾನತೆ ಹಾಗೂ ಸಹಕಾರ ಮನೋಭಾವದಿಂದ ಬದುಕುವುದು.



ಮೀರಾತಾಯಿ ಕೊಪ್ಪಿಕರ್



ಆಶ್ರಮದ ಮನೆ. ಹಳೆಯ ಮನೆ, ಹತ್ತಾರು ಜನರು ಇದ್ದಿರಬಹುದಾದ ಮನೆ. ಮನೆಯ ಅಂಗಳದಲ್ಲಿ ತುಳಸಿಕಟ್ಟೆಯ ಮಾದರಿಯ ಒಂದೆರಡು ದೇವರ ಕಟ್ಟೆಗಳು. ಒಂದು ವೃಂದಾವನದ ಮೇಲೆ ಗತಿಸಿದ ಆಶ್ರಮವಾಸಿಯೊಬ್ಬರ ಹೆಸರು, ಜನನ ಮರಣಗಳ ದಿನಾಂಕ ನಮೂದಿಸಲಾಗಿತ್ತು, ಬ್ರಾಹ್ಮಿಲಿಪಿಯಲ್ಲಿ ನಮೂದಿಸಲಾಗಿತ್ತು.

ನನ್ನೊಡನೆ ಬಂದ ರೈತ ನಡುಮನೆಯ ಬಾಗಿಲೊಳಗೆ ತಲೆಹಾಕಿ, ಯಾರೋ ಸಾಗರದ ಕಡೆಯವರಂತೆ, ನೋಡಲು ಬಂದಿದ್ದಾರೆ ಎಂದು ಕೂಗು ಹಾಕಿದ. ಹಾಲಿಗೆಂದು ತಂದಿದ್ದ ಸ್ಟೀಲಿನ ಡಬ್ಬಿಯನ್ನು ಬಾಗಿಲಿನ ಬದಿಗಿಟ್ಟು ದೇವರ ಕಟ್ಟೆಗೆ ನಮಿಸಿ ಗಂಟೆ ಬಾರಿಸಿದ. ಇಲ್ಲಿಗೇ ಬನ್ನಿ ಕೊಟ್ಟಿಗೆಯಲ್ಲಿದ್ದೇನೆ ಎಂದು ಗಂಡು ಧ್ವನಿಯೊಂದು ನನ್ನನ್ನು ಕೂಗಿ ಕರೆಯಿತು. ನಾನು ಅನುಮಾನಿಸುತ್ತ, ಹೆಜ್ಜೆಯ ಮೇಲೊಂದು ಹೆಜ್ಜೆಯನ್ನಿಡುತ್ತ, ಖಾಲಿ ಮನೆಯ ಒಳಹಾಯ್ದು ಹಿಂಭಾಗದ ಕೊಟ್ಟಿಗೆಯತ್ತ ನಡೆದೆ.

ಬೂದುಬಣ್ಣದ ಮಣ್ಣಿನ ಗೋಡೆಗಳು, ಮರದಕಂಬಗಳು, ಗೋಡೆಗಾನಿಸಿಟ್ಟ ಧಾನ್ಯದ ಚೀಲಗಳು, ತಕ್ಕಡಿ, ತೂಕದ ಕಲ್ಲು ಕಂಡವು. ಜಂತಿಯ ಮೇಲೆ ಧೂಳು ಹಿಡಿದ ಒಂದಿಷ್ಟು ಪತ್ರಿಕೆಗಳು ಪುಸ್ತಕಗಳು. ಎದುರು ಬದಿಯ ಗೋಡೆಗೆ ಆನಿಸಿದಂತೆ, ಗತಿಸಿದ ಹಿರಿಯರೊಬ್ಬರ ಫೋಟೋ ಇಡಲಾಗಿತ್ತು. ಅವರೇ ಸೇವಾನಂದರಿರಬೇಕು. ಒರಟುಮುಖ, ಮುಖದ ತುಂಬ ಕುರುಚಲು ಗಡ್ಡ, ಆಳ ಗೆರೆಗಳು ಹಾಗೂ ಮುಗ್ಧನಗೆ.

ಎಡಕ್ಕೊಂದು ಕೋಣೆ ಬಲಕ್ಕೊಂದು ಕೋಣೆ. ಎದುರಿಗೆ ಮತ್ತೊಂದು ನಡುಮನೆ. ಅದರಾಚೆ ಕೊಟ್ಟಿಗೆ. ಕೊಟ್ಟಿಗೆ ತಲುಪಿದೆ. ಆರೆಂಟು ದನಗಳಿದ್ದವು ಅಲ್ಲಿ, ಆರೋಗ್ಯ ಸೂಸುತ್ತಿದ್ದವು. ತಲೆಗೊಂದು ಲಪಾಟಿ ಸುತ್ತಿಕೊಂಡು ಸೊಂಟಕ್ಕೊಂದು ಅಡ್ಡಪಂಚೆ ಬಿಗಿದು, ಮೇಲೆತ್ತಿ ಕಟ್ಟಿಕೊಂಡು ಕೆಲಸ ಮಾಡುತ್ತಿದ್ದ ಬತ್ತಲೆ ಗಂಡಸೊಬ್ಬರು ಮುಖ ಮೇಲೆತ್ತಿ ಮುಗುಳುನಕ್ಕರು. ಬಂದೆ ಬಂದೆ ಅಂದರು.

ಹಿತ್ತಲಿಗೆ ಬಂದೆ. ಕೊಟ್ಟಿಗೆಯಾಚೆಗೆ ಮತ್ತಷ್ಟು ಹೊಲಗಳು ಕಂಡವು. ಬಿತ್ತನೆ ನಡೆದಿತ್ತು. ಬಲಬದಿಗೆ ದೊಡ್ಡದೊಂದು ತೆರೆದ ಬಾವಿ, ಕಲ್ಲು ಕಟ್ಟಿಸಿದ್ದು. ಅದಕ್ಕೆ ಮರದ ರಾಟೆಗಳು. ಇಣುಕಿದೆ ಸಮೃದ್ಧ ನೀರು ಕಂಡಿತು, ಸಾಕಷ್ಟು ಮೇಲುಗಡೆಯೇ ಕಂಡಿತು. 'ಬಾವಿಯಲ್ಲಿ ನೀರಿದೆ!' ಎಂದು ಉದ್ಗರಿಸಿದೆ. ಲಪಾಟಿ ಸುತ್ತಿಕೊಂಡು ಕೆಲಸದಲ್ಲಿ ನಿರತನಾಗಿದ್ದ ವ್ಯಕ್ತಿ, ಕೊಟ್ಟಿಗೆಯೊಳಗಿನಿಂದಲೇ, 'ಈಗಂತೂ ಇದೆ, ಈ ವರ್ಷದ ಬರಗಾಲಕ್ಕೆ ಏನಾಗುವುದೋ ಕಾಣೆ' ಎಂದರು. ಆಚೀಚೆ ತರಕಾರಿ ಮಡಿಗಳು ಹಣ್ಣಿನ ಮರಗಳು ಗೊಬ್ಬರದ ಗುಂಡಿ ಕಕ್ಕಸುಮನೆಗಳು ನೀರಿನತೊಟ್ಟಿ ಇತ್ಯಾದಿಗಳು ಚದುರಿಕೊಂಡಿದ್ದವು. ಯಾವುದೂ ವ್ಯವಸ್ಥಿತವಾಗಿರಲಿಲ್ಲ, ಆದರೆ ಪಾಳುಬಿದ್ದಂತೆಯೂ ಇರಲಿಲ್ಲ. ನಡುಮನೆಗೆ ಬಂದೆ. ಬೋಳು ಮಂಚ ಒಂದರ ತುದಿಗೆ ಕುಳಿತೆ. ಅಲ್ಲಿದ್ದದ್ದು ಅದೊಂದೇ ಆಸನ, ಜನರು ಕೂತು ಕೂತು ಹಲಗೆಗಳು ಫಳಫಳನೆ ಹೊಳೆಯುತ್ತಿದ್ದವು. ಸಮಯ ಅವಸರಿಸದೆ ಸಾಗುತ್ತಿತ್ತು.

ಬಲಬದಿಯ ಕೋಣೆಯಿಂದ ಮುದುಕಿಯೊಂದು ಕೋಲೂರಿಕೊಂಡು ಹೊರಬಿದ್ದಿತು. ತನಗಿಂತಲೂ ಎತ್ತರವಿದ್ದ ಕೋಲು. ಬೆನ್ನು ಪೂರ್ತಿಯಾಗಿ ಬಾಗಿಹೋಗಿತ್ತು. ಆಕೆಯುಟ್ಟಿದ್ದ





ಸೀರೆ ಬೂದುಬಣ್ಣದ ಒರಟು ಬಟ್ಟೆ ಸೀರೆಗಿರಬೇಕಾದ ಅಂಚುಗಳು ಸೆರಗುಗಳು ಹೂವಿನ ಚಿತ್ತಾರಗಳು ನವಿರುತನ ಯಾವುದೂ ಅದಕ್ಕಿರಲಿಲ್ಲ. ಸೀರೆ ಜಾರದಿರಲೆಂದು ಸೊಂಟಕ್ಕೆ ಬಿಗಿದುಕೊಂಡು ಗಂಟು ಹಾಕಿಕೊಂಡಿತ್ತು ಮುದುಕಿ.

ಈಕೆಯ ಮುಖವು, ಅದೇಕೋ, ಅರವಿಂದರ ಆಶ್ರಮದ ಮಾತೆಯವರ ಜರ್ಜರಿತವಾದ ಮುಖವನ್ನು ನನಗೆ ನೆನಪಿಸಿತು. ಈಕೆಯದೂ ಸಹ, ಯೂರೋಪಿನ ಮೂಲದ ಆಕೆಯಷ್ಟೇ ಬಿಳುಪಿನ ಬಣ್ಣ. ಅದೇ ಮಾದರಿಯ ಜೋಲುಕೆನ್ನೆಗಳು ಜೋಲುವ ತುಟಿಗಳು ದೊಡ್ಡ ಕಣ್ಣುಗಳು ಹಾಗೂ ನೇರ ನಿರ್ಭೀತ ನೋಟ. ಎಲ್ಲಿಂದ ಬಂದಿರಿ ಎಂದರು. ಮಾತು ಗಟ್ಟಿಮುಟ್ಟಾಗಿತ್ತು. ಆಕೆಯ ಮಾತಿನಲ್ಲಾಗಲೀ ಮನಸ್ಥಿತಿಯಲ್ಲಾಗಲೀ ಮುದಿತನದ ನಡುಕ ಕಂಡುಬರಲಿಲ್ಲ. ಎಲ್ಲಿಂದ ಬಂದೆನೆಂದು ಹೇಳಿದೆ. ಅಷ್ಟಿಷ್ಟು ಮಾತನಾಡಿ, ಅಡಿಗೆ ಮಾಡಬೇಕಿದೆ ಅಲ್ಲಿಗೇ ಬನ್ನಿ ಮಾತು ಮುಂದುವರೆಸಬಹುದು ಎಂದು ಹೇಳಿ ಕೋಲೂರುತ್ತ ನಡೆದು ಎಡಭಾಗದ ಕೋಣೆ ಹೊಕ್ಕಿತು ಮುದುಕಿ.

ಕೆಲವರು ಮುದಿತನಕ್ಕೆ ಶರಣಾಗಿ ಬಿಡುತ್ತಾರೆ, ಕಾಲುಸೋಲುವ ಮೊದಲೇ ತಾವು ಸೋತು ಬಿಡುತ್ತಾರೆ. ಆದರೆ ಈಕೆ ಹಾಗಿರಲಿಲ್ಲ. ಸರ್ಕಸ್ಸಿನ ಹುಲಿಯನ್ನು ಪಳಗಿಸಿದಂತೆ, ಈಕೆ ತನ್ನ ಮುದಿತನವನ್ನು ಪಳಗಿಸಿಕೊಂಡಿದ್ದರು. ಈಕೆಯ ರೀತಿನೀತಿಯಲ್ಲಿ ಗಾಂಭೀರ್ಯವಿತ್ತು, ಆತ್ಮವಿಶ್ವಾಸವಿತ್ತು. ತನ್ನ ವಯಸ್ಸಿನ ಮಿತಿಗಳ ಸಂಪೂರ್ಣ ಅರಿವಿತ್ತು. ನಿಲ್ಲುವುದು ನಡೆಯುವುದು ಕೂರುವುದು ಏಳುವುದು ಎಲ್ಲವೂ ಹರಸಾಹಸವೇ ಆಗುವ ವಯಸ್ಸು ಈಕೆಯದ್ದು, ಅತಿಯಾಗಿ ಶಕ್ತಿ ವ್ಯಯಿಸದೆ ನಾಜೂಕಾಗಿ ಆದರೆ ವ್ಯವಸ್ಥೆಯಿಂದ ಜೀವನ ಸಾಗಿಸುತ್ತಿದ್ದರು ಈಕೆ.

ಊರುವ ಕೋಲನ್ನು ಬಾಗಿಲಿನ ಚೌಕಟ್ಟಿಗೆ ಆನಿಸಿದರು. ಮುಂದೆ ನಡೆದು, ಮೊದಲು ಕೈಚಾಚಿ, ಕೈಗಳಿಗೆ ನೆಲತಾಗಿಸಿ, ಊರಿ, ಮಂಡಿಗಳನ್ನು ಮಡಿಚಿ, ದೇಹ ಸಂಭಾಳಿಸಿ, ಕೆಳಗಿಳಿಸಿ ಕೂತರು. ಕೂರುವಾಗ ಗೋಬರ್ ಗ್ಯಾಸಿನ ಒಲೆಯ ಪಕ್ಕಕ್ಕೆ ಸರಿಯಾಗಿ ತನ್ನನ್ನು ಹೊಂದಿಸಿಕೊಂಡಿದ್ದರು. ಸುತ್ತಲೂ, ಅವುಗಳ ಜಾಗದಲ್ಲಿ, ಆಯಾ ಪದಾರ್ಥಗಳು ಅಲ್ಲಲ್ಲಿ ಲಭ್ಯವಿದ್ದವು. ಪಾತ್ರೆ ಸವುಟು ಲಟ್ಟಣಿಗೆಗಳು ಆಕೆಗಾಗಿ ಕಾದು ನಿಂತಿದ್ದವು. ಒಲೆಯ ಮೇಲೆ ಎಂತಹದ್ದೋ ಅಡಿಗೆ ಬೇಯುತ್ತಿತ್ತು. ಕೈ ಚಾಚಿ ಗೋಬರ್‌ಗ್ಯಾಸಿನ ಬೆಂಕಿ ಸಣ್ಣಗಾಗಿಸಿದರು. ಹಿಟ್ಟು ನಾದಿದರು. ರೊಟ್ಟಿ ತಟ್ಟಿದರು. ಈ ವೇಳೆಗೆ ಮಧ್ಯವಯಸ್ಕ ಗಂಡಸು, ಸಹಾಯಕ್ಕೆ ಬಂದು ನಿಂತರು. ಮಾತು ಮುಂದುವರೆದಿತ್ತು.

ಮಾತಿನಲ್ಲಿ ಸ್ವಾತಂತ್ರ್ಯ ಚಳುವಳಿ ಬಂದು ಹೋಯಿತು, ಪವನಾರಿನ ಆಶ್ರಮ ಬಂದು ಹೋಯಿತು. ವಾತ್ಸಲ್ಯಧಾಮದ ತಾತ್ವಿಕತೆಯ ಚರ್ಚೆ ಬಂತು. ಶಿಸ್ತಿಗಿಂತ ಸತ್ಯ ಮುಖ್ಯ ಅಂದರು. ಇದ್ದಷ್ಟು ದಿನ ಸತ್ಯಕ್ಕೆ ಬದ್ಧರಾಗಿ ಇದ್ದರಾಯಿತು ಅಂದರು. ಆಶ್ರಮ ಮುಂದೆ ನಡೆದೀತೇ ಇಲ್ಲವೇ ಎಂಬುದು ಮುಖ್ಯವಲ್ಲ, ಆಶ್ರಮವು ಪ್ರತಿಪಾದಿಸುವ ವಿಚಾರ ಮುಖ್ಯ ಅಂದರು. ಗಂಡಸು ಕೊಬ್ಬರಿ ತುರಿಯತೊಡಗಿದ್ದರು. ಆತ ಮಿತಭಾಷಿ, ಹಿರಿಮಗನಿದ್ದಂತೆ.

ಲಟ್ಟಣಿಗೆಯಾಡಿಸುತ್ತಿದ್ದ ಕೈಗಳನ್ನು ಗಮನಿಸುತ್ತಿದ್ದೆ. ಅವುಗಳ ಕೌಶಲ್ಯ ಕಂಡು ಬೆರಗಾಗಿ ಹೋದೆ. ಒಂದಿನಿತೂ ಬಲವಂತವಿರಲಿಲ್ಲ ಅಲ್ಲಿ. ನಾದಿದ ಹಿಟ್ಟಿನ ನಯವಂತಿಕೆ ತಿಳಿದಿತ್ತು ಆ ಕೈಗಳಿಗೆ. ಮಧ್ಯೆ ಮಧ್ಯೆ ಕುದಿಯುತ್ತಿದ್ದ ಪದಾರ್ಥದೊಳಗೆ ಸೌಟು ಅದ್ದಿ ಆಡಿಸಿ ತೆಗೆದರು. ಬೆಂಕಿ ಹಿಂದೆ ಮುಂದೆ ಮಾಡಿದರು. ಎಲ್ಲವೂ ಕುಳಿತಲ್ಲಿಂದಲೇ.

ಗಾಂಧೀಜಿಯವರನ್ನು ಕಣ್ಣಾರೆ ಕಂಡವನಲ್ಲ ನಾನು. ವಿನೋಬಾ, ನಾನು ಹುಟ್ಟಿದ ನಂತರವೂ ಬದುಕಿದ್ದರಾದರೂ, ಅವರನ್ನೂ ಕಂಡಿರಲಿಲ್ಲ ನಾನು. ಈ ಮುದುಕಿಯ ವ್ಯಕ್ತಿತ್ವದಲ್ಲಿ ಅವರ ಕೆಲವು ಲಕ್ಷಣಗಳನ್ನು ಕಂಡೆ. ಈ ಹೊಗೆ ಹಿಡಿದ ಅಡಿಗೆಮನೆ, ಈ ಮುದುಕಿ, ಈ ಮನುಷ್ಯ, ಇವರು ಬೇಯಿಸುತ್ತಿದ್ದ ಆಹಾರದ ಕಂಪು... ಇದೊಂದು ವಿಶ್ವ, ತನ್ನಲ್ಲಿ ತಾನು ಪರಿಪೂರ್ಣವಾದ ಒಂದು ವಿಶ್ವ ಅನ್ನಿಸಿತು ನನಗೆ.

ಆಶ್ರಮಗಳು ಆಧ್ಯಾತ್ಮಿಕತೆಯ ಕೇಂದ್ರಗಳು ಅನ್ನುತ್ತಾರೆ. ಹೆಚ್ಚಿನ ಆಶ್ರಮಗಳಲ್ಲಿ ಆಧ್ಯಾತ್ಮಿಕತೆ ಕಣ್ಣಿಗೆ ರಾಚುವಂತಿರುತ್ತದೆ. ಕಟ್ಟಡದ ಬಣ್ಣದಿಂದ ಹಿಡಿದು ಮೈಕಿನ ಮಂತ್ರಗಳವರೆಗೆ, ಸ್ವಾಮೀಜಿಯ ಬಟ್ಟೆಯಿಂದ ಹಿಡಿದು ಭಕ್ತರ ಜನಿವಾರದವರೆಗೆ ಎಲ್ಲೆಲ್ಲೂ ಪ್ರದರ್ಶನಕ್ಕಿಡಲಾಗಿರುತ್ತದೆ ಆಧ್ಯಾತ್ಮಿಕತೆಯನ್ನು.. ಹಾಗೂ ... ಮಾತು ಮಾತು ಮಾತು. ಮತ್ತು ಊಟ. ಮತ್ತು ದುಡ್ಡು. ಇಲ್ಲಿಯೂ ಕಂಡೆ ನಾನು ಆಧ್ಯಾತ್ಮವನ್ನು. ಆಶ್ರಮವು ಪ್ರತಿಪಾದಿಸುತ್ತಿರುವ ಜೀವನಶೈಲಿಯಲ್ಲಿ ಅಂತರ್ಗತವಾಗಿ ಸದ್ದಿಲ್ಲದೆ ಇತ್ತು ಅದು.

ಊಟಕ್ಕೆ ಕುಳಿತೆವು. ಮತ್ತಿಬ್ಬರು ಸೇರಿಕೊಂಡಿದ್ದರು. ಒಬ್ಬರು, ಮುದುಕರು, ಇತ್ತೀಚೆಗೆ ಆಶ್ರಮ ಸೇರಿಕೊಂಡಿದ್ದರು. ಮತ್ತೊಬ್ಬರು ಪಕ್ಕದ ಹಳ್ಳಿಯವರು. ಮೂಲತಃ ನೇಕಾರ. ಬಡತನದ ಬೇಗೆ ಅತಿಯಾದಾಗ ಸಕ್ಕರೆ ಕಾರ್ಖಾನೆ ಸೇರಿ ದುಡಿದು ನಿವೃತ್ತರಾದವರು. ಆಶ್ರಮಕ್ಕೆ ಆಗಾಗ ಬರುವ ವಾಡಿಕೆಯಿದ್ದವರು. ಅಪ್ಪಟ ಗಾವ್‌ಟಿ ಮನುಷ್ಯ. ಅವರು ಮನೆಯಿಂದಲೇ ಬುತ್ತಿಕಟ್ಟಿ ತಂದಿದ್ದರು. ಆಶ್ರಮದ ಅಡಿಗೆಯ ಜೊತೆಗೆ ಬುತ್ತಿಯ ಅಡಿಗೆ ಹಂಚಿಕೊಂಡು ಉಣ್ಣತೊಡಗಿದೆವು.

ಉಣ್ಣುವುದಕ್ಕೆ ಮುಂಚೆ ಮಧ್ಯವಯಸ್ಕ ಆಶ್ರಮವಾಸಿ ಗಟ್ಟಿ ದನಿ ತೆಗೆದು ದೇವರನ್ನು ನೆನೆದರು. ಒಂದೆರಡು ಶ್ಲೋಕಗಳನ್ನು ರಾಗವಾಗಿ ನುಡಿದರು. ಮುದುಕಿ ಮಾತ್ರ, ತನ್ನ ಪಾಡಿಗೆ ತಾನು, ಊಟದ ಕೊನೆಗಳಿಗೆಯ ತಯಾರಿ ನಡೆಸಿದ್ದರು.

ನಾನು ನೆಟ್ಟಗೆ ಕುಳಿತು ಆಧ್ಯಾತ್ಮ ಭಾವಕ್ಕೆ ಗೌರವ ಸಲ್ಲಿಸಿದೆ. ನನ್ನ ತಲೆಯಲ್ಲಿ ಹಲವು ತರಹದ ಪ್ರಶ್ನೆಗಳೇಳುತ್ತಿದ್ದವು. ಹಿಂದಿನ ಕಾಲದ ಋಷಿಗಳೂ ಮಣ್ಣಿನ ಬಣ್ಣದ ಮನುಷ್ಯರೇ ಆಗಿದ್ದಿರಬಹುದಲ್ಲವೇ, ತಪಸ್ಸೆಂದರೆ ಕಾಯಕದ ಏಕಾಗ್ರತೆಯೇ ಇದ್ದಿರಬಹುದಲ್ಲವೇ? ಆಧ್ಯಾತ್ಮವನ್ನೂ ಸಹ ಸಾಮಾಜಿಕಗೊಳಿಸಬಹುದಲ್ಲವೆ? ಗಾಂಧೀಜಿಯವರ ಪ್ರಕಾರ ಯಜ್ಞ ಮಾಡುವುದೆಂದರೆ ಕರ್ಮ ಮಾಡುವುದು ಎಂದೇ ಅರ್ಥ!

ಆಶ್ರಮದ ಸಪ್ಪೆಯೂಟದ ಜೊತೆ ಪಕ್ಕದ ಹಳ್ಳಿಯವರು ತಂದ ಖಾರದ ಊಟ ಬೆರೆಸಿ ಸುಖವಾಗಿ ಉಂಡೆ. ಮಾತೂ ಬೆರೆಯಿತು. ಊಟವೂ ಬೆರೆಯಿತು. ಊಟ ಮುಗಿಸಿ ಎಲ್ಲರಿಗೂ ನಮಸ್ಕರಿಸಿ ಊರದಾರಿ ಹಿಡಿದೆ. ■



# ಪ್ರಾಣಿ ಬಲಿ ನಿಷೇಧ

ಗಾಂಧೀಜಿಯವರ ಕಾರವಾರ ಭೇಟಿಯ ಸಂದರ್ಭದಲ್ಲಿ ತಂಗಿದ್ದ ಸ್ಥಳ

**ನಾಗರಾಜ ಹರಪನಹಳ್ಳಿ**

**1942 ಮಾರ್ಚ್ 26** ಹರಿಜನ ಪತ್ರಿಕೆಯಲ್ಲಿ ಶಿರಸಿಯ ಮಾರಿಕಾಂಬ ಜಾತ್ರೆ ಕುರಿತಂತೆ ಗಾಂಧೀಜಿ ಬರಹ ಈ ರೀತಿಯಿದೆ–

"ಶಿರಸಿಯಲ್ಲಿ ನಡೆಯುವ ಮಾರಿಕಾಂಬಾ ಜಾತ್ರೆ ಬೊಂಬಾಯಿ ಪ್ರಾಂತದಲ್ಲೇ ಬಹಳ ದೊಡ್ಡದು. ಈ ಭಾಗದಲ್ಲಿ ದೇವಾಲಯ ಬಹಳ ಪ್ರಸಿದ್ಧ. ಹೇರಳವಾಗಿ ಆದಾಯ ಇದೆ. ಒಂದು ಹೈಸ್ಕೂಲು, ಒಂದು ಹೆರಿಗೆ ಆಸ್ಪತ್ರೆ ಮುಂತಾದವುಗಳನ್ನು ಈ ಹಣದಿಂದ ನಡೆಸಲು ಸಹಾಯ ಮಾಡುತ್ತಾರೆ. ಹರಿಜನ ಚಳುವಳಿ ಪ್ರಾರಂಭವಾದಾಗ ಹರಿಜನರ ಪ್ರವೇಶಕ್ಕೆ ಎಡೆ ಮಾಡಿಕೊಟ್ಟ ಮೊಟ್ಟ ಮೊದಲನೆಯ ದೇವಾಲಯ ಇದು".

ಗಾಂಧೀಜಿಯವರು ಶಿರಸಿಗೆ ಬಂದಾಗ ಕುರಿ, ಕೋಣ, ಕೋಳಿಗಳನ್ನು ಬಲಿ ಕೊಡಬಾರದು ಎಂದು ಹೇಳಿದ್ದರು. ಅಲ್ಲಿನ ಶಾಸಕರೂ ಮತ್ತು ದೇವಾಲಯದ ಧರ್ಮದರ್ಶಿಗಳೂ ಆಗಿದ್ದ ಎಸ್.ಎಸ್.ಕೇಶವ್ವಾನ್ ಅವರು ಗಾಂಧೀಜಿ ಕರೆಯನ್ನು ಅನುಸರಿಸಿ ಕೋಣ ಬಲಿ ನಿಲ್ಲಿಸಲಾಯಿತು.

### ವಿಧವಾ ಕೇಶಮುಂಡನೆ ವಿರೋಧಿಸಿದ್ದ ಗಾಂಧೀಜಿ.....

ಮಹಾದೇವಿ ತಾಯಿ ರಾಮಕೃಷ್ಣ ಹೆಗಡೆ ಅವರ ಅಕ್ಕ. ಸಿದ್ದಾಪುರದ ದೊಡ್ಮನೆ ಹೆಗಡೆ ಅವರ ಮಗಳು. ಮಹಾದೇವಿ ಅವರಿಗೆ ಬಾಲ್ಯವಿವಾಹವಾಗಿತ್ತು. ಅಪ್ರಾಪ್ತ ವಯಸ್ಸಿನಲ್ಲಿ ಆಕೆಯ ಗಂಡ ತೀರಿಹೋಗಿದ್ದರು. ಬ್ರಾಹ್ಮಣ ಸಂಪ್ರದಾಯದಂತೆ ಆಕೆಯ ತಲೆಯ ಕೇಶ ಮುಂಡನ ಮಾಡಿಸಲಾಗಿತ್ತು. ಇದನ್ನು ಸಿದ್ದಾಪುರಕ್ಕೆ (1934 ಮಾರ್ಚ್ 1 ) ಗಾಂಧೀಜಿ ಬಂದಾಗ ಗಮನಿಸಿದರು. ಮಹಾದೇವಿ ಅವರ ತಂದೆಯ ಜೊತೆ ಗಾಂಧೀಜಿ ಮಾತನಾಡಿದರು. ಕೇಶ ಮುಂಡನಕ್ಕೆ ವಿರೋಧ ವ್ಯಕ್ತಪಡಿಸಿದರು. ಇದು ಸಂಪ್ರದಾಯ ಎಂದು ಮಹಾದೇವಿ ತಂದೆ ಪ್ರತಿಕ್ರಿಯಿಸಿದಾಗ 'ನಿಮ್ಮ ಮಗಳಿಂದಲೇ ಕೇಶ ಮುಂಡನಾ ಪದ್ಧತಿ ನಿಲ್ಲಲಿ. ಹೊಸ ಪದ್ಧತಿ ಆರಂಭವಾಗಲಿ. ಏಕೆ ಆಗಬಾರದು? ಎಂದು ಗಾಂಧೀಜಿ ಮರು ಪ್ರಶ್ನಿಸಿದರು. 'ವಾರ್ದಾ ಆಶ್ರಮಕ್ಕೆ ತೆರಳು ಆಕೆ ಇಚ್ಚೆಸುತ್ತಾಳೆ. ನಿಮ್ಮ ಅನುಮತಿ ಇದೆಯೇ' ಎಂದು ಗಾಂಧೀಜಿ ಮತ್ತೆ ಪ್ರಶ್ನಿಸಿದರು. 'ಅವಳು ಪ್ರಬುದ್ಧಳು. ಮನಸ್ಸಿಗೆ ಬಂದಲ್ಲಿ ಹೋಗಲು ಸ್ವತಂತ್ರಳು' ಎಂದರು ದೊಡ್ಮನೆ ಹೆಗಡೆ.








# ಅಸ್ಪೃಶ್ಯತಾ ನಿವಾರಣೆ

**ವೇಮಗಲ್ ಸೋಮಶೇಖರ್**

**ಮ**ಹಾತ್ಮ ಗಾಂಧೀಜಿ 1934ರಲ್ಲಿ ಹರಿಜನರ ಏಳ್ಗೆಗಾಗಿ ನಿಧಿ ಸಂಗ್ರಹಿಸಲು ದಕ್ಷಿಣ ಭಾರತದಲ್ಲಿ ಪ್ರವಾಸ ಮಾಡುತ್ತಾ ಕೊಡಗು ನಾಡಿಗೆ ಪ್ರವೇಶಿಸಿದರು. ಅಂದು ಮಧ್ಯಾಹ್ನ ಅವರು ಪ್ರಥಮವಾಗಿ ಭೇಟಿ ನೀಡಿದ ಸ್ಥಳ ಕೈಕೇರಿಯ ಹರಿಜನ ಕೇರಿ.

ಗಾಂಧೀಜಿ ಬರುತ್ತಾರೆಂದು ನೆರೆದಿದ್ದ ಸುಮಾರು ಹತ್ತು ಸಾವಿರದಷ್ಟು ಹರಿಜನರಲ್ಲಿ ಮಹಿಳೆಯರೂ ಸೇರಿದ್ದರು. "ನನ್ನ ಈ ಹರಿಜನ ಪ್ರವಾಸದಲ್ಲಿ ಇಷ್ಟು ಶುಚಿಯಾಗಿಟ್ಟುಕೊಂಡಿರುವಂತಹ ಹರಿಜನ ಕೇರಿಯನ್ನು ಎಲ್ಲಿಯೂ ನೋಡಲೇ ಇಲ್ಲ!" ಎಂದು ನೆರೆದಿದ್ದ ಜನರಿಗೆ ಬಾಪೂಜಿ ತಿಳಿಸಿದರು. ಅವರಿಂದ ಹರಿಜನ ನಿಧಿಯನ್ನು ಸ್ವೀಕರಿಸಿದರು. ಮಹಿಳೆಯರು ಧಾರಾಳವಾಗಿ ಒಡವೆಗಳನ್ನು ಹರಿಜನ ಕಾರ್ಯಕ್ಕಾಗಿ ಬಿಚ್ಚಿಕೊಟ್ಟರು.


ಕೈಕೇರಿಯಿಂದ ಪೊನ್ನಂಪೇಟೆಗೆ ಆಗಮಿಸಿದ ಗಾಂಧೀಜಿ ಅಲ್ಲಿಂದ ಐದು ಮೈಲಿ ದೂರದಲ್ಲಿದ್ದ ಹರಿಜನ ಕೇರಿಗೆ ಹೋಗಿ 75 ರೂಪಾಯಿಗಳ ನಿಧಿಯನ್ನು ಸ್ವೀಕರಿಸಿ ಸಂಜೆ ಪೊನ್ನಂಪೇಟೆಗೆ ಹಿಂದಿರುಗಿ ಬಂದರು. ಪೊನ್ನಂಪೇಟೆಯ ಜನರನ್ನುದ್ದೇಶಿಸಿ ಗಾಂಧೀಜಿ "ಈ ಸುಂದರವಾದ ದೇಶವನ್ನು ಅಸ್ಪೃಶ್ಯವೆಂಬ ಕೆಟ್ಟ ಬಾಳ್ವೆಯಿಂದ ಕುರೂಪಿಯನ್ನಾಗಿ ಮಾಡಬೇಡಿ ಎಂದರು.



## ಹಿಂದು ಮುಸ್ಲಿಂ ಐಕ್ಯತೆ

1934ರ ಫೆಬ್ರವರಿ 23ರಂದು ವಿರಾಜಪೇಟೆಗೆ ಗಾಂಧೀಜಿ ಆಗಮಿಸಿದರು. ಮಹಾತ್ಮರನ್ನು ಕಾಣಲು ಮತ್ತು ಅವರ ಮಾತನ್ನು ಕೇಳಲು ಮುಸಲ್ಮಾನರು ಸೇರಿದಂತೆ ಸುಮಾರು ಹತ್ತು ಸಾವಿರ ಜನ ಸೇರಿದ್ದರು. ಮುಸಲ್ಮಾನ್ ನಿವಾಸಿಗಳ ಪರವಾಗಿ ಬಿನ್ನವತ್ತಳೆಯನ್ನು ಅರ್ಪಿಸಲಾಯಿತು. ಬಿನ್ನವತ್ತಳೆ ಹೀಗಿತ್ತು. "ಹರಿಜನರ ಉದ್ಧಾರಕ್ಕಾಗಿ ತಾವು ಕೈಗೊಂಡಿರುವ ಈ ಪ್ರವಾಸದ ಬಗ್ಗೆ ನಮಗೆ ತುಂಬಾ ಗೌರವವಿದೆ. ಇದರ ಹಿನ್ನೆಲೆಯಲ್ಲಿ ಮನುಷ್ಯರ ಸಮ್ಮತಿಯನ್ನು ಸಾಧಿಸುವ ಪವಿತ್ರ ಉದ್ದೇಶ ನಿಮ್ಮದಾಗಿದೆ. ಇಸ್ಲಾಮಿನ ಮೂಲ ಸತ್ಯಗಳಲ್ಲಿ ಇದೂ ಒಂದು. ನಿಮ್ಮ ಈ ಸಂಕಲ್ಪಕ್ಕೆ ನಾವು ಸಹಾನುಭೂತಿ ತೋರಿಸಲೇ ಬೇಕು. ಏಕೆಂದರೆ ನಾವು ಮುಸಲ್ಮಾನರು. ಉತ್ತರ ರೂಪದಲ್ಲಿ ಗಾಂಧೀಜಿ ಹೀಗೆ ನುಡಿದರು "ದೇವರು ನಿಮ್ಮ ಈ ಸಂಕಲ್ಪಕ್ಕೆ ಸಫಲತೆ ನೀಡಲಿ. ಈ ದರಿದ್ರ ಮಾನವ ವರ್ಗವು ಭಾರ ಮುಕ್ತವಾಗಲಿ, ಸಮಾನತೆ ಪಡೆಯಲಿ, ನೀವು ಹಿಂದೂ ಮುಸ್ಲಿಂ ಸೌಹಾರ್ದದಲ್ಲಿ ದೃಢ ನಂಬಿಕೆ ಉಳ್ಳವರು. ಭಾರತದ ಈ ಭಾಗದಲ್ಲಿ ಹಿಂದೂ–ಮುಸಲ್ಮಾನರಲ್ಲಿ ಸಂಪೂರ್ಣ ಐಕಮತ್ಯ ಇದೆ ಎಂದು ತಿಳಿದು ನಮಗೆ ಸಂತೋಷವಾಗುತ್ತದೆ. ಈ ಐಕಮತ್ಯವನ್ನು ಇಡೀ ಭಾರತದಲ್ಲಿ ನೀವು ಸ್ಥಾಪಿಸುತ್ತೀರಿ ಎಂದು ನಮ್ಮ ಅಪೇಕ್ಷೆ. ಮತೀಯ ಕಲಹಗಳು ಭಾರತವನ್ನು ಪೀಡಿಸದಂತೆ ನಿಮ್ಮ ಸಾಮರ್ಥ್ಯ ಪ್ರಭಾವಗಳನ್ನು ಉಪಯೋಗಿಸಬೇಕು. ಅದಕ್ಕಾಗಿ ಹಿಂದೂ ಮುಸಲ್ಮಾನರ ಸಂಯುಕ್ತ ಸಮ್ಮೇಳನ ಕರೆಯಬೇಕೆಂದು ಬಯಸುತ್ತೇವೆ".

"ಶುದ್ಧವಾದ ಉತ್ತಮ ಹಿಂದೂಸ್ತಾನಿಯಲ್ಲಿ ಬಿನ್ನವತ್ತಳೆ ಪಡೆದದ್ದು ನನಗೆ ಬಹಳ ಆಶ್ಚರ್ಯವಾಗಿದೆ. ಉರ್ದು ಸಾಹಿತ್ಯ ಎಂದರೆ ನನಗೆ ತುಂಬ ಪ್ರೀತಿ. ಆದರೆ, ದಕ್ಷಿಣದಲ್ಲಿ ಕೆಳಕ್ಕೆ ಹೋದಹಾಗೆಲ್ಲಾ ಉರ್ದು ವಿದ್ವಾಂಸರನ್ನು ಕಾಣುವುದು ಕಷ್ಟ. ಕೊಡಗಿನಲ್ಲಿ ಇಂಥ ಒಳ್ಳೆಯ ಉರ್ದು ಬರೆಯುವ ಹಾಗೂ ಮಾತನಾಡುವ ಜನ ಇರುವುದು ಆನಂದವಾಗಿದೆ." ಎಂದರು.







## ಲಿಂಗತಾರತಮ್ಯ ನಿವಾರಣೆ

ಗುಂಡುಕುಟ್ಟಿಯಲ್ಲಿ ಗಾಂಧೀಜಿ ಇಳಿದುಕೊಂಡಿದ್ದ ಮಂಜುನಾಥಯ್ಯನವರ ಮನೆಯ ಸ್ವಲ್ಪ ದೂರದಲ್ಲೇ ಕೊಡಗಿನ ಗೌರಮ್ಮನವರ ಮನೆ. ಆಕೆಗೆ ಆಗ ಕೇವಲ 21 ವರ್ಷ, ಮದುವೆಯೂ ಆಗಿತ್ತು. ಟೆನಿಸ್ ಮತ್ತು ಈಜುಗಾರ್ತಿ ಹಾಗೂ ಸಣ್ಣಕತೆಗಳ ಪ್ರಥಮ ಕಥೆಗಾರ್ತಿ ಗೌರಮ್ಮನಿಗೆ ಗಾಂಧೀಜಿಯನ್ನು ತಮ್ಮ ಮನೆಗೆ ಕರೆತರಬೇಕೆಂದು ಆಸೆಯಾಗಿತ್ತು. ಆ ಊರಿನ ಸ್ವಾಗತ ಸಮಿತಿಯವರು ಅದಕ್ಕೆ ಗಮನ ಕೊಡಲಿಲ್ಲ. ಆಕೆಗೆ ತುಂಬ ನೋವಾಯಿತು. ಬೆಳಗಿನಿಂದ ಉಪವಾಸವಿದ್ದ ಆಕೆ ಗಾಂಧೀಜಿ ಇದ್ದಲ್ಲಿಗೇ ಬಂದು ಅಳತೊಡಗಿದಳು. ಬೆಳಗಿನಿಂದ ಆಕೆ ಉಪವಾಸವಿದ್ದದ್ದು ಬೇರೆಯವರ ಮೂಲಕ ತಿಳಿದುಕೊಂಡಿದ್ದ ಗಾಂಧೀಜಿ "ಉಪವಾಸ ಏಕಮ್ಮ ತಾಯಿ" ಎಂದರು. "ನೀವು ನಮ್ಮ ಮನೆಗೆ ಬರಲಿಲ್ಲ; ನಿಮಗಾಗಿ ಕೆಲವು ಒಡವೆ ತೆಗೆದಿಟ್ಟಿದ್ದೇನೆ" ಎಂದಳು. ಗಾಂಧೀಜಿ "ಮೊದಲು ನೀನು ಉಪವಾಸ ನಿಲ್ಲಿಸಬೇಕು" "ನೀವು ನಮ್ಮ ಮನೆಗೆ ಬರುತ್ತೇನೆಂದು ಮಾತು ಕೊಟ್ಟರೆ ನಿಲ್ಲಿಸುತ್ತೇನೆ" ಎಂದಳು. ಇದನ್ನೆಲ್ಲಾ ಗಮನಿಸುತ್ತಿದ್ದ ಮೀರಾಬೆನ್ ಹಣ್ಣು ಸುಲಿದು ಗೌರಮ್ಮನಿಗೆ ಕೊಟ್ಟಳು. ಗಾಂಧೀಜಿ ಒಂದು ಕರಾರು ಹಾಕಿದರು. "ನೀನು ನನಗೆ ಆಭರಣ ಕೊಟ್ಟನಂತರ ಪುನಃ ಯಾವ ಒಡವೆಯನ್ನೂ ಧರಿಸಬಾರದು" ಅದಕ್ಕೆ ಗೌರಮ್ಮ ಒಪ್ಪಿದಳು. ಆಕೆಯ ಗಂಡ ಗೋಪಾಲಕೃಷ್ಣಯ್ಯನೂ ಜೊತೆಯಲ್ಲಿದ್ದರು. ಗಾಂಧೀಜಿ ಆತನನ್ನು ಕುರಿತು "ಒಡವೆ ನನಗೆ ಕೊಡಬೇಕೆಂದು ಈಕೆಗೆ ಯಾರು ಹೇಳಿದರು?" "ಯಾರೂ ಇಲ್ಲ, ಆಕೆಯದೇ ಒಡವೆ; ಆಕೆಯ ಇಚ್ಛೆ! ನನ್ನ ಒಪ್ಪಿಗೆಯೂ ಇದೆ." ಎಂದರು. ಕೊನೆಗೆ ಗಾಂಧೀಜಿ ಅವರ ಮನೆಗೆ ಹೋದರು. ಮಾಂಗಲ್ಯ, ಮೂಗುಬೊಟ್ಟು, ಕಿವಿಯೋಲೆ ಬಿಟ್ಟು ಉಳಿದ ಎಲ್ಲಾ ಆಭರಣಗಳನ್ನು ಗೌರಮ್ಮ ಗಾಂಧೀಜಿಗೆ ಸಮರ್ಪಿಸಿ "ಇನ್ನು ಮುಂದೆ ಸೌಭಾಗ್ಯದ ಸಂಕೇತವಾದ ಕರೀಮಣಿ, ಕಿವಿಯ ಬೆಂಡೋಲೆ, ಮೂಗುಬೊಟ್ಟು ಬಿಟ್ಟು ಬೇರೆ ಯಾವುದೇ ಒಡವೆ ಧರಿಸುವುದಿಲ್ಲ" ಎಂದು ಪ್ರತಿಜ್ಞೆ ಮಾಡಿದಳು. "ಸರಳವಾದ ಮಿತ ಜೀವನ ಎಂದಿಗೂ ಒಳ್ಳೆಯದು" ಎಂದ ಗಾಂಧೀಜಿ ಗೌರಮ್ಮನ ಮನೆಯಿಂದ ತುಂಬು ಹೃದಯದಿಂದ ಹೊರಬಂದರು. (ಇಂತಹ ಗೌರಮ್ಮ ಕೇವಲ 27ವಯಸ್ಸಿನಲ್ಲಿ ಅಂದರೆ 1939ರ ಏಪ್ರಿಲ್ 13ರಂದು ಆರು ವರ್ಷದ ಪುತ್ರ ವಸಂತನನ್ನು ಅಗಲಿ ಹಾರಂಗಿ ಹೊಳೆಯಲ್ಲಿ ಈಜಲು ಹೋದಾಗ ಅಕಸ್ಮಿಕವಾಗಿ ಮುಳುಗಿ ದುರಂತ ಸಾವಿಗೀಡಾದರು.) ತರುವಾಯ ಗಾಂಧೀಜಿ ಗುಂಡುಕುಟ್ಟಿಯಿಂದ ಶೊಂಟಿಕೊಪ್ಪದ ಮಾರ್ಗವಾಗಿ ಮಡಿಕೇರಿಗೆ ಹೊರಟರು.


ಸಂಜೆ ಮಡಿಕೇರಿಯಲ್ಲಿ ಸಭೆ. ಹದಿನೈದು ಸಾವಿರಕ್ಕೂ ಹೆಚ್ಚು ಜನ ರಾಜಪೀಠದ ಬಳಿಯ ಮೈದಾನದಲ್ಲಿ ನೆರೆದಿದ್ದರು. ಗಾಂಧೀಯವರಿಗೆ ಅರ್ಪಿಸಿದ ಮಾನಪತ್ರದಲ್ಲಿ ಕೊಡಗಿನ ಹರಿಜನರ ವಿಷಯ ಎಲ್ಲವೂ ಸೂಚಿಸಿತ್ತು. ಅಲ್ಲದೆ 750 ರೂಪಾಯಿಗಳ ಒಂದು ನಿಧಿಯೂ ಅರ್ಪಿಸಲ್ಪಟ್ಟಿತು. ಗಾಂಧೀಜಿ ಸಾರ್ವಜನಿಕ ಭಾಷಣ ಮಾಡುತ್ತಾ "ಬಹುಶಃ ನಿಮ್ಮನ್ನು ನೋಡುವುದು ಇದು ಮೊದಲನೆಯ ಸಲ. ಇದು ಕಡೆಯ ಸಲವೂ ಆಗಬಹುದು. ಇಲ್ಲಿಗೆ ಬರುವ ಮೊದಲು ಈ ಪ್ರದೇಶದ ನಿಸರ್ಗ ಸೌಂದರ್ಯವನ್ನು ಕುರಿತು ನಾನು ಎಷ್ಟೋ ಊಹಿಸಿದ್ದೆ, ಅದೆಲ್ಲವೂ ಇಂದು ಸಾರ್ಥಕವಾಯಿತು. ನಿಮ್ಮ ಪ್ರಾಂತಕ್ಕೆ ನಾನು ಕೊಟ್ಟ ಈ ಎರಡು ದಿನದ ಪ್ರವಾಸ ಸ್ವಲ್ಪ ಪ್ರಯಾಸ ಆಗಿದ್ದರೂ ಸಂತೋಷವಾಗಿದೆ. ನಿಮ್ಮ ಪ್ರಾಂತದಲ್ಲಿರುವ ನಿಸರ್ಗ ರಮಣೀಯತೆಯನ್ನು ಇಂದು ಸವಿಯುತ್ತಿದ್ದೇನೆ. ನಿಮ್ಮ ನಾಡಿನ ಪ್ರಕೃತಿ ದೃಶ್ಯ ಎಷ್ಟು ಚೆನ್ನಾಗಿದೆಯೋ ನಿಮ್ಮ ಹೃದಯಗಳೂ ಅಷ್ಟೇ ಚೆಲುವಾಗಿದೆ, ಆದರೂ ನನ್ನ ಮನಸ್ಸಿನಲ್ಲಿ ನಿಮ್ಮ ಹೃದಯ ಮಾಧುರ್ಯದ ಬಗ್ಗೆ ಏನೋ ಸಂದೇಹ. ನಿಮ್ಮಲ್ಲಿ ಇನ್ನೂ ಸ್ವಲ್ಪ ಅಸ್ಪೃಶ್ಯತೆ ಅಂಟಿಕೊಂಡಿದೆಯೆಂದು ಕಾಣುತ್ತದೆ. ನಿಮ್ಮ ಮಾನಪತ್ರದಲ್ಲಿ ಇಲ್ಲಿ ಹರಿಜನರಿಗೆ ಪ್ರವೇಶವಿಲ್ಲವೆಂದು ಹೇಳಿದ್ದೀರಿ. ಒಬ್ಬ ತಂದೆ ತನ್ನ ಮಕ್ಕಳಿಗೆ ಅನ್ನ ಬಟ್ಟೆ ಕೊಡುತ್ತೇನೆ, ಮನೆ ಕೊಡುತ್ತೇನೆ, ಆದರೆ ನನ್ನ ಹೃದಯದಲ್ಲಿ ನಿಮಗೆ ಸ್ಥಳವಿಲ್ಲವೆಂದು ಹೇಳಿದರೆ ಆ ಮಕ್ಕಳಿಗೆ ಹೇಗೆ ಅನಿಸುತ್ತದೆಯೋ ಯೋಚನೆ ಮಾಡಿ. ನಿಮ್ಮ ಹಾಗೆಯೇ ಹರಿಜನರಿಗೂ ದೇವಾಲಯ ಪ್ರವೇಶ ನೀಡದಿದ್ದರೆ, ನಿಮ್ಮ ಹೃದಯ ಸುಂದರ ಎನ್ನಲಾರೆ. ಪ್ರಕೃತಿಯಿಂದ ಪಾಠ ಕಲಿತು ನಿಮ್ಮ ಹೃದಯದಿಂದ ಆ ಕಳಂಕವನ್ನು ತೊಳೆದು ಹಾಕಿ". ಮುಂತಾಗಿ ಮಾತನಾಡಿದರು.



ಕೊಡಗಿನ ಗೌರಮ್ಮ

ರಾತ್ರಿ ಕೊಡಗಿನ ಹರಿಜನ ಕೆಲಸಗಾರರೊಂದಿಗೆ ಸಂಭಾಷಣೆ ನಡೆಸಿ ಹರಿಜನರ ಉದ್ಧಾರಕ್ಕಾಗಿ ನಡೆಸಬೇಕಾದ ಕಾರ್ಯಗಳ ಬಗ್ಗೆ ಚರ್ಚಿಸಲ್ಪಟ್ಟವು. ಕೊಡಗಿನ ಪ್ರವಾಸದಲ್ಲಿ ಒಟ್ಟು ಎರಡು ಸಾವಿರ ರೂಪಾಯಿಗಳೂ ಮತ್ತು ಒಂದು ಸಾವಿರ ರೂಪಾಯಿಗಳ ಬೆಲೆ ಬಾಳುವ ಒಡವೆಗಳೂ ದೊರಕಿತು. ಬಿಹಾರಿನಲ್ಲಿ ಸಂಭವಿಸಿದ ಭೀಕರ ಭೂಕಂಪದ ವಿಷಯ ಎಲ್ಲರಿಗೂ ತಿಳಿಸಿ ಒಡವೆಗಳನ್ನು ಹರಾಜು ಹಾಕಿದರು. ಆನಂತರ ಮೈಸೂರಿನಲ್ಲಿ ವೈದ್ಯರಾಗಿದ್ದ ದಿವಂಗತ ನಂಜಪ್ಪನವರ ಬಿಡಾರದಲ್ಲಿ ಉಳಿದುಕೊಂಡು ಮರು ದಿವಸ ಅಂದರೆ 24ರಂದು ಮುಂಜಾನೆ ಮಡಿಕೇರಿಯಿಂದ ಪುತ್ತೂರು, ಬಂಟ್ವಾಳ ಮಾರ್ಗವಾಗಿ ಮಂಗಳೂರಿನತ್ತ ಪ್ರಯಾಣ ಬೆಳೆಸಿದರು


ತತ್ಪರಿಣಾಮವಾಗಿ ಮಹಾತ್ಮಾ ಗಾಂಧೀಯವರ ಈ ಪ್ರವಾಸ ಕೊಡಗು ಜಿಲ್ಲೆಯಾದ್ಯಂತ ರಾಜಕೀಯ ಜಾಗೃತಿ, ಸಾಮಾಜಿಕ ಕಳಿಕಳಿ ಹಾಗೂ ಸಾಂಸ್ಕೃತಿಕ ಅರಿವನ್ನು ಮೂಡಿಸುವ ಮೂಲಕ ಸ್ವಾತಂತ್ರ್ಯ ಸಂಗ್ರಾಮಕ್ಕೆ ಪೂರಕ ವೇದಿಕೆಯನ್ನು ಒದಗಿಸಿತೆಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದು.



ವಿನೀತ್ ರಾವ್

# ದೇವಸ್ಥಾನ ಪ್ರವೇಶದ ಚಳುವಳಿ

25–2–1934ರಂದು ಗಾಂಧೀಜಿ ಉಡುಪಿಗೆ ಭೇಟಿ ಕೊಟ್ಟಿದ್ದರು. ಗಾಂಧೀಜಿ ತಮ್ಮ ಭಾಷಣದಲ್ಲಿ : "ಉಡುಪಿ ನನ್ನ ಮನಸ್ಸಿನಲ್ಲಿ ಬಹಳ ದಿನಗಳಿಂದ ಇದೆ. ಇಲ್ಲಿನ ಬಗ್ಗೆ ಬಹಳ ಮಂದಿಯಿಂದ ಈಗಾಗಲೇ ಕೇಳಿದ್ದೇನೆ. ನಿಮ್ಮಲ್ಲಿನ ಪ್ರಸಿದ್ಧ ಕೃಷ್ಣ ದೇವಾಲಯದ ಬಗ್ಗೆ ತಿಳಿದಿದ್ದೇನೆ. ಕೆಳಜಾತಿಯವ ಎಂಬ ಕಾರಣದಿಂದ ಭಕ್ತನೋರ್ವನಿಗೆ ದೇವಾಲಯ ಪ್ರವೇಶ ನಿರಾಕರಿಸಿದ ಕಾರಣ ಇಲ್ಲಿನ ದೇವರೇ ಮಡಿವಂತ ಬ್ರಾಹ್ಮಣರಿಗೆ ಬೆನ್ನುಹಾಕಿ ತಿರುಗಿ ಭಕ್ತನಿಗೆ ದರುಶನವನ್ನು ದಯಪಾಲಿಸಿದ ಕಥೆಯನ್ನು ಅರಿತಿದ್ದೇನೆ. ಆದುದರಿಂದ ಈ ದೇವಸ್ಥಾನಕ್ಕೆ ದಲಿತರಿಗೂ ಪ್ರವೇಶಿಸಲು



ಸಾಧ್ಯವಾಗುವಂತೆ ಸೌಮ್ಯಮಾರ್ಗದಿಂದ ಜನಾಭಿಪ್ರಾಯವನ್ನು ರೂಪಿಸಬೇಕು. ಬಹಳ ಸೌಮ್ಯ ಮಾರ್ಗದಿಂದಲೇ ಇಂಥ ಸದಭಿಪ್ರಾಯವನ್ನು ರೂಪಿಸುವುದು ಸಾಧ್ಯ. ಇದು ಆತ್ಮಶುದ್ಧಿಯ ಚಳವಳಿ. ದೇವಾಲಯಗಳ ಭಕ್ತರು ಬಹುಸಂಖ್ಯೆಯಲ್ಲಿ ಈ ಅಭಿಪ್ರಾಯ ರೂಪಿಸಿ ದೇವಾಲಯ ಪ್ರವೇಶವನ್ನು ಸರ್ವರಿಗೂ ಮುಕ್ತವಾಗಿಸಬೇಕು. ನೀವೆಲ್ಲಾ ಅಸ್ಪೃಶ್ಯತೆಯನ್ನು ತೊಡೆದುಹಾಕುವ ನಿಮ್ಮ ವಾಗ್ದಾನಕ್ಕೆ ಬದ್ಧರಾಗಿದ್ದಲ್ಲಿ ಕರ್ನಾಟಕಕ್ಕೆ ಉಡುಪಿಯು ಮಾದರಿಯಾಗುವುದು." ಎಂದು ತಿಳಿಹೇಳಿದರು.

ಬಳಿಕ ರಥಬೀದಿಯ ಮೂಲಕ ಹಾದು ಹೋಗುವ ಮಾರ್ಗದಲ್ಲಿ ಗಾಂಧೀಜಿ ಮೊದಲ ಬಾರಿ ಉಡುಪಿ ಕೃಷ್ಣಮಂದಿರವನ್ನು ಕಂಡು "ಇದು ಆ ಕೃಷ್ಣಮಂದಿರವೇ?" ಎಂದು ಕೇಳಿದಾಗ ಜತೆಗಿದ್ದ ಪುರಪ್ರಮುಖರು ಮೌನದಿಂದ ತಲೆಯಾಡಿಸಿದರು. ದೇವಾಲಯದ ಬಗ್ಗೆ ತಮ್ಮ ಭಾಷಣದಲ್ಲಿ ಅದಾಗಲೇ ಪ್ರಸ್ತಾವಿಸಿದ್ದ ಗಾಂಧೀಜಿಯವರು ತಮ್ಮ ಸಂಕಲ್ಪದಂತೆ ದೇವಾಲಯ ಪ್ರವೇಶಿಸದೆ ಮುಂದಕ್ಕೆ ಹೊರಟರು.







# ಮಹಾತ್ಮಾ ಗಾಂಧೀಜಿಯವರ ರಚನಾತ್ಮಕ ಕಾರ್ಯಗಳು

ಪ್ರೊ. ಎ. ಎಸ್. ವೇಣುಗೋಪಾಲ್ ರಾವ್

ಗಾಂಧೀಯುಗವನ್ನು ಕಾಣದ, ಕೇಳದ ತಲೆಮಾರಿನವರಿಗೆ ಅಂಥ ಒಬ್ಬ ಮಹಾಪುರುಷ ಈ ಭೂಮಿಯಲ್ಲಿ ಬದುಕಿ ಬಾಳಿದ್ದರು ಎಂದು ನಂಬುವುದೇ ಕಷ್ಟವಾಗಬಹುದು. ಅವರ ತಲೆಮಾರಿನವರಿಗೂ ಅವರು ಒಂದು ಅದ್ಭುತ ಅಥವಾ ವಿಸ್ಮಯ ಎಂದೇ ತೋರಿಬರುತ್ತಿದ್ದರು. ಎಟುಕಲಾರದ ಆದರ್ಶಗಳ ಮೊತ್ತ ಎಂದೇ ಅಂಥವರು ಭಾವಿಸಿದ್ದರು.

ಗಾಂಧೀಜಿಯ ಬಹುಮುಖ ವ್ಯಕ್ತಿತ್ವ ಅವರನ್ನು ಒಂದು "ವಿಸ್ಮಯ" ಎನಿಸಿಬಿಟ್ಟಿತ್ತು. ಅಪ್ಪಟ ದೈವಭಕ್ತ, ದೇಶಪ್ರೇಮಿ, ವಿಶ್ವಮಾನವ, ಸಮಾಜ ಸೇವಕ, ರಾಜಕೀಯಪಟು, ಸಂತ ಶಿರೋಮಣಿ – ಹೀಗೆ ಎಲ್ಲ ಗುಣವಾಚಕಗಳೂ, ಉಪಮೆ–ರೂಪಕಗಳೂ ಅವರ ಅಖಂಡ ವ್ಯಕ್ತಿತ್ವದ ಒಂದೊಂದು ಮುಖವನ್ನು ಮಾತ್ರ ತೋರಬಲ್ಲದು. ಹೃದಯ ವೈಶಾಲ್ಯ, ಸತ್ಯದ ಕಡುನಿಷ್ಠೆ, ಕಾರುಣ್ಯದ ಕಡಲು, ರಾಜಕೀಯ–ಸಾಮಾಜಿಕ ಮುನ್ನೋಟ, ಅಂತರ್ವಾಣಿಯ ಶುದ್ಧ ಸ್ಫಟಿಕ ದರ್ಶನ, ಹೀಗೆಲ್ಲ ಅವರ ವ್ಯಕ್ತಿತ್ವದ ಭವ್ಯಚಿತ್ರಕ್ಕೆ ಕಾಮನಬಿಲ್ಲಿನ ವರ್ಣಮಯದ ಅಂಚುಗಳನ್ನು ಕಟ್ಟುತ್ತಾ ಹೋಗಬಹುದು. ಆದರೂ ಅವರನ್ನು ಪರಿಪೂರ್ಣವಾಗಿ ಚಿತ್ರಿಸಲು ಯಾವ ಕಲಾಕುಂಚವೂ ಸಮರ್ಥವಾಗದು. ಅದಕ್ಕೂ ಹಿರಿದಾದ ಮಾನವ ಕಲ್ಪನೆ ಇಲ್ಲದುದರಿಂದ ಗಾಂಧೀಜಿಯನ್ನು "ಮಹಾತ್ಮಾ" ಎಂದು ಕೈವಾರಿಸಿ ಕೈಮುಗಿದು ಬಿಟ್ಟಿದೆ ಅಷ್ಟೇ. ಮುಖ್ಯವಾಗಿ, ಸಮಸ್ತ ಬದುಕನ್ನು ಅಧ್ಯಾತ್ಮವಾಗಿಸಿದ ದೈವ ಸಮರ್ಪಿತ ಸಂತ ಶಿರೋಮಣಿ ಅವರು.

ಮೋಹನದಾಸ ಕರಮಚಂದಗಾಂಧೀ ಎಂಬ ಈ ಯುಗಪುರುಷ ಕೇವಲ ಅವ್ಯವಹಾರಿಕ ಆದರ್ಶಗಳ ಮೂಟೆಯಾಗಿರಲಿಲ್ಲ ಎಂಬುದೇ ಮುಖ್ಯವಾದ ಮಾತು. ಪ್ರಾಯೋಗಿಕವಲ್ಲದ ಯಾವ ಸಂದೇಶವನ್ನೂ ಅವರು ಜಗತ್ತಿಗೆ ನೀಡಲಿಲ್ಲ. ಮೊದಲು ತಾವೇ ತಮ್ಮ ಚಿಂತನವನ್ನು ಪ್ರಯೋಗಕ್ಕೆ ಒಳಪಡಿಸಿದರು. ನಂತರವೇ ಬೋಧಿಸಿದರು. "ನನ್ನ ಪಾಲಿಗೆ ಸತ್ಯವೇ ದೇವರು" ಎಂದ ಗಾಂಧೀಜಿ ಸತ್ಯ ಸಾಕ್ಷಾತ್ಕಾರವೆಂದರೆ ನಿರಂತರವಾದ ಸತ್ಯಶೋಧನೆ – ಸತ್ಯದೊಡನೆ ನನ್ನ ಪ್ರಯೋಗಗಳು ಎನ್ನಲು ಮರೆಯಲಿಲ್ಲ. ಅಂಥ ಪ್ರಯೋಗದಲ್ಲಿನ ಸೋಲು–ಗೆಲುವುಗಳನ್ನು ನಿರ್ಮಲ ಮನದಿಂದ, ನಿಷ್ಕಾಪಟ್ಯದಿಂದ ಜಗತ್ತಿನೊಡನೆ ಹಂಚಿಕೊಂಡರು. ದೈವ ಅಂತರ್ವಾಣಿಯ ರೂಪದಲ್ಲಿ ತಮಗೆ ತೋರಿಸಿಕೊಂಡಿದೆ ಎಂಬುದು ಅವರ ಪಾಲಿಗೆ ಕೇವಲ ಭಾವನಾತ್ಮಕವಾದ ಉದ್ಗಾರವಾಗಿರಲಿಲ್ಲ – ಬದುಕಿನ ತೀವ್ರ ಸಂಕಷ್ಟದ ಕ್ಷಣದಲ್ಲಿ ವಾಸ್ತವವಾಗಿ ಕೇಳಿಬಂದ ದಿವ್ಯಧ್ವನಿಯೇ ಆಗಿತ್ತು. ಹಿಂದೂಧರ್ಮದ ಅತಿಶ್ರೇಷ್ಠ ಅನುಯಾಯಿಯಾಗಿದ್ದ ಅವರು ಅದಕ್ಕೆ ಅಂಟಿಕೊಂಡಿದ್ದ ಅಸ್ಪೃಶ್ಯತೆ, ಸ್ತ್ರೀಯರ ಶೋಷಣೆ, ಬಾಲ್ಯವಿವಾಹ ಮುಂತಾದ ಕಳಂಕಗಳನ್ನು ಉಗ್ರವಾಗಿಯೇ ಖಂಡಿಸಲು ಹಿಂಜರಿಯಲಿಲ್ಲ. ಆದರೆ ಅದು ಕೇವಲ ಶಾಬ್ದಿಕ ಖಂಡನೆಯಾಗಿರಲಿಲ್ಲ. ಅವುಗಳ ನಿವಾರಣೆಯನ್ನು ಪ್ರಾಯೋಗಿಕವಾಗಿ ಆಚರಿಸಿ ಮಾರ್ಗದರ್ಶನ ಮಾಡಿದರು.

ಸರಳ ಜೀವನ ಅವರಿಗೆ ಬರಿಯ ಆದರ್ಶವಾಗಲಿಲ್ಲ ಜೀವನ ವಿಧಾನವೇ ಆಯಿತು. ಹಾಗೆಯೇ ತಾವು ಬೋಧಿಸಿದ ಪರಮ ಮೌಲ್ಯವಾಗಿದ್ದ ಅಹಿಂಸೆಯ ಮಾತಾದರೂ ಹಾಗೆಯೇ. ಗ್ರಾಮ ಸ್ವರಾಜ್ಯ, ಧರ್ಮಸಾಮರಸ್ಯ, ಅಂತರ್ಜಾತಿಯ ವಿವಾಹ, ಬ್ರಹ್ಮಚರ್ಯ, ಸ್ವದೇಶಿ, ಕಾಯಕದ ನಿಷ್ಠುರ ಆಚರಣೆ, ಎಲ್ಲವೂ ಸ್ವತಃ ಆಚರಿಸಿ ತೋರಿಸಿದ – ಇಲ್ಲವೇ ಮಾರ್ಗದರ್ಶನ ಮಾಡಿದ ಪ್ರಾಯೋಗಿಕ ಆದರ್ಶಗಳೇ ಆಗಿದ್ದವು. ಆದುದರಿಂದ ಅವರ ಸಮಸ್ತ ಬದುಕು – ಮಾತು, ಮನಸ್ಸು, ಕ್ರಿಯೆಗಳಲ್ಲಿ "ರಚನಾತ್ಮಕ – Constructive ಎಂಬ ಮೂರ್ತಿಮಂತ್ರ ಆದರ್ಶವಾಗಿತ್ತು.

ಉನ್ನತ ಆದರ್ಶಗಳು ಪ್ರಾಯೋಗಿಕವಾಗದೆ, ರಚನಾತ್ಮಕ ಸ್ವರೂಪವನ್ನು ತಾಳದೆ ಹೋದರೆ ನಿಷ್ಪ್ರಯೋಜಕವಾಗುತ್ತವೆ ಎಂಬುದೇ ಗಾಂಧೀಜಿಯ ದೃಢನಂಬಿಕೆ. ಈ ವಿಶ್ವಾಸವನ್ನು ಅವರು ಬೆಳೆಸಿಕೊಳ್ಳಲು ಪ್ರೇರಕವಾದ ಒಂದು ಪುಟ್ಟ ಪುಸ್ತಕ : ರಸ್ಕಿನ್ನನ "ಅನ್ ಟು ದ ಲಾಸ್ಟ್". ನೇಟಾಲಿನಲ್ಲಿ ಮಿ. ಪೋಲಕ್ ಅವರಿಗೆ ಓದಲು ನೀಡಿದ ಈ ಪುಸ್ತಕವನ್ನು ಅವರು ಜೋಹಾನ್ಸ್‌ಬರ್ಗ್‌ನಿಂದ ಡರ್ಬಾನಿಗೆ ರೈಲಿನಲ್ಲಿ ಪ್ರಯಾಣಿಸುವಾಗ ಓದಿ ಮುಗಿಸಿದರು ಮತ್ತು ಅದರ ತೀವ್ರ ಪ್ರಭಾವಕ್ಕೆ ಒಳಗಾದರು. ಮುಂದೆ ಅದನ್ನು "ಸರ್ವೋದಯ : ಎಂಬ ಹೆಸರಿನಲ್ಲಿ ಗುಜರಾತಿ ಭಾಷೆಗೆ ಅನುವಾದ ಮಾಡಿದರು. "ನನ್ನ ಬಾಳಿನಲ್ಲಿ ತತ್‌ತಕ್ಷಣ ಪರಿಣಾಮಕಾರಿಯಾದ ಬದಲಾವಣೆಯನ್ನು ಮಾಡಿದ್ದು "ಅನ್ ಟು ದ ಲಾಸ್ಟ್" ಎಂದು ಗಾಂಧೀಜಿ ತಮ್ಮ ಆತ್ಮಕಥೆಯಲ್ಲಿ ಬರೆದಿದ್ದಾರೆ. ಇದರ ಪ್ರಸ್ತಾಪ ಮಾಡಿರುವ ಆ ಅಧ್ಯಾಯವನ್ನು "ಒಂದು ಪುಸ್ತಕದ ಅದ್ಭುತ ಪ್ರಭಾವ" ಎಂದೇ ಕರೆದಿದ್ದಾರೆ. ಆ ಕೃತಿಯ ಚಿಂತನೆಯನ್ನು ಈ ಮೂರು ಸಿದ್ಧಾಂತಗಳಲ್ಲಿ ಸಂಗ್ರಹಿಸಿದ್ದಾರೆ :

- ಎಲ್ಲರ ಒಳಿತಿನಲ್ಲಿಯೇ ನಮ್ಮ ಒಳ್ಳೆಯದು ಅಡಗಿದೆ.
- ವಕೀಲನ ಕೆಲಸಕ್ಕೆ ಇರುವ ಬೆಲೆಯೇ ಕ್ಷೌರಿಕನ ಕೆಲಸಕ್ಕೂ ಇದೆ. ಏಕೆಂದರೆ ತಮ್ಮ ಕೆಲಸದಿಂದ ಜೀವನವನ್ನು ನಿರ್ವಹಿಸಲು ಎಲ್ಲರಿಗೂ ಸಮಾನವಾದ ಹಕ್ಕಿದೆ.
- ಶ್ರಮಜೀವಿಯ ಜೀವನ, ಉಳುವವನ ಅಥವಾ ಕೈಕಸುಬುದಾರನ ಜೀವನವೇ ಯೋಗ್ಯ ಜೀವನ.

ಈ ಸಿದ್ಧಾಂತಗಳನ್ನು ರಚನಾತ್ಮಕವಾಗಿಸುವ ಪ್ರಯೋಗವನ್ನು ಅವರು ಫೀನಿಕ್ಸ್ ವಸತಿಯಲ್ಲಿಯೇ ಕೈಗೊಂಡರು. ಅವರು ಸಂಪಾದಿಸುತ್ತಿದ್ದ "ಇಂಡಿಯನ್ ಒಪಿನಿಯನ್" ಪತ್ರಿಕೆಯನ್ನು ಕೊಂಡುಕೊಂಡು ಒಂದು ಜಮೀನಿಗೆ ಸಾಗಿಸಿದರು. ಅಲ್ಲಿ ಪ್ರತಿಯೊಬ್ಬರೂ ಕೆಲಸ ಮಾಡಲೇಬೇಕು. ಜೀವನ ನಿರ್ವಹಣೆಗೆ ಅಗತ್ಯವಾದಷ್ಟೇ ಸಂಬಳ. ವಿರಾಮ ಕಾಲದಲ್ಲಿ ಪತ್ರಿಕೆಯ ಕೆಲಸ, ಸಂಬಳ ವಿನಿಯೋಗದಲ್ಲಿ ವರ್ಣಭೇದವಿಲ್ಲ, ದೇಶಭೇದವಿಲ್ಲ. ಇದು ಅವ್ಯವಹಾರಿಕ. ಪ್ರೆಸ್‌ನ ಕೆಲಸಗಾರರು ದೂರದ ಜಮೀನಿಗೆ ಹೋಗಿ ಕೆಲಸ ಮಾಡಲು ಒಪ್ಪಲಾರರು ಎಂಬ ವಿರೋಧಗಳನ್ನು ಗಾಂಧೀಜಿ ಒಪ್ಪಲೇ ಇಲ್ಲ. ಅವರ ಚಿಕ್ಕಪ್ಪನ ಮಗ ಛಗನಲಾಲ ಗಾಂಧೀ ಯಂತ್ರ ಚಾಲಕ ಗೋವಿಂದಸ್ವಾಮಿ ಅವರಿಗೆ ಬೆಂಬಲವಾಗಿ ನಿಂತರು.

ಇಪ್ಪತ್ತು ಎಕರೆ ಭೂಮಿಯನ್ನೂ ಒಂದು ಹಳೆಯ ಮನೆಗೆ ಹೊಂದಿಕೊಂಡಿದ್ದ ಎಂಬತ್ತು ಎಕರೆ ಹಣ್ಣಿನ ತೋಟವನ್ನೂ ಕೊಳ್ಳಲಾಯಿತು. ಭಾರತೀಯ ಬಡಗಿಗಳು, ಗಾರೆಯವರು 75 ಅಡಿ ಉದ್ದ, 50 ಅಡಿ ಅಗಲದ ಷೆಡ್ ಒಂದನ್ನು ಮುದ್ರಣಾಲಯಕ್ಕಾಗಿ ಕಟ್ಟಿಕೊಟ್ಟರು. ಡೇರೆಗಳಲ್ಲಿ ವಾಸ, ಡರ್ಬಾನಿನಿಂದ 14 ಮೈಲು ದೂರದಲ್ಲಿ ಫೀನಿಕ್ಸ್ ರೈಲು ನಿಲ್ದಾಣಕ್ಕೆ ಎರಡೂವರೆ ಮೈಲು ಸಮೀಪದಲ್ಲಿ ಈ "ಆಶ್ರಮ" ಪ್ರಾರಂಭವಾಯಿತು. ರಚನಾತ್ಮಕ ಕಾರ್ಯಗಳಿಂದ ಸದಾ ಕ್ರಿಯಾಶೀಲವಾಗಿದ್ದ ಗಾಂಧೀ ಆಶ್ರಮ ಇದು.

ಈ ಆಶ್ರಮದಿಂದ ಆಕರ್ಷಿತರಾಗಿ ಮಗನಲಾಲಗಾಂಧೀ ಮುಂತಾದ ಹಲವು ತಮ್ಮ ಉದ್ಯೋಗಗಳನ್ನು ಬಿಟ್ಟು ಬಂದು





ಗಾಂಧೀಜಿಯ ಜೊತೆ ಕೈಜೋಡಿಸಿದರು. ಬಂದ ಕಷ್ಟ–ಕಾರ್ಪಣ್ಯಗಳಿಗೇನೂ ಕೊರತೆಯಿಲ್ಲ. ಆದರೆ ಗಾಂಧೀಜಿಯ ತತ್ತ್ವನಿಷ್ಠೆ ಪೂರ್ಣ ಸಮರ್ಪಣಾಭಾವ ಅದ್ಭುತವಾಗಿತ್ತು. ರಾತ್ರಿಯೆಲ್ಲ ನಿದ್ದೆಗೆಟ್ಟು ಕೆಲಸ, ಆಗಾಗ ಕೆಡುವ ಪ್ರೆಸ್ ಯಂತ್ರ, ಅದರ ರಿಪೇರಿ, ಎಲ್ಲವನ್ನೂ ನಿಭಾಯಿಸುತ್ತಾ ಪತ್ರಿಕೆಯ ಪ್ರತಿಗಳನ್ನು ಸಕಾಲದಲ್ಲಿಯೇ ಹೊರಡಿಸಲು ಸಾಧ್ಯವಾಯಿತು. ಮುದ್ರಣಾಲಯದ ಸುತ್ತಮುತ್ತಲ ಜಮೀನಿನಲ್ಲಿ ಕೆಲಸಗಾರರಿಗೆ ಮೂರು ಮೂರು ಎಕರೆಗಳನ್ನು ಹಂಚಿಕೊಡಲಾಯಿತು. ಗಾಂಧೀಜಿಗೂ ಒಂದು ಪಾಲು! ಮುಂದೆ ಭಾರತದ ಭೂಸುಧಾರಣಾ ಯೋಜನೆಗಳು – ಕಾನೂನುಗಳು ಕನಸಿನ ಗರ್ಭವನ್ನೂ ಪ್ರವೇಶಿಸದಿದ್ದ ಕಾಲದಲ್ಲೇ ಗಾಂಧೀಜಿ ಇಂಥ ಕ್ರಾಂತಿಕಾರಕ ರಚನಾತ್ಮಕ ಕಾರ್ಯಗಳನ್ನು ದೂರದ ದಕ್ಷಿಣ ಆಫ್ರಿಕಾದಲ್ಲಿ ಕೈಗೊಂಡಿದ್ದರು.

ಮಿ. ಪೋಲಕರಂಥ ಚಿಂತಕರನ್ನೂ ಆಕರ್ಷಿಸಿದ ಯೋಜನೆ ಅದು. ಈ ರಚನಾತ್ಮಕ ಯೋಜನೆಗಳ ಉತ್ಸಾಹ ನಿಷ್ಠೆಗಳಿಂದ ಗಾಂಧೀಜಿ ಭಾರತಕ್ಕೆ ಹಿಂತಿರುಗುವ ದಿನವನ್ನೂ ಮುಂದೂಡುತ್ತಾ ತಮ್ಮ ಸಂಸಾರವನ್ನೇ ಆಫ್ರಿಕಾಗೆ ಕರೆಸಿಕೊಂಡುಬಿಟ್ಟರು! (ಕಸ್ತೂರಬಾ ಮತ್ತು ಮೂವರು ಮಕ್ಕಳು)

ಆಧುನಿಕ ವೈದ್ಯ ಪದ್ಧತಿಯ ಬದಲು ಜಲ ಹಾಗೂ ಮಣ್ಣಿನ ಚಿಕಿತ್ಸೆ, ಉಪವಾಸದ ಉಪಚಾರ ಇತ್ಯಾದಿಗಳ ಪ್ರಯೋಗಗಳೂ ಆಶ್ರಮದಲ್ಲಿ ನಡೆದವು. ಯೆಹೂದಿ ಮಿ. ಪೋಲಕ್, ಜನ್ಮತಃ ಕ್ರೈಸ್ತಳಾದ ಅವರ ಪತ್ನಿ ಗಾಂಧೀಜಿಯ ಸಹಭಾಗಿಗಳಾಗಿ ಅಂತರ್ಜಾತೀಯ ಸಂಬಂಧ, ಸಾಮರಸ್ಯದ ಜೀವನದ ಪ್ರೇರಕರೂ ಆದರು. "ನನ್ನ ಸಂಸಾರದಲ್ಲಿ ಎಲ್ಲ ಮನೋಭಾವಗಳ, ಎಲ್ಲ ಬಗೆಯ ಜನಗಳೂ ನಿರಾತಂಕವಾಗಿ ಪ್ರವೇಶಿಸುತ್ತಿದ್ದುದರಿಂದ ಅದನ್ನು ವಿವಿಧ ಜನರ ಕೂಟವೆಂದು ಕರೆಯಬಹುದು. ಹಾಗೆ ಯೋಚಿಸಿದ ಸಜಾತಿ ವಿಜಾತಿ ಎಂಬ ವ್ಯತ್ಯಾಸಗಳೆಲ್ಲ ಬರಿಯ ಕಲ್ಪನೆಗಳು. ನಾವೆಲ್ಲ ಒಂದು ಸಂಸಾರಕ್ಕೆ ಸೇರಿದವರು" ಎಂದು ಗಾಂಧೀಜಿ ಆತ್ಮಕಥೆಯಲ್ಲಿ ಬರೆಯುತ್ತಾರೆ. (ಅಧ್ಯಾಯ–22)

ಗಾಂಧೀಜಿಯ ರಚನಾತ್ಮಕ ಕಾರ್ಯಗಳ ಹಾಗೂ ಅವರ ವ್ಯಕ್ತಿತ್ವದ ಪ್ರಭಾವ ಎಷ್ಟಿತ್ತೆಂದರೆ ಮಿ.ಪೋಲಕರಂತೆಯೇ ಮಿ. ವೆಸ್ಟ್, ಲಂಡನ್ನಿನಲ್ಲಿ ಮದುವೆಯಾಗಿ ಪತ್ನಿಯೊಡನೆ ಈ ಆಶ್ರಮಕ್ಕೆ ಬಂದು ನೆಲಸಿದರು. ಸಂತಸ–ಉತ್ಸಾಹಗಳಿಂದ ಅಲ್ಲಿಯ ಕಾರ್ಯಗಳಲ್ಲಿ ನೆರವಾದರು. ಹಾಗೆಯೇ ಭಾರತೀಯ ಕುಟುಂಬಗಳೂ ಬಂದು ಸೇರಿ ಫೀನಿಕ್ಸ್ ಒಂದು ಸಣ್ಣ ಹಳ್ಳಿಯಾಗಿಯೇ ಬೆಳೆದುಬಿಟ್ಟಿತು. ಮನೆಯಲ್ಲೇ ಬ್ರೆಡ್ ಮಾಡುವುದು, (ಗೋಧೀ ಬೀಸಿ ಹಿಟ್ಟು ಮಾಡಿ) ಪಾದಚಾರಿಯಾಗಿಯೇ ಕಛೇರಿಗೆ ಹೋಗುತ್ತಾ ಮಕ್ಕಳಿಗೆ ಶಿಕ್ಷಣ, ಅಷ್ಟೇಕೆ ತಾವೇ ನಡೆಸುತ್ತಿದ್ದ ಪಾಯಖಾನೆ ಶುದ್ಧಿಯ ಕಾಯಕ, ಝಾಡಮಾಲಿಯ ಕೆಲಸವನ್ನೂ ತಾವೇ ಕೈಗೊಂಡದ್ದು – ಹೀಗೆ ಅನೇಕ ವಿಧದಲ್ಲಿ ಗಾಂಧೀಜಿ ತಾವು ಓದಿದ್ದ ರಸ್ಕಿನ್ನನ ಚಿಂತನೆಗಳ ಪ್ರಯೋಗಶಾಲೆಯನ್ನಾಗಿ ತಮ್ಮ ಆಶ್ರಮವನ್ನು ಪರಿವರ್ತಿಸಿಬಿಟ್ಟರು. "ಕ್ರಿಯಾಸಿದ್ಧಿಃ ಸತ್ವೇಭವತಿ ಮಹತಾಂನೋಪಕರಣೇ" ಎಂಬ ಶ್ರೀ ಶಂಕರಾಚಾರ್ಯರ ಸೂಕ್ತಿಗೆ ಗಾಂಧೀಜಿ ಉತ್ತಮ ನಿದರ್ಶನ.

ಕೇವಲ ಆದರ್ಶಗಳ ಉಪದೇಶ ಗಾಂಧೀಮಾರ್ಗವಾಗಿರಲಿಲ್ಲ. ಅದರ ನಿಷ್ಠಾವಂತ ಆಚರಣೆಯತ್ತಲೇ ಅವರ ತುಡಿತ. ಇದರ



ಮತ್ತೊಂದು ನಿದರ್ಶನವೆಂದರೆ ನೇಟಾಲಿನ ಜೂಲೂಗಳ ದಂಗೆಯ ಕಾಲದಲ್ಲಿ "ಭಾರತೀಯ ಸೈನ್ಯ ಶುಶ್ರೂಷಾ ದಳವನ್ನು, ಬ್ರಿಟಿಷ್ ಗವರ್ನರ್‌ರ ಅನುಮತಿಯಿಂದಲೇ ಸಂಘಟಿಸಿ ಕಾರ್ಯಪ್ರವೃತ್ತರಾದದ್ದು. 24 ಜನರ ಆ ದಳದ ಸಾರ್ಜೆಂಟ್ ಆದದ್ದು. ಗಾಯಗೊಂಡ ಜೂಲೂಗಳ ಶುಶ್ರೂಷೆಯಲ್ಲಿ ತೊಡಗಿದ್ದು. ಅವರ ಉಪಚಾರಕ್ಕೆ ಬಿಳಿಯರು ಸಿದ್ಧವಿರಲಿಲ್ಲ. ಗಾಂಧೀಜಿ ಸಂತಸದಿಂದಲೇ ಈ ಸೇವಾಕಾರ್ಯವನ್ನು ಕೈಕೊಂಡರು. ಕಾಲಕ್ರಮದಲ್ಲಿ ಸೈನಿಕರ ವಿಶ್ವಾಸವನ್ನೂ ಗಳಿಸಿದರು. ಬಿಳಿಯರು–ಕರಿಯರು ಎಂಬ ಭೇದವನ್ನೆಣಿಸದೆ ಗಾಯಗಳನ್ನು ತೊಳೆದು, ಔಷಧ ಲೇಪಿಸಿ ಬ್ಯಾಂಡೇಜು ಕಟ್ಟುತ್ತಿದ್ದ ಈ ಬ್ಯಾರಿಸ್ಟರ್ ಗಾಂಧಿಯ ತತ್ಪರತೆಯಿಂದ ಸೈನಿಕರೂ ಇತರರೂ ತುಂಬ ಪ್ರಭಾವಿತರಾದರು. ದಿನಕ್ಕೆ ನಲವತ್ತು ಮೈಲಿಗಳಷ್ಟು ನಡಿಗೆ, ಹಗ್ಗದ ಮಂಚಗಳ ಮೇಲೆ ಗಾಯಾಳುಗಳ ಸಾಗಣೆ, ಶುಶ್ರೂಷೆ ಎಲ್ಲವನ್ನೂ ದಣಿವಿಲ್ಲದೆ ಈ ತಂಡ ಮಾಡುತ್ತಿತ್ತು. 'ಈ ಈಶ್ವರ ಪ್ರೀತಿಯ ಕಾರ್ಯದಲ್ಲಿ ನಾವು ತೊಡಗಿಕೊಂಡುದಕ್ಕೆ ನನಗೆ ಬಹಳ ಸಂತೋಷವಾಯಿತು" ಎಂದೇ ಗಾಂಧೀಜಿ ಬರೆಯುತ್ತಾರೆ. (ಅಧ್ಯಾಯ – 24) ಈ ಅನನ್ಯ ಸೇವೆಯನ್ನು ಮೆಚ್ಚಿ ಗವರ್ನರ್ ಸಾಹೇಬರು ಗಾಂಧೀಜಿಗೆ ಕೃತಜ್ಞತಾ ಪತ್ರವನ್ನೂ ಬರೆದರು.

ಇಂಥಾ ಸೇವಾಕಾರ್ಯದಲ್ಲಿ, ರಚನಾತ್ಮಕ ಕಾರ್ಯದಲ್ಲಿ ಧುಮುಕಿ ಈಶ್ವರ ಪ್ರೀತಿಯನ್ನು ಗಳಿಸಬೇಕಾದರೆ ಲೋಭಿಯಾಗಬಾರದು, ಅತಿಯಾಗಿ ವಿಷಯಾಸಕ್ತನಾಗಬಾರದು. ತಾನು–ತನ್ನ ಹೆಂಡತಿ ಮಕ್ಕಳು ಎಂಬ ಸೀಮಿತ ವಲಯದಲ್ಲೇ ಸುತ್ತಬಾರದು. ವಸುದೈವ ಕುಟುಂಬದ ಉನ್ನತ ಆದರ್ಶಕ್ಕೆ ಬ್ರಹ್ಮಚರ್ಯ (ವಿವಾಹದ ನಂತರವೂ) ಅತ್ಯಗತ್ಯ ಎಂಬ ನಿಶ್ಚಯ ಗಾಂಧೀಜಿಯಲ್ಲಿ ಮೊಳೆತು ಬೆಳೆದದ್ದೂ ಈ ಅವಧಿಯಲ್ಲಿಯೇ. "ಹಿಂದೆ ಧಾರ್ಮಿಕ ಗ್ರಂಥಗಳಲ್ಲಿ ಬ್ರಹ್ಮಚರ್ಯವನ್ನು ಕುರಿತು ಹೇಳಿದ ಮಹಿಮೆ ಅತಿಶಯೋಕ್ತಿ ಎಂದು ನಾನು ಭಾವಿಸಿದ್ದೆ. ಆದರೆ ಈಚೆಗೆ ಆ ಪ್ರಶಂಸೆ ಸರಿಯಾದುದು. ಅನುಭವಜನಿತವಾದುದು ಎಂದು ದಿನದಿನಕ್ಕೂ ಹೆಚ್ಚು ಸ್ಪಷ್ಟವಾಗಿ ತೋರುತ್ತಿದೆ" ಎಂದು ಗಾಂಧೀಜಿ ಬರೆಯುತ್ತಾರೆ. (ಅಧ್ಯಾಯ–25) ಇಂಥ ಚಿಂತನೆಯಿಂದ ಗಾಂಧೀಜಿ ಮಾತ್ರವಲ್ಲದೆ ಅವರ ಜೊತೆಗಾರರಾಗಿದ್ದ ಛಗನಲಾಲ್, ಮಗನಲಾಲ, ವೆಸ್ಟ್ ಮುಂತಾದವರೂ ಪ್ರಭಾವಿತರಾದರು. ಹಲವರು ಬ್ರಹ್ಮಚರ್ಯ ವ್ರತವನ್ನೇ ಕೈಕೊಂಡುಬಿಟ್ಟರು. ಬಹುಮಟ್ಟಿಗೆ ಜಯಶಾಲಿಗಳಾದರು.

> ಗಾಂಧೀಜಿಯ ರಚನಾತ್ಮಕ ಕಾರ್ಯಗಳ ಹಾಗೂ ಅವರ ವ್ಯಕ್ತಿತ್ವದ ಪ್ರಭಾವ ಎಷ್ಟಿತ್ತೆಂದರೆ ಮಿ.ಪೋಲಕರಂತೆಯೇ ಮಿ. ವೆಸ್ಟ್, ಲಂಡನ್ನಿನಲ್ಲಿ ಮದುವೆಯಾಗಿ ಪತ್ನಿಯೊಡನೆ ಈ ಆಶ್ರಮಕ್ಕೆ ಬಂದು ನೆಲಸಿದರು. ಸಂತಸ–ಉತ್ಸಾಹಗಳಿಂದ ಅಲ್ಲಿಯ ಕಾರ್ಯಗಳಲ್ಲಿ ನೆರವಾದರು. ಹಾಗೆಯೇ ಭಾರತೀಯ ಕುಟುಂಬಗಳೂ ಬಂದು ಸೇರಿ ಫೀನಿಕ್ಸ್ ಒಂದು ಸಣ್ಣ ಹಳ್ಳಿಯಾಗಿಯೇ ಬೆಳೆದುಬಿಟ್ಟಿತು.

ಗಾಂಧೀಜಿಯ ಜೀವನವ್ರತವೇ ಆಗಿ ಪರಿಣಮಿಸಿದ "ಸತ್ಯಾಗ್ರಹ"ದ ಕಲ್ಪನೆ, ಪ್ರಯೋಗ, ಯಶಸ್ಸು, ಕಡೆಗೆ ಈ ವ್ರತಕ್ಕೆ "ಸತ್ಯಾಗ್ರಹ" ಎಂದು ನಾಮಕರಣವಾದದ್ದು ದಕ್ಷಿಣ ಆಫ್ರಿಕಾದಲ್ಲೇ ಎಂಬುದು ಕುತೂಹಲದ ಅಂಶ. (ಮಗನಲಾಲ ಸೂಚಿಸಿದ 'ಸದಾಗ್ರಹ'ದ ಪರಿಷ್ಕೃತ ರೂಪ ಸತ್ಯಾಗ್ರಹ – ಅದು ಗಾಂಧೀಜಿಯಿಂದಲೇ – ಹೆಸರು ಸೂಚಿಸಿದ ಆತನಿಗೇ ಬಹುಮಾನ ದೊರಕಿತು!) ಪ್ರಕೃತಿಯೊಂದಿಗೆ ಸಮರಸದ ಸಾಧನೆಗಾಗಿ ಗಾಂಧೀಜಿ ನಡೆಸಿದ ಆಹಾರದ ವಿಷಯದ ಪ್ರಯೋಗಗಳೂ ಅಲ್ಲಿಯೇ ನಡೆದವು. ಅದರ ಹಿಂದಿನ ಪ್ರೇರಣೆಯೂ ಧಾರ್ಮಿಕ ಮೂಲದಿಂದಲೇ ಬಂದದ್ದು. ಕಸ್ತೂರಬಾರ ತೀವ್ರ ಕಾಯಿಲೆ, ಮಗನ ಅನಾರೋಗ್ಯದಂತಹ ವಿಷಮ ಪರಿಸ್ಥಿತಿಯಲ್ಲೂ ಗಾಂಧೀಜಿ ಮಾಂಸಾಹಾರಕ್ಕೆ ಒಪ್ಪಲಿಲ್ಲ. ಸಸ್ಯಾಹಾರವೇ ಸಹಜ ಎಂಬ ನಿಲುವಿಗೇ ಬದ್ಧರಾದರು. ಈ ವಿವರಗಳೆಲ್ಲ ಅವರ ಆತ್ಮಕಥೆಯ 28–29ನೆಯ ಅಧ್ಯಾಯದಲ್ಲಿ ದೊರೆಯುತ್ತವೆ. ಭಗವದ್ಗೀತೆಯ ಎರಡನೆಯ ಅಧ್ಯಾಯದ ಪ್ರಸಿದ್ಧ ಶ್ಲೋಕ :

**"ವಿಷಯಾ ವಿನಿವರ್ತಂತೇ ನಿರಾಹಾರಸ್ಯ ದೇಹಿನಃ**
**ರಸವರ್ಜ್ಯಂ ರಸೋಽಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ ॥"**


ಎಂಬುದೇ ಅವರ ಪರಮ ಧ್ಯೇಯವಾಯಿತು ಎಂದು ಗಾಂಧೀಜಿ ಬರೆಯುತ್ತಾರೆ.

ಫೀನಿಕ್ಸ್ ಆಶ್ರಮ ಬೆಳೆಯುತ್ತಾ ಹೋಯಿತು. ಗಂಡು–ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಏರ್ಪಾಡಾಯಿತು. ಹಿಂದೂ, ಮುಸ್ಲಿಂ, ಕ್ರೈಸ್ತ ಬಾಲಕ–ಬಾಲಕಿಯರು ಹಿಂದೂಗಳೊಡನೆ ವಿದ್ಯಾಭ್ಯಾಸ ಮಾಡಿದರು. ತಮ್ಮ "ಟಾಲ್‌ಸ್ಟಾಯ್ ಆಶ್ರಮ"ದಲ್ಲಿ ಗಾಂಧೀಜಿ ತಂದೆಯ ಸ್ಥಾನದಲ್ಲಿದ್ದು, ಹೊರಗಣ ಪ್ರಭಾವಗಳನ್ನು ಒಲ್ಲದೆ ತಾವೇ ಜವಾಬ್ದಾರಿಯನ್ನು ಹೊತ್ತರು. ಬರಿಯ ವಿಷಯ ಸಂಗ್ರಹಣವಲ್ಲ – ಹೃದಯ ಶಿಕ್ಷಣ ಅಥವಾ ಚಾರಿತ್ರ್ಯ ವಿಕಾಸ ಅಲ್ಲ ಪ್ರಮುಖವಾಗಿತ್ತು. ಹೀಗಾಗಿ ವಿದ್ಯಾರ್ಥಿಗಳೊಡನೆಯೇ ಗಾಂಧೀಜಿ ವಾಸಿಸತೊಡಗಿದರು. "ಸಚ್ಚಾರಿತ್ರದ ಬೆಳವಣಿಗೆಯೇ ಶಿಕ್ಷಣದ ಆಧಾರ ಸ್ತಂಭವೆಂದು ನಾನು ಎಣಿಸಿದೆ. ಆ ತಳಹದಿಯನ್ನು ಭದ್ರವಾಗಿ ಹಾಕಿದರೆ ಉಳಿದ ವಿಷಯಗಳನ್ನು ವಿದ್ಯಾರ್ಥಿಗಳು ತಾವಾಗಿಯೇ ಕಲಿಯಬಲ್ಲರು ಅಥವಾ ತಮ್ಮ ಮಿತ್ರರ ಸಹಾಯದಿಂದ ಕಲಿಯಬಲ್ಲರು ಎಂಬುದು ನನ್ನ ಅಭಿಪ್ರಾಯವಾಗಿತ್ತು" ಎಂದು ಗಾಂಧೀಜಿ ಬರೆಯುತ್ತಾರೆ. (ಅಧ್ಯಾಯ–32) ಇದನ್ನು ಜ್ಞಾನ ಶಿಕ್ಷಣ, ಶಾರೀರಕ ಶಿಕ್ಷಣ, ನಿತ್ಯದ ಕೆಲಸ – ಅಡುಗೆಯಿಂದ ಗುಡಿಸುವವರೆಗೆ – ಎಲ್ಲವೂ ಆಶ್ರಮವಾಸಿಗಳ ಸಂಯೋಜಿತ ಶಿಕ್ಷಣದ ಭಾಗಗಳೇ ಆಗಿದ್ದವು. ಆಶ್ರಮದ ಹಣ್ಣಿನ ಮರಗಳ ಪೋಷಣೆ, ತೋಟಗಾರಿಕೆಗಳೂ ಅದರಲ್ಲಿ ಸೇರಿದ್ದವು. ಪಾದರಕ್ಷೆ ಹೊಲಿಯುವುದು, ಮರದ ಕೆಲಸ ಇಂತಹ ರಚನಾತ್ಮಕ – ಔದ್ಯೋಗಿಕ ಶಿಕ್ಷಣವನ್ನು ಮಕ್ಕಳು ಪ್ರೀತಿಯಿಂದಲೇ ಪಡೆಯುತ್ತಿದ್ದರು. ಉಪಾಧ್ಯಾಯರು ಮಕ್ಕಳ ಜೊತೆಗಿರುತ್ತಿದ್ದರು.

ಇಷ್ಟು ಅಗಾಧ ಪ್ರಮಾಣದ ರಚನಾತ್ಮಕ ಕಾರ್ಯಕ್ರಮಗಳಲ್ಲಿ ತೊಡಗಿಕೊಂಡು ಗಾಂಧೀಜಿ ಸುದೀರ್ಘಕಾಲ ಆಫ್ರಿಕಾದಲ್ಲಿ ನೆಲೆಸಿಬಿಟ್ಟರು. ಅವರು ದಕ್ಷಿಣ ಆಫ್ರಿಕಾಗೆ ಹೋದದ್ದು ತಮ್ಮ ವಕೀಲಿ ವೃತ್ತಿಯ ಸಂಬಂಧವಾಗಿ. ದಾದಾ ಅಬ್ದುಲ್ಲಾ ಮತ್ತು ಕಂಪೆನಿ ಎಂಬ ಅಂಗಡಿಯವರ ಕೆಲಸಕ್ಕಾಗಿ. ದಕ್ಷಿಣ ಆಫ್ರಿಕಾದ ನ್ಯಾಯಾಲಯದಲ್ಲಿ ಹೂಡಿದ ದಾವಾ–ಮೊಕದ್ದಮೆ ವಿಷಯದಲ್ಲಿ







ನೆರವು ನೀಡಲು. ಆದರೆ ಅಲ್ಲಿಯ ಚಿತ್ರ–ವಿಚಿತ್ರ ಸಂಗತಿಗಳು, ಒತ್ತಡಗಳು, ಅವರನ್ನು ಬಹು ವಿಶಾಲ ಕ್ಷೇತ್ರಕ್ಕೆ ಸೆಳೆದುಬಿಟ್ಟವು. ಅದು ಭವಿಷ್ಯದ "ಮಹಾತ್ಮ"ನನ್ನು ರೂಪಿಸುವ ವಿಲಾಸದಂತೆಯೇ ತೋರುತ್ತದೆ. ಅವರ ಬಹುಮುಖ ವ್ಯಕ್ತಿತ್ವದ ಕಾರ್ಯರಂಗವಾದ ದಕ್ಷಿಣ ಆಫ್ರಿಕಾವನ್ನು ಗಾಂಧೀಜಿಯಾಗಲೀ, ಭಾರತವಾಗಲೀ ಮರೆಯಲು ಸಾಧ್ಯವೇ ಇಲ್ಲ. ಹಾಗೆಯೇ ಈ ಭಾರತೀಯ ಪುರುಷೋತ್ತಮನನ್ನು ಆಫ್ರಿಕಾ ಸಹ ಮರೆಯುವಂತಿಲ್ಲ. ಜಗತ್ತಿನ ಅಧ್ಯಾತ್ಮಿಕ ಹಾಗೂ ರಾಜಕೀಯ ಇತಿಹಾಸದಲ್ಲಿ ಅದೊಂದು ಅದ್ಭುತ ಆಖ್ಯಾನ.

ರಚನಾತ್ಮಕ ಕಾರ್ಯ – ಸೇವಾವ್ರತ, ಗಾಂಧೀಜಿಯ ಮನಸ್ಸನ್ನು ಬಹುಭದ್ರವಾಗಿ ಹಿಡಿದುಬಿಟ್ಟಿತ್ತು. ಸುಮ್ಮನೆ ಕುಳಿತಿರುವುದು ಅವರಿಗೆ ಸಾಧ್ಯವೇ ಇರಲಿಲ್ಲ. ಬ್ರಿಟಿಷರು ಆಳರಸರಾಗಿದ್ದುದೂ, ಭಾರತೀಯರನ್ನು ಗುಲಾಮರಂತೆಯೇ ನಡೆಸಿಕೊಳ್ಳುತ್ತಿದ್ದುದೂ ಸುಳ್ಳಲ್ಲ. ಆದರೆ ಈ ಕ್ರೂರಸತ್ಯವೂ ಗಾಂಧೀಜಿಯನ್ನು ಆದರ್ಶದಿಂದ ವಿಚಲಿತಗೊಳಿಸಲು ಸಾಧ್ಯವಾಗಲಿಲ್ಲ.

ಗಾಂಧೀಜಿ ಭಾರತಕ್ಕೆ ಹಿಂತಿರುಗುವ ಮೊದಲೇ ಅವರ ಉನ್ನತ ಆದರ್ಶಗಳು – ಅವುಗಳ ಪ್ರಾಯೋಗಿಕ ಅನುಷ್ಠಾನ ಹೇಗೆ ಖಚಿತಗೊಂಡಿದ್ದವು. ಸೇವಾಧರ್ಮ–ರಚನಾತ್ಮಕ ಕಾರ್ಯ ಅವರ ಯೋಜನೆಯ ಎರಡು ಕಣ್ಣುಗಳಾಗಿದ್ದವು ಎಂದು ಸ್ಪಷ್ಟಪಡಿಸಲು ಅವರ ಆಫ್ರಿಕಾದ ಅನುಭವಗಳನ್ನು ಸಾಕಷ್ಟು ವಿಸ್ತರಿಸಲಾಯಿತು. ಭಾರತಕ್ಕೆ ಬರುವ ವೇಳೆಯಲ್ಲಿ ಈ ಆದರ್ಶಗಳಲ್ಲಿ ಅವರಿಗಿದ್ದ ಅಚಲ ಶ್ರದ್ಧೆ, ಅನುಷ್ಠಾನದ ಪ್ರಾಮಾಣಿಕತೆ ಅತ್ಯಂತ ಖಚಿತವಾಗಿತ್ತು. ಈ ಉನ್ನತ ಧ್ಯೇಯ ಸಾಧನೆಯಿಂದಲೇ ಬದುಕಿನ ಸಾರ್ಥಕತೆ ಹಾಗೂ ಪರಿಪೂರ್ಣತೆ ಎಂದು ಅವರ ವಿಶ್ವಾಸ.

### "ಚರಖಾ" ಎಂಬ ಮಹಾಮಂತ್ರ

"ಚರಖಾ"ವನ್ನು ಮಹಾಮಂತ್ರ ಎಂದದ್ದು ಕೇವಲ ಶಬ್ದ ವ್ಯಾಮೋಹದಿಂದಲ್ಲ. "ಮನನಾತ್ ಮಂತ್ರಃ" ಎಂಬುದು ಸುಪ್ರಸಿದ್ಧ ಸೂತ್ರ. ಚಿಂತಿಸಿದಷ್ಟೂ ಅದರ ಅರ್ಥವ್ಯಾಪ್ತಿ ಹೆಚ್ಚುತ್ತಲೇ ಹೋಗುತ್ತದೆ. ಗಾಂಧೀಜಿಗಂತೂ ಹಾಗೆಯೇ ಆಯಿತು. ಅದಕ್ಕೆ ಅಧ್ಯಾತ್ಮಿಕ ಆಯಾಮವಿದೆ, ಸ್ವಾವಲಂಬನೆಯ ಆತ್ಮಪ್ರತ್ಯಯವಿದೆ. ಸ್ವರಾಜ್ಯದ ಮೂಲಶ್ರುತಿ ಚರಖಾದ ನಾದದಲ್ಲಿ ಹೊಮ್ಮುತ್ತಿದೆ. ಚರಖಾ ಭಾರತದ ದಾರಿದ್ರ್ಯ ನಿವಾರಣೆ, ಗೃಹದ ಶೋಭೆ, ಪಾವಿತ್ರ್ಯದ ಪ್ರತೀಕ, ಮಹಿಳೆಯರ ವರದಾನ, ಆರ್ಥಿಕ ಸುಭದ್ರತೆಯ ಸೂತ್ರ, ವ್ಯಾಪಕ ಅರ್ಥದಲ್ಲಿ ಗಾಂಧೀಜಿ ಚರಖಾವನ್ನು ಚಿಂತಿಸುವಾಗ ಭಾವಾವಿಷ್ಟರಾಗುತ್ತಾರೆ.

ಇಂಥ ರಾಟೆ ಅಥವಾ ಚರಖಾದ ಬಗೆಗೆ ಗಾಂಧೀಜಿ 1915ರವರೆಗೆ ಏನೇನೂ ತಿಳಿದಿರಲಿಲ್ಲವಂತೆ. ರಾಟೆಯನ್ನು ಕಣ್ಣಿನಿಂದಲೂ ನೋಡಿರಲಿಲ್ಲವಂತೆ. ನೋಡುವುದಾದರೂ ಹೇಗೆ ? ಆ ವೇಳೆಗೆ ರಾಟೆಗಳು, ಕೈಮಗ್ಗಗಳು ಅಟ್ಟದ ಮೇಲೆ ಸೇರಿದ್ದವು. ನಿರುಪಯೋಗಿ ವಸ್ತುಗಳಾಗಿದ್ದವು.

ಇಂಗ್ಲೆಂಡಿನಲ್ಲಿ ನಡೆದ ಕೈಗಾರಿಕಾ ಕ್ರಾಂತಿಯ ಬಿಸಿ ಭಾರತದ ಗ್ರಾಮೀಣ ಜೀವನ ವಿಧಾನವನ್ನೇ ಕಲಕಿಬಿಟ್ಟಿತ್ತು. ಭಾರಿ ಭಾರಿ ಗಿರಣಿಗಳು ಲ್ಯಾಂಕಾಷೈರ್, ಮ್ಯಾಂಚೆಸ್ಟರ್ ನಗರಗಳಲ್ಲಿ ಹೂಂಕರಿಸತೊಡಗಿದ್ದವು. ಗಂಟೆ–ಗಂಟೆಗೆ ಮೂಟೆಗಟ್ಟಲೆ ಥಾನು ಬಟ್ಟೆಗಳನ್ನು ತಯಾರಿಸಿ ಮಾರುಕಟ್ಟೆಯಲ್ಲಿ ಎಸೆಯುತ್ತಿರುವಾಗ ಗಿರಣಿಗಳ ರಕ್ಕಸ ಉದರವನ್ನು ತುಂಬಲು ಭಾರತದ ಹತ್ತಿಯೇ ಶ್ರೇಷ್ಠವೆನಿಸಿತು. ಗಾಂಧೀಜಿ ಹಮ್ಮಿಕೊಂಡಿದ್ದ ಹತ್ತಾರು ರಚನಾತ್ಮಕ ಕಾರ್ಯಕ್ರಮಗಳಲ್ಲಿ ಈ ಖಾದಿ ಆಂದೋಳನಕ್ಕೆ ಮೊದಲ ಮನ್ನಣೆ ಸಲ್ಲಲೇಬೇಕು. ಅದರ ವಿವರಗಳನ್ನು ಗಮನಿಸುವ ಮೊದಲು ಚರಖಾ – ಎಂಬ ಈ ಮಹಾಮಂತ್ರದ ಬಗೆಗೆ ಗಾಂಧೀಜಿಯ ಭಾವೋದ್ಗಾರಗಳನ್ನು ಕೇಳಿ ಅಚ್ಚರಿಗೊಳ್ಳುವ



ಸಂತಸ ನಮ್ಮದಾಗಲಿ !


- ಚರಖಾದಲ್ಲಿ ನೂಲುವುದನ್ನು ಒಂದು ತಪಸ್ಸು ಅಥವಾ ಯಜ್ಞ ಎಂದು ನಾನು ವಿವರಿಸುತ್ತೇನೆ.
- ಚರಖಾ ಮೂಲಕ ನಾವು ಈ ದೇಶದ ಕೋಟಿ ಕೋಟಿ ಜನರೊಂದಿಗೆ ನಮ್ಮನ್ನು ಗುರುತಿಸಿಕೊಳ್ಳಬಹುದಾಗಿದೆ. ಹಣ ಈ ಜಗತ್ತಿನಲ್ಲಿ ತಮಗೆ ಏನು ಬೇಕಾದರೂ ತಂದುಕೊಡಬಹುದು ಎಂದು ಕರೋಡ್‌ಪತಿಗಳು ಕಲ್ಪಿಸಿಕೊಳ್ಳುತ್ತಾರೆ. ಅದು ಹಾಗಲ್ಲ, ಯಾವುದೇ ಕ್ಷಣದಲ್ಲಿ ಸಾವು ಬಂದು ಅವರನ್ನು ಧೂಳೀಪಟಮಾಡಿಬಿಡಬಹುದು. ಜೀವನವನ್ನು ಕಳೆದುಕೊಳ್ಳುವುದೆಂದರೆ ಆತ್ಮವನ್ನು ಕಳೆದುಕೊಳ್ಳುವುದು ಎಂದಲ್ಲ. ಅಹಂಕಾರವನ್ನು ಸಂತೋಷವಾಗಿ, ಪ್ರಯತ್ನಪೂರ್ವಕವಾಗಿ ಒಂದು ಯಜ್ಞದಂತೆ, ಪೂರ್ಣವಾಗಿ ಅಳಿಸಿಕೊಂಡು ಬಿಡುವುದು, ಆ ಮೂಲಕ ಭಗವಂತನ ಸಾಕ್ಷಾತ್ಕಾರ ಮಾಡಿಕೊಳ್ಳುವುದು. ಚರಖಾ ಒಂಟಿತನವನ್ನು ನೀಗುತ್ತದೆ. ಬಡವರಲ್ಲಿ ಬಡವರನ್ನೂ ಅದು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತದೆ. ಆದುದರಿಂದ ಚರಖಾ ನಮ್ಮನ್ನು ವಿನೀತರನ್ನಾಗಿಸುತ್ತದೆ. ನಮ್ಮ ಅಹಂಕಾರವನ್ನು ಸಂಪೂರ್ಣವಾಗಿ ತೊಡೆದುಹಾಕುತ್ತದೆ.
- ಗ್ರಾಮೀಣ ಕೈಗಾರಿಕೆಯನ್ನು– ಕೈಗಾರಿಕೆಗಳನ್ನೆಲ್ಲ ಪುನರುಜ್ಜೀವನಗೊಳಿಸುವುದರಿಂದ, ಹೆಚ್ಚುತ್ತಲೇ ಇರುವ ಬಡತನ ನಿರ್ಮೂಲವಾಗುತ್ತದೆ. ಉಳಿದೆಲ್ಲ ಕೈಗಾರಿಕೆಗಳು ಅದನ್ನು ಅನುಸರಿಸುತ್ತದೆ. ನಾನು ಚರಖಾವನ್ನು ಒಂದು ಉತ್ತಮ ಗ್ರಾಮ ಜೀವನದ ಆಧಾರವಾಗಿಸಲು ಬಯಸುತ್ತೇನೆ.
- ನಮ್ಮ ಆರ್ಥಿಕ ಸಂಕಟಗಳನ್ನು – ಸಮಸ್ಯೆಗಳನ್ನು ಸಹಜವಾಗಿ, ಸರಳವಾಗಿ, ದುಬಾರಿಯಾಗದಂತೆ, ವ್ಯಾವಹಾರಿಕವಾಗಿ ಪರಿಹರಿಸಬಲ್ಲದು ಈ ಚರಖಾ ಎಂದು ನಾನು ದೃಢವಾಗಿ ಸಮರ್ಥಿಸುತ್ತೇನೆ. ಚರಖಾ ರಾಷ್ಟ್ರದ ಅಭಿವೃದ್ಧಿ ಹಾಗೂ ಆ ಕಾರಣದಿಂದ ಸ್ವಾತಂತ್ರ್ಯದ ಸಂಕೇತ. ವಾಣಿಜ್ಯ ಯುದ್ಧವಲ್ಲ, ವಾಣಿಜ್ಯ ಶಾಂತಿಯ ಸಂಕೇತ ಅದು.
- ಚರಖಾದ ಸಂದೇಶವೆಂದರೆ ಸರಳತೆ, ಮಾನವಸೇವೆ, ಮತ್ತೊಬ್ಬರನ್ನು ನೋಯಿಸದಂತಹ ಬದುಕು, ಶ್ರೀಮಂತರ, ಬಡವರ – ಬಂಡವಾಳ, ಕಾರ್ಮಿಕರ, ರಾಜ–ರೈತರ ನಡುವಣ ಕಳಚಲಾಗದ ಬಂಧನ. ಈ ವಿಶಾಲವಾದ ಸಂದೇಶ ಸಹಜವಾಗಿಯೇ ಉಳಿದೆಲ್ಲವನ್ನೂ ಒಳಗೊಳ್ಳುತ್ತದೆ.
- ಚರಖಾದ ಸಂದೇಶವೆಂದರೆ, ವಾಸ್ತವದಲ್ಲಿ, ಶೋಷಣೆಯ ಪ್ರವೃತ್ತಿಯನ್ನು ಸೇವೆಯ ಉತ್ಸಾಹದಿಂದ ಮಾರ್ಪಡಿಸುವುದು.

• ಖಾದಿ ಹಾಗೂ ಚರಖಾ ಬಗೆಗೆ ಗಾಂಧೀಜಿಯ ಗಾಢ ವಿಶ್ವಾಸ, ವ್ಯಾವಹಾರಿಕ ಪ್ರಯೋಜನಗಳಿಂದ ಅಧ್ಯಾತ್ಮದ ಔನ್ನತ್ಯದವರೆಗಿನ ಬಹುಮುಖ ಆಯಾಮಗಳ ಚಿಂತನೆ ಯಾವ ಸ್ವರೂಪ ಹಾಗೂ ಎತ್ತರದ್ದು ಎಂಬುದನ್ನು ಮೇಲಿನ ಉದ್ಧೃತಗಳು ಸ್ಪಷ್ಟಪಡಿಸುತ್ತವೆ. ಚರಖಾ–ಖಾದಿ ಆಂದೋಳನವನ್ನು ಗಾಂಧೀಜಿ ನಿರ್ವಹಿಸಿದ ರೀತಿಯಲ್ಲಿ ಅವರೊಬ್ಬ ಸಂತ ಶಿರೋಮಣಿಯಾಗಿ ಚರಖಾ ಮಂತ್ರ ದರ್ಶನದಲ್ಲಿ ಒಬ್ಬ ಋಷಿಯಾಗಿ ತೋರಿಬರುತ್ತಾರೆ. ಸರ್ವೋದಯ–ಪೂರ್ಣದೃಷ್ಟಿಗಳು ನಮ್ಮನ್ನು ನಿಜಕ್ಕೂ ಬೆರಗುಗೊಳಿಸುತ್ತವೆ. "ಮಹಾತ್ಮಾ" ಎಂಬ ಪ್ರಶಂಸೆಯೂ ಕೂಡ ಗಾಂಧೀಜಿಯ ವ್ಯಕ್ತಿತ್ವದ ಎತ್ತರ ಬಿತ್ತರಗಳನ್ನು ಹಿಡಿಯಲು ಸಮರ್ಥವಾಗದೇನೋ ಎನಿಸಿಬಿಡುತ್ತದೆ !

**ರೇಖಾಚಿತ್ರಗಳು : ಬಿ. ಜಿ. ಗುಜ್ಜಾರಪ್ಪ**







# ಗಾಂಧಿ

## ಆಚಾರ ವಿಚಾರ ಮತ್ತು ಆಹಾರ ವಿಹಾರ


ಎಸ್. ನಾರಾಯಣಸ್ವಾಮಿ


ಮನುಷ್ಯನ ಆರೋಗ್ಯಕ್ಕೆ ಆಹಾರ ಮತ್ತು ವಿಹಾರ ಬಹಳ ಮುಖ್ಯ – ಈ ವಿಷಯವನ್ನು ಬಹುವಾಗಿ, ಸದಾ ಪ್ರತಿಪಾದಿಸುತ್ತಿದ್ದವರು ಮಹಾತ್ಮಗಾಂಧಿ. ಅವರು ಎಂದೂ ಈ ವಿಷಯದಲ್ಲಿ ರಾಜಿ ಮಾಡಿಕೊಂಡಿರಲಿಲ್ಲ. ಕೆಲವೊಮ್ಮೆ, ಅಥವಾ ಹಲವೊಮ್ಮೆ ಈ ವಿಷಯವನ್ನೇ ತಮ್ಮ ಅಸ್ತ್ರವನ್ನಾಗಿ ಮಾಡಿಕೊಂಡಿದ್ದರು. ಉಪವಾಸ ಮತ್ತು ನಿರಶನ – ಇವುಗಳನ್ನು ಸದಾ ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು.

ಅವರ ಆಹಾರದ ಬಗ್ಗೆ ತಿಳಿಯುವುದಾದರೆ – ಅವರದು ಬಹಳ ಹಿತ, ಮಿತ, ಮತ್ತು ಸಾತ್ವಿಕ ಆಹಾರ. ಆಡಿನ ಹಾಲು ಅವರಿಗೆ ಮುಖ್ಯವಾದ ಆಹಾರವಾಗಿತ್ತು, ನಂದಿಬೆಟ್ಟದಲ್ಲಿ ಆರೋಗ್ಯವನ್ನು ಸುಧಾರಿಸಿಕೊಳ್ಳಲು ತಂಗಿದ್ದಾಗ ಪಕ್ಕದ ಹೆಗಡಹಳ್ಳಿಯ ರೈತನೊಬ್ಬ ಇವರಿಗಾಗಿ ಒಂದು ಮೇಕೆಯನ್ನೇ (ಆಡು) ಗೊತ್ತುಪಡಿಸಿ ಕಳುಹಿಸಿದನು.

ಆಹಾರದಷ್ಟೇ ನೈರ್ಮಲ್ಯವು ಸಹ ಇವರ ದಿನಚರಿಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿತ್ತು. ತಾವು ಉಳಿಯುವ ಸ್ಥಳವು ಕೆಟ್ಟ ವಾಸನೆಯಿಂದ ಮುಕ್ತವಾಗಿರಬೇಕೆಂದು ಬಯಸುತ್ತಿದ್ದರು. ಒಮ್ಮೆ ನಂದಿಬೆಟ್ಟದಲ್ಲಿ ತಂಗಿದ್ದಾಗ ಹೊರಗಡೆ ಬಯಲಿನಲ್ಲಿ ಒಂದು ದಿನ ಸಂಜೆ ಪ್ರಾರ್ಥನೆಯ ಪ್ರಾರಂಭದಲ್ಲಿ ಕೆಲವು ನೊಣಗಳು ಕಾಣಿಸಿಕೊಂಡಿದ್ದನ್ನು ಗಾಂಧೀಜಿ ಕಂಡರು, ಆಗ ಸುತ್ತ ಕುಳಿತಿದ್ದವರನ್ನು ಕರೆದು "ಇಲ್ಲಿಗೆ ಸಮೀಪದಲ್ಲಿ ಎಲ್ಲಿಯೋ ಕೊಳೆ ಸೇರಿರಬೇಕು, ಅದಕ್ಕೆ ನೊಣಗಳು ಬಂದಿವೆ" ಎಂದರು. ಅಲ್ಲಿದ್ದವರು "ಇಲ್ಲಿ ಎಲ್ಲವೂ ಶುಚಿಯಾಗಿದೆ, ಎಲ್ಲೂ ಕೊಳೆ ಇಲ್ಲ" ಎಂದರು. ಗಾಂಧೀಜಿ "ಹಾಗೆ ಇರಲೇ ಇರದು, ಹೋಗಿ ನೋಡಿ?" ಎನ್ನಲು ಕಟ್ಟಡಕ್ಕೆ ಸ್ವಲ್ಪ ದೂರದಲ್ಲಿ ಪಾತ್ರೆಗಳನ್ನು ತೊಳೆದ ಮುಸುರೆ ಬಿದ್ದಿತ್ತು, ನೊಣಗಳು ಅದನ್ನು ಮುತ್ತಿದ್ದವು. ಅದನ್ನು ತೆಗೆದು ಹಾಕಿದ ಮೇಲೆ ನೊಣಗಳು ಮಾಯವಾದವು. ನಂತರ ತಮ್ಮ ಸಂಗಡಿಗರೊಂದಿಗೆ ಪ್ರಾರ್ಥನೆಯನ್ನು ಪ್ರಾರಂಭಿಸಿದರು.

**ಉಪವಾಸ:**

ಗಾಂಧಿಯವರು ತಮ್ಮ ಆರೋಗ್ಯದಲ್ಲಿ ಸ್ವಲ್ಪ ಏರುಪೇರಾದರು ಉಪವಾಸ ಮಾಡಿ ದೇಹವನ್ನು ದಂಡಿಸಿಕೊಳ್ಳುತ್ತಿದ್ದರು. ಈ ರೀತಿಯಾಗಿ ತಮ್ಮ ದೇಹ ದಂಡನೆ ಮಾಡಿಕೊಳ್ಳುವುದನ್ನೇ ಮುಂದೆ ಭಾರತದ ಸ್ವತಂತ್ರಗೊಳಿಸಲು ತಮ್ಮ ಅಸ್ತ್ರವನ್ನಾಗಿ ಮಾಡಿಕೊಂಡರು. ಅಲ್ಲದೆ ಹಿಂದು ಮುಸ್ಲಿಂ ಗಲಭೆಗಳು ಹೆಚ್ಚಾದಾಗ ಅದನ್ನು ತಹಬದಿಗೆ ತರಲು ತಮ್ಮ 'ಉಪವಾಸ' ಅಸ್ತ್ರವನ್ನು ಬಳಸಿದರು. ಈ ಸಂದರ್ಭದಲ್ಲಿ ಹಿಂದು–ಮುಸ್ಲಿಂ ನಾಯಕರು ಮುಂದಾಳತ್ವ ವಹಿಸಿ ತಮ್ಮ ತಮ್ಮ ಜನಾಂಗವನ್ನು ಮನವೊಲಿಸಿ ಗಲಭೆಗಳನ್ನು ನಿಯಂತ್ರಿಸಿದ ನಂತರವಷ್ಟೇ ಗಾಂಧಿಯವರು ತಮ್ಮ ಉಪವಾಸವನ್ನು ನಿಲ್ಲಿಸಿದರು.


ಹರಿಜನರಿಗಾಗಿ ಪ್ರತ್ಯೇಕ ಚುನಾವಣೆಯನ್ನು ನಡೆಸುವುದನ್ನು ವಿರೋಧಿಸಿ 1933ರ ಮೇ 8ರಿಂದ 28ರವರೆಗೆ ಗಾಂಧಿಯವರು 21 ದಿವಸ ದೀರ್ಘ ಉಪವಾಸ ಮಾಡಿದ ವಿಷಯ ಈಗ ಇತಿಹಾಸವಾಗಿದೆ. ಈ 21 ದಿವಸಗಳ ಅವಧಿಯನ್ನು ಆಧಾರವಾಗಿಟ್ಟುಕೊಂಡು ಅಂದು ಲಾಲ್‌ಬಾಗಿನ ನಿರ್ದೇಶಕರಾಗಿದ್ದ ಡಾ॥ ಎಂ. ಹೆಚ್. ಮರೀಗೌಡರು ಒಂದು

ಯೋಜನೆಯನ್ನು ರೂಪಿಸಿದರು. ಅದರಂತೆ ಪ್ರತಿಯೊಬ್ಬರು ಸೊಪ್ಪು ತರಕಾರಿಗಳನ್ನು ಹೆಚ್ಚು ಬೆಳೆಯಬೇಕು, ಬೆಳೆದು ಸ್ವಾವಲಂಬಿಗಳಾಗಬೇಕು, ಮತ್ತು ತಾವು ಬೆಳೆದ ಸೊಪ್ಪು ತರಕಾರಿಗಳನ್ನು ಊಟದಲ್ಲಿ ಹೆಚ್ಚಾಗಿ ಬೆಳೆಸಿದರೆ ದೃಢಕಾಯರಾಗಿ ಶರೀರ ಶ್ರಮದ ಕೆಲಸಗಳನ್ನು ಮಾಡುವುದು ಸುಲಭ – ಇದು ಗಾಂಧೀಜಿಯವರ ಕಲ್ಪನೆ. ಈ ಕಲ್ಪನೆಯನ್ನು ಕಾರ್ಯಗೊಳಿಸಿದವರು ಡಾ॥ ಎಂ. ಹೆಚ್. ಮರೀಗೌಡರು; ಸೊಪ್ಪು ತರಕಾರಿಗಳನ್ನು ಕೇವಲ 20–21 ದಿವಸದಲ್ಲಿ ಬೆಳೆಯಬಹುದೆಂದು ಪ್ರಾತ್ಯಕ್ಷಿಕವಾಗಿ ತೋರಿಸಿಕೊಟ್ಟರು. ಅವರು ಈ ಪ್ರಾತ್ಯಕ್ಷಿಕ ಮಾದರಿಯನ್ನು ಗಾಂಧೀಜಿ ಉಪವಾಸ ಮಾಡಿದ ಅವಧಿಗೆ ಸೂಕ್ತವಾಗಿ ಸಮೀಕರಿಸಿದ್ದಾರೆ. ಹೇಗೆಂದರೆ ಹಿತ್ತಲಲ್ಲಿಯೋ ಅಥವಾ ಊರ ಹೊರಗಡೆ ಕಣದ ಬಳಿಯಲ್ಲಿ ಮಡಿಗಳನ್ನು ಮಾಡಿ ಅವುಗಳಲ್ಲಿ ಕೀರೆ, ದಂಟು, ಸಬ್ಬಸಿಗೆ, ಅರಿವೆ, ಚಕ್ಕೊತ್ತ ಸೊಪ್ಪುಗಳ ಬೀಜಗಳನ್ನು ನೆಟ್ಟು 20 ದಿವಸ ಪೋಷಣೆ ಮಾಡಿದರೆ ಸಾಕು – ಸೊಪ್ಪುಗಳು ಬೆಳೆದು 21ನೇ ದಿವಸ ಅಂದರೆ ಗಾಂಧೀಜಿ ಉಪವಾಸದ ಕೊನೆಯ ದಿನ ಆ ಸೊಪ್ಪುಗಳನ್ನು ಕಟಾವು ಮಾಡಿ ಅಡುಗೆ ಮಾಡಿ ಊಟಮಾಡುವುದು ಸಾಧ್ಯ ಎಂದು ರೈತರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ.

ಡಾ॥ ಎಂ. ಹೆಚ್. ಮರೀಗೌಡರಿಗೆ ಗಾಂಧೀಜಿಯವರ ಆದರ್ಶಗಳ ಮೇಲೆ ಎಷ್ಟೊಂದು ಗೌರವವಿತ್ತೆಂದರೆ ಗಾಂಧಿಯವರ ಜನ್ಮಶತಮಾನೋತ್ಸವ ಆಚರಣೆಯ ಪ್ರಯುಕ್ತ 1969ರಿಂದ 1974ರವರೆಗೆ ಗಾಂಧಿಯವರ ನೆನಪಿನಲ್ಲಿ ಸುಮಾರು 100 ತೋಟಗಾರಿಕೆ ಕ್ಷೇತ್ರಗಳನ್ನು ಅಭಿವೃದ್ಧಿ ಪಡಿಸಿದ್ದಾರೆ. ಮುಖ್ಯವಾಗಿ ದೇವನಹಳ್ಳಿ ವಿಮಾನ ನಿಲ್ದಾಣದ ಎದುರು "ಮಹಾತ್ಮಾ ಗಾಂಧಿ ಜನ್ಮಶತಮಾನೋತ್ಸವ ತೋಟಗಾರಿಕಾ ಕ್ಷೇತ್ರ" ಸೇರಿದಂತೆ ಕನ್ನಮಂಗಲ, ಬಗಿನಗೆರೆ, ಭೈರಮಂಗಲ ಹೀಗೆ ಇನ್ನೂ ಮುಂತಾದ ಸ್ಥಳಗಳಲ್ಲಿ ಒಟ್ಟು ಸುಮಾರು ನೂರು ತೋಟಗಾರಿಕೆ ಕ್ಷೇತ್ರಗಳನ್ನು ಸ್ಥಾಪಿಸಿ ಅವುಗಳಿಗೆ ಗಾಂಧಿಯವರ ಹೆಸರನ್ನಿಟ್ಟು ಅವರ ಹೆಸರನ್ನು ಚಿರಸ್ಥಾಯಿಗೊಳಿಸಿದ್ದಾರೆ.

ಗಾಂಧೀಜಿಯವರ ಬಗ್ಗೆ ಸ್ಮರಣಿಕೆಯಾಗಿ ಒಂದು ನಿಯತಕಾಲಿಕ ತೋಟಗಾರಿಕೆ ಪತ್ರಿಕೆಯನ್ನು 1970ರ ಅಕ್ಟೋಬರ್ 2ರಂದು ಅವರ ಶತಮಾನೋತ್ಸವ ಆಚರಣೆಯ ಪ್ರಯುಕ್ತ ಪ್ರಾರಂಭಿಸಿದರು. ಇದು "ತೋಟಗಾರ" ಎಂಬ ನಾಮಾಂಕಿತದಲ್ಲಿ ಲಾಲ್‌ಬಾಗಿನ ಮೈಸೂರು ಉದ್ಯಾನ ಕಲಾಸಂಘದಿಂದ ಇಂದಿಗೂ ಪ್ರಕಟಗೊಳ್ಳುತ್ತಿದೆ. ಈ ಪತ್ರಿಕೆಯ ಮುಖಪುಟದಲ್ಲಿ ಗಾಂಧೀಜಿಯ ಭಾವ ಚಿತ್ರವನ್ನು ಅನೂಚಾನವಾಗಿರುವಂತೆ ವಿನ್ಯಾಸಗೊಳಿಸಿದ್ದಾರೆ.

> ಗಾಂಧೀಜಿಯವರ ಬಗ್ಗೆ ಸ್ಮರಣಿಕೆಯಾಗಿ ಒಂದು ನಿಯತಕಾಲಿಕ ತೋಟಗಾರಿಕೆ ಪತ್ರಿಕೆಯನ್ನು 1970ರ ಅಕ್ಟೋಬರ್ 2ರಂದು ಅವರ ಶತಮಾನೋತ್ಸವ ಆಚರಣೆಯ ಪ್ರಯುಕ್ತ ಪ್ರಾರಂಭಿಸಿದರು. ಇದು "ತೋಟಗಾರ" ಎಂಬ ನಾಮಾಂಕಿತದಲ್ಲಿ ಲಾಲ್‌ಬಾಗಿನ ಮೈಸೂರು ಉದ್ಯಾನ ಕಲಾಸಂಘದಿಂದ ಇಂದಿಗೂ ಪ್ರಕಟಗೊಳ್ಳುತ್ತಿದೆ.






ಗಾಂಧೀಜಿಯವರು ವಕೀಲರಾಗಿ ತಮ್ಮ ವೃತ್ತಿ ಜೀವನ ಪ್ರಾರಂಭಿಸಿದರೂ ಸಹ 1927ರಲ್ಲಿ ಬೆಂಗಳೂರಿನಲ್ಲಿ ತಂಗಿದ್ದಾಗ ಆಡುಗೋಡಿಯಲ್ಲಿನ ಇಂಪೀರಿಯಲ್ ಡೇರಿಗೆ (ಈಗಿನ NDRI ರಾಷ್ಟ್ರೀಯ ಹೈನುಗಾರಿಕಾ ಸಂಶೋಧನಾ ಸಂಸ್ಥೆ)ಗೆ ಭೇಟಿ ನೀಡಿದರು. ಆಗ ಅದು ಬ್ರಿಟಿಷ್ ಸರಕಾರದಲ್ಲಿ ಕ್ಷೀರೋತ್ಪಾದನೆಯ ಸಂಶೋಧನೆಯ ಕೇಂದ್ರವಾಗಿತ್ತು, ಅಲ್ಲಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿಯ ಸಂದರ್ಶಕರ ನೋಂದಣಿ ಪುಸ್ತಕದಲ್ಲಿ ತಾವು ಒಬ್ಬ ರೈತರೆಂದು ನಮೂದಿಸಿ ಸಹಿ ಮಾಡಿರುತ್ತಾರೆ. ಅವರಿಗೆ ರೈತಾಪಿ ಜನರ ಮೇಲೆ ಇದ್ದ ಪ್ರೀತಿ ಕಾಳಜಿ ಬಗ್ಗೆ ಈ ವಿಷಯ ಉದಾಹರಣೆಯಾಗಿದೆ.

ಭಾರತ ಅಖಂಡವಾಗಿರಬೇಕೆಂದು ಬಯಸುತ್ತಿದ್ದ ಗಾಂಧೀಜಿ 1946ರ ಅಂತ್ಯದಲ್ಲಿ ಬಂಗಾಲದಲ್ಲಿ ಕೋಮು ಗಲಭೆಗಳಿಂದ ನಡೆದ ದರೋಡೆ, ರಕ್ತಪಾತ, ಹೊಡೆದಾಟಗಳಿಂದ ಜನ ತತ್ತರಿಸಿದಾಗ ನೌಕಾಲಿಯಲ್ಲಿ ಪ್ರವಾಸ ಮಾಡಿದ ಗಾಂಧೀಜಿ ಭಾರತದ ಬಡವರ ಆಹಾರ ಭದ್ರತೆಯ ಬಗ್ಗೆ ಬಹಳ ಮಾರ್ಮಿಕವಾಗಿ ನುಡಿದಿದ್ದಾರೆ – ಸ್ವತಂತ್ರ ಭಾರತದ ಪ್ರತಿಯೊಬ್ಬ ಪ್ರಜೆಯು ತನ್ನ ಆಹಾರವನ್ನು ತಾನೆ ಬೆಳೆಯಬೇಕು, ಅಥವಾ ಕೊಂಡು ತಿನ್ನುವ ಶಕ್ತಿಯನ್ನಾದರೂ ಬೆಳೆಸಿಕೊಳ್ಳುವಂತ ವಾತಾವರಣವನ್ನು ಸರ್ಕಾರ ಸೃಷ್ಟಿಸಬೇಕೇ ಹೊರತು ಧಾನ ಧರ್ಮ ದಯೆಯಿಂದ ಆಹಾರವನ್ನು ನೀಡಬಾರದು. ಈ ತರಹೆಯ ಯೋಜನೆಗಳಿಂದ ನಮ್ಮ ಸರ್ಕಾರ ನಮ್ಮ ಜನರನ್ನು ಸೋಮಾರಿಗಳನ್ನಾಗಿ ಹಾಗೂ ಪರಾವಲಂಬಿಗಳನ್ನಾಗಿ ಮಾಡುವುದರಲ್ಲಿ ಸಂದೇಹವಿಲ್ಲ. ಹೀಗೆ ಗಾಂಧೀಜಿಯವರು ಭಾರತದ ರೈತರ ಬಗ್ಗೆ ಬಹಳ ಕಾಳಜಿ ಹೊಂದಿದ್ದರು, ಅಲ್ಲದೆ ಅವರು ಯಾವತ್ತೂ ರೈತರು ಸ್ವಾವಲಂಬಿಗಳಾಗಬೇಕೆಂದು ಬಯಸುತ್ತಿದ್ದರು. ■





# ಗಾಂಧಿ ಗ್ರಾಮಸ್ವರಾಜ್ ಕಲ್ಪನೆಯ ಸಾಕಾರ BAIF




ಮಹಾತ್ಮಾ ಗಾಂಧೀಜಿಯವರು ಸರ್ವೋದಯ ಮತ್ತು ಅಂತ್ಯೋದಯ ತತ್ವಗಳ ಮೂಲಕ ಹಳ್ಳಿಗಳ ಅಭಿವೃದ್ಧಿಯಾಗಬೇಕು. "ಗ್ರಾಮ ಸ್ವರಾಜ್ಯವೇ ಪೂರ್ಣ ಸ್ವರಾಜ್ಯದ ಪಥ" ಎಂದು ಬಲವಾಗಿ ಪ್ರತಿಪಾದಿಸುತ್ತಿದ್ದರು. ಸಹಜವಾಗಿಯೇ, ಗಾಂಧೀಜಿಯವರ ಗ್ರಾಮ ಸ್ವರಾಜ್ ತತ್ವವನ್ನು BAIF ವ್ಯವಸ್ಥಿತವಾಗಿ ತನ್ನ ಕಾರ್ಯಚಟುವಟಿಕೆಗಳ ಮೂಲಕ ಕಾರ್ಯಗತಗೊಳಿಸುತ್ತಿದೆ.

ಇಂಗ್ಲೀಷ್ ಮೂಲ ಲೇಖನ: ಸಿಬಂತಿ ಪದ್ಮನಾಭ ಕೆ.ವಿ.
ಕನ್ನಡಕ್ಕೆ: 'ಕಾರಂಜಿ'

**ದ**ಶಕದ ಹಿಂದಿನ ದಿನಗಳು.

ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ಉಪ್ಪಾರಹಳ್ಳಿಯ ಜನತೆಯದ್ದು ಸಂಕಷ್ಟಕರ ಹಾಗೂ ತ್ರಾಸದಾಯಕ ದಿನಗಳು. ದಿನವಿಡೀ ದುಡಿದರೂ ಸಂತೃಪ್ತಿ ಎನ್ನುವುದನ್ನೇ ಕಾಣದ ಕಾರಣ ನಿಧಾನವಾಗಿ ಕೃಷಿಕ ಸಮಾಜ ಬೇಸಾಯದಿಂದಲೇ ವಿಮುಖವಾಗಲು ಆರಂಭಿಸಿತ್ತು. ಉಳುಮೆ–ವ್ಯವಸಾಯ ಜೋಳಿಗೆ ತುಂಬಿಸದು, ಬದಲಿಗೆ ಸಾಲದ ಶೂಲಕ್ಕೆ ಸಿಲುಕಿಸುತ್ತದೆ ಎನ್ನುವುದನ್ನು ಅಕ್ಷರಶಃ ಇಲ್ಲಿನ ಬೇಸಾಯಗಾರರು ಅನುಭವಿಸುತ್ತಿದ್ದರು.

ಇಂತಿಪ್ಪ ಉಪ್ಪಾರಹಳ್ಳಿಯ ಚಿತ್ರಣ ಇದೀಗ ಸಂಪೂರ್ಣ ಬದಲು. ಒಂದೊಮ್ಮೆ ಬೆಂಗಾಡಿನ ಪ್ರತಿರೂಪದಂತಿದ್ದ ಈ ಪುಟ್ಟ ಗ್ರಾಮದಲ್ಲಿ ಈಗ ಎತ್ತ ನೋಡಿದರತ್ತ ಹಸಿರು, ಸಂತೃಪ್ತಭಾವದ ಮೊಗ ಹೊತ್ತೇ ತಿರುಗಾಡುವ ಮಣ್ಣಿನಮಕ್ಕಳು. ಸಾಂಪ್ರದಾಯಿಕ ಕೃಷಿಜ್ಞಾನ ಮತ್ತು ಆಧುನಿಕ ಕೃಷಿತಂತ್ರಗಾರಿಕೆಯ ಸಮ್ಮಿಲನ, ಜೊತೆಗೆ ಸಾವಯವ ಬೇಸಾಯ ಪದ್ಧತಿಗೆ ಇಲ್ಲಿನ 100ಕ್ಕೂ ಹೆಚ್ಚು ಕುಟುಂಬಗಳು ಮೊರೆಹೋಗಿವೆ. ಪರಿಣಾಮ, ಊಹೆಗೂ ನಿಲುಕದ ಪ್ರಮಾಣದಲ್ಲಿ ಉಪ್ಪಾರಹಳ್ಳಿಯ ಚಿತ್ರಣ ಬದಲಾಗಿದೆ, ಊರಿನ ಹೊರಭಾಗಗಳಲ್ಲೆಲ್ಲಾ ಹಸಿರಹೊದಿಕೆ ಎದ್ದಿದೆ.

ಗ್ರಾಮದ ಪ್ರತಿಯೊಬ್ಬ ನಿವಾಸಿಗಳೂ ಎರೆಹುಳು ಗೊಬ್ಬರ,





'ಜೀವಾಮೃತ', ಸಾವಯವ ಕೀಟನಾಶಕ, ದ್ರವಗೊಬ್ಬರ ಮತ್ತು ಜಪಾನ್ ಮಾದರಿಯ ಸಾವಯವ ಗೊಬ್ಬರ ತಯಾರಿಕೆಯಲ್ಲಿ ಪರಿಣಿತರು. ಬದನೆ, ಟೊಮ್ಯಾಟೊ, ಹುರುಳಿ, ಹಾಗಲ, ಬೆಂಡೆ, ಮೂಲಂಗಿ, ಪಡವಲ, ಸೋರೆ...., ಹೀಗೆ ಯಾವುದೇ ತರಕಾರಿ ಬೇಕಿದೆಯೇ? ಸಾವಯವ ಪದ್ಧತಿಯಲ್ಲಿ ಬೆಳೆದ ಇವು ಗ್ರಾಮದ ಒಂದಲ್ಲಾ ಒಂದು ಬೀದಿಯಿಂದ ಲಭ್ಯ.

"ನಾವೀಗ ಸಂತೃಪ್ತರು. ತರಕಾರಿಯಷ್ಟು ಆದಾಯವನ್ನು ಇನ್ನಾವುದರಿಂದಲೂ ಪಡೆಯಲಾಗದು ಎನ್ನುವುದು ಮನದಟ್ಟಾಗಿದೆ. ಸಾವಯವ ಪದ್ಧತಿ ಮಾತ್ರವೇ ನಮ್ಮನ್ನು ಉಳಿಸಬಲ್ಲದು," ಎನ್ನುವುದೇ ಇಲ್ಲಿನ ಗ್ರಾಮಸ್ಥರ ಮನದಮಾತು.

ಅಚ್ಚರಿಯ ಸಂಗತಿ. ಇದು ಕೇವಲ ಉಪ್ಪಾರಹಳ್ಳಿಯ ಕಥೆಯಲ್ಲ. ಸಾವಯವ ಕೃಷಿ ಪದ್ಧತಿಯ ಮೂಲಕ ಸ್ವಾವಲಂಬನೆಯ ಮಂತ್ರವನ್ನು ಪಠಿಸುವ ನೂರಾರು ಹಳ್ಳಿಗಳನ್ನು ರಾಜ್ಯದೆಲ್ಲೆಡೆ ಕಾಣಬಹುದು. ಇದರ ಹಿಂದಿನ ಬಲವೇ 'ಬರ್ಡ್–ಕೆ' (BAIF Institute of Rural Development - Karnataka). ರಾಷ್ಟ್ರಪಿತನ 'ಗ್ರಾಮ ಸ್ವರಾಜ್ಯ' ಕಲ್ಪನೆ ಸಾಕಾರಗೊಳ್ಳಲು ಜನಸಾಮಾನ್ಯರನ್ನು ನಿತ್ಯನಿರಂತರ ಪ್ರೋತ್ಸಾಹಿಸುತ್ತಿರುವ ಈ ಲಾಭರಹಿತ ಸಂಸ್ಥೆ ಸದ್ದಿಲ್ಲದೆ ಕೃಷಿಕ್ರಾಂತಿಗೆ ಕಾರಣವಾಗುತ್ತಿದೆ.

1980ರಲ್ಲಿ ಮೈದಳೆದ 'ಬರ್ಡ್–ಕೆ'ಯ ಆಶಯ ಸ್ವಾವಲಂಬಿ ಗ್ರಾಮೀಣ ಸಮಾಜ ನಿರ್ಮಾಣ, ತನ್ಮೂಲಕ ಆಹಾರ ಭದ್ರತೆ, ಶುದ್ಧ ಕುಡಿಯುವ ನೀರು, ಉತ್ತಮ ಆರೋಗ್ಯ, ಲಿಂಗ ಸಮಾನತೆ, ಶಿಶು ಅನುಪಾತ ಹೆಚ್ಚಳ, ಸಾಕ್ಷರತೆ, ಉನ್ನತ ನೈತಿಕ ಮೌಲ್ಯಗಳು ಮತ್ತು ಉತ್ತಮ ಪರಿಸರ ನಿರ್ಮಾಣ ಮಾಡುವುದು. ಆರಂಭದಿಂದಲೂ ಗಾಂಧೀಜಿ ಹಾಕಿಕೊಟ್ಟ ಮಾರ್ಗದಲ್ಲಿಯೇ ಸಾಗುತ್ತಿರುವ 'ಬರ್ಡ್–ಕೆ' ಗಾಂಧೀಜಿಯವರ 'ಸರ್ವೋದಯ' ತತ್ವಗಳನ್ನು ತನ್ನ ಕಾರ್ಯಕ್ರಮಗಳ ಮೂಲಕ ಅನುಷ್ಠಾನಗೊಳಿಸುತ್ತಿದೆ. ಗ್ರಾಮೀಣ ಕುಟುಂಬಗಳಿಗೆ ವಿಶೇಷವಾಗಿ ನಿರ್ಲಕ್ಷಿತ ವರ್ಗಗಳಿಗೆ – ಸ್ವಉದ್ಯೋಗ ನಿರ್ಮಾಣ, ಸುಸ್ಥಿರ ಜೀವನಶೈಲಿ, ಉತ್ತಮ ಪರಿಸರ ನಿರ್ಮಾಣ, ಜೀವನ ಗುಣಮಟ್ಟ ವೃದ್ಧಿ ಮತ್ತು ಉತ್ತಮ ಮಾನವೀಯ ಮೌಲ್ಯಗಳ ನಿರ್ಮಾಣ 'ಬರ್ಡ್–ಕೆ'ಯ ಉದ್ದೇಶ.

**ಗಾಂಧೀಜಿ ತತ್ವದ ಬೇರುಗಳು**

ಗಾಂಧೀಜಿಯವರ ಕನಸಾದ ಗ್ರಾಮೀಣ ಭಾರತದ ಏಳಿಗೆಯೇ 'ಬರ್ಡ್–ಕೆ' ಮೈದಳೆಯಲು ಕಾರಣ. ಸ್ವಾತಂತ್ರಕ್ಕೂ ಮುನ್ನಾ ವರ್ಷ ಮಹಾತ್ಮಾ ಗಾಂಧೀಜಿ ಆರಂಭಿಸಿದ್ದ 'ನೇಚರ್ ಕ್ಯೂರ್ ಆಶ್ರಮ'ವೇ 'ಬರ್ಡ್–ಕೆ' ಆರಂಭಕ್ಕೆ ಸ್ಫೂರ್ತಿ. 1946ರ ಮಾರ್ಚಿಯಲ್ಲಿ ಗಾಂಧೀಜಿ ಪುಣೆಯ ಉರುಲಿಕಂಚನ್ ಎಂಬಲ್ಲಿ ನ್ಯಾಚುರೋಪತಿ ಕೇಂದ್ರವನ್ನು ಆರಂಭಿಸಿದ್ದರು. ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದ ಕಿರಿಯ ಕಾರ್ಯಕರ್ತರಾದ ಮಣಿಭಾಯಿ ದೇಸಾಯಿಗೆ ಕೇಂದ್ರ ನಿರ್ವಹಣೆಯ ಹೊಣೆ ವಹಿಸಲಾಗಿತ್ತು. ಗ್ರಾಮೀಣ ಮಂದಿಯ ಜೀವನ ಗುಣಮಟ್ಟ ವೃದ್ಧಿಯೇ ನ್ಯಾಚುರೊಪತಿ ಕೇಂದ್ರ ಸ್ಥಾಪನೆಯ ಉದ್ದೇಶವಾಗಿದ್ದು, ಅದನ್ನು ಮಣಿಭಾಯಿ ದೇಸಾಯಿ ಸುತ್ತಲ ಪ್ರದೇಶಗಳಲ್ಲಿ ಸಮುದಾಯ ಅಭಿವೃದ್ಧಿ ಮತ್ತು ಸುಸ್ಥಿರ







ಜೀವನಶೈಲಿ ನಿರ್ಮಾಣ ಕಾರ್ಯಗಳಿಗಾಗಿ ಬಳಸಿಕೊಂಡಿದ್ದರು.

ಕೇಂದ್ರದ ಕಾರ್ಯಗಳ ಯಶಸ್ಸು ಅವರನ್ನು 1967ರಲ್ಲಿ ಸಾರ್ವಜನಿಕ ಟ್ರಸ್ಟ್ ಆದ 'ಭಾರತೀಯ ಆಗ್ರೊ ಇಂಡಸ್ಟ್ರೀಸ್ ಫೌಂಡೇಷನ್' (BAIF) 'ಬರ್ಡ್–ಕೆ' ಸ್ಥಾಪಿಸುವಂತೆ ಪ್ರೇರೇಪಿಸಿತು. ಉತ್ತಮ ಆಡಳಿತ ನಿರ್ವಹಣೆ ಕ್ರಮಗಳ ಮೂಲಕ ಕೃಷಿ ಆಧಾರಿತ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಗ್ರಾಮೀಣಿಗರನ್ನು ಪ್ರೇರೇಪಿಸುವುದೇ ಟ್ರಸ್ಟ್ ಸ್ಥಾಪನೆಯ ಉದ್ದೇಶವಾಗಿತ್ತು. 1989ರಲ್ಲಿ BAIF ಅನ್ನು BAIF Development Research Foundation ಎಂದು ಮರುನಾಮಕರಣ ಮಾಡಲಾಯಿತು. ಹಳ್ಳಿಗಳ ಸಮೃದ್ಧಿಗಾಗಿ ಅಭಿವೃದ್ಧಿ ಆಧಾರಿತ ಸಂಶೋಧನೆಗಳನ್ನು ಕೈಗೊಳ್ಳುವುದೇ ಇದರ ಉದ್ದೇಶ. ಇಂದು ಫೌಂಡೇಷನ್ 16 ರಾಜ್ಯಗಳಲ್ಲಿ ವಿವಿಧ ಸಹಾಯಕ ಸಂಸ್ಥೆಗಳ ಮೂಲಕ ಕಾರ್ಯನಿರ್ವಹಿಸುತ್ತಿದೆ. ಅವುಗಳಲ್ಲಿ ಒಂದಾದ 'ಬರ್ಡ್–ಕೆ' 1980ರ ಮೇ 13ರಂದು ಆರಂಭವಾಗಿದ್ದು ಕರ್ನಾಟಕದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಜಾತ್ಯತೀತ ಹಾಗೂ ವೃತ್ತಿಪರವಾಗಿ ನಿರ್ವಹಿಸಲ್ಪಡುತ್ತಿರುವ ರಾಜಕೀಯೇತರ ಸಂಸ್ಥೆಯಾದ 'ಬರ್ಡ್–ಕೆ', ಅಂದಿನಿಂದಲೂ ಗಾಂಧೀಜಿಯವರ ಕನಸಾದ 'ಎಲ್ಲರಿಗಾಗಿ ಅಭಿವೃದ್ಧಿ'ಯನ್ನು ಸಾಕಾರಗೊಳಿಸಲು ಶ್ರಮಿಸುತ್ತಿದೆ.

BAIF ನ ಆರಂಭದ ಪ್ರಾಶಸ್ತ್ಯ ಹೈನುಗಾರಿಕೆ ಅಭಿವೃದ್ಧಿಯಾಗಿತ್ತು. ಪಶುಸಂಗೋಪನೆಯಲ್ಲಿ ತೊಡಗಿಸಿಕೊಳ್ಳುವುದು ಸರಳ ಹಾಗೂ ಪರಿಣಾಮಕಾರಿಯಾಗಿ ಗ್ರಾಮೀಣ ಸಮುದಾಯವನ್ನು ಅಭಿವೃದ್ಧಿಯತ್ತ ಕರೆದೊಯ್ಯಬಲ್ಲದು ಎಂಬುದು ಡಾ. ಮಣಿಭಾಯಿ ದೇಸಾಯಿ ಅವರ ಚಿಂತನೆಯಾಗಿದ್ದ ಕಾರಣ ಹೈನುಗಾರಿಕೆಗೆ ಒತ್ತು ನೀಡಲಾಗಿತ್ತು. ಬಳಿಕ ಅದರ ಕಾರ್ಯಚಟುವಟಿಕೆಗಳನ್ನು ಪ್ರಾಕೃತಿಕ ಸಂಪನ್ಮೂಲಗಳ ಸಂರಕ್ಷಣೆಗೆ ಒತ್ತು ನೀಡಲಾಯಿತು. ಮಹಿಳಾ ಸಬಲೀಕರಣ, ಜೀವನ ಗುಣಮಟ್ಟ ವೃದ್ಧಿ ಮತ್ತು ಪರಿಸರ ಸಂರಕ್ಷಣೆಗಳೇ ಫೌಂಡೇಷನ್ ಕಾರ್ಯಚಟುವಟಿಕೆಗಳ ವಿಸ್ತರಣೆಗೆ ಕಾರಣ.

'ಬರ್ಡ್–ಕೆ' ತಿಪಟೂರಿನಲ್ಲಿದ್ದು, ಬೆಂಗಳೂರಿನಿಂದ 150 ಕಿ.ಮೀ ದೂರದಲ್ಲಿದೆ.

**ಗ್ರಾಮ ಸ್ವರಾಜ್ಯದ ಕನಸು**

ಮಹಾತ್ಮಾ ಗಾಂಧೀಜಿಯವರು ಸರ್ವೋದಯ ಮತ್ತು ಅಂತ್ಯೋದಯ ತತ್ವಗಳ ಮೂಲಕ ಹಳ್ಳಿಗಳ ಅಭಿವೃದ್ಧಿಯಾಗಬೇಕು. "ಗ್ರಾಮ ಸ್ವರಾಜ್ಯವೇ ಪೂರ್ಣ ಸ್ವರಾಜ್ಯದ ಪಥ" ಎಂದು ಬಲವಾಗಿ ಪ್ರತಿಪಾದಿಸುತ್ತಿದ್ದರು. ಸಹಜವಾಗಿಯೇ, ಗಾಂಧೀಜಿಯವರ ಗ್ರಾಮ ಸ್ವರಾಜ್ ತತ್ವವನ್ನು BAIF ವ್ಯವಸ್ಥಿತವಾಗಿ ತನ್ನ ಕಾರ್ಯಚಟುವಟಿಕೆಗಳ ಮೂಲಕ ಕಾರ್ಯಗತಗೊಳಿಸುತ್ತಿದೆ. BAIF ವಿವಿಧ ಪ್ರಯತ್ನಗಳ ಮೂಲಕ ಸ್ವಾವಲಂಬಿ ವಾತಾವರಣವನ್ನು ಹಳ್ಳಿಗಳಲ್ಲಿ ನಿರ್ಮಾಣ ಮಾಡಿ ಗಾಂಧೀಜಿಯವರ ಕನಸನ್ನು ಸಾಕಾರಗೊಳಿಸಲು ತೊಡಗಿಸಿಕೊಂಡಿದೆ.

ಹೆಸರಾಂತ ಕೃಷಿ ವಿಜ್ಞಾನಿ ಡಾ. ಎಂ.ಎಸ್. ಸ್ವಾಮಿನಾಥನ್ ಬರೆದಂತೆ, ಗ್ರಾಮೀಣಾಭಿವೃದ್ಧಿಗಾಗಿಯ 'ಗಾಂಧೀ ಮಾದರಿ' (The Gandhian Model of Rural Development) ಮೂರು ಪ್ರಮುಖ ಅಂಶಗಳನ್ನು ಒಳಗೊಂಡಿದೆ. ಅವುಗಳನ್ನು



BAIF ತನ್ನ ಕಾರ್ಯಚಟುವಟಿಕೆಗಳಲ್ಲಿ ಅಳವಡಿಸಿಕೊಳ್ಳುವ ಮೂಲಕ ಗ್ರಾಮೀಣಾಭಿವೃದ್ಧಿಗಾಗಿ ಶ್ರಮಿಸುತ್ತಿದೆ. ಅವುಗಳೆಂದರೆ:

- ಮೂಲ ಜೀವಾಧಾರಿಯ ವ್ಯವಸ್ಥೆಗಳಾದ ಮಣ್ಣು, ಜಲ, ಜೀವವೈವಿಧ್ಯ ಮತ್ತು ವಾತಾವರಣದ ಸಂರಕ್ಷಣೆ ಮತ್ತು ಅಭಿವೃದ್ಧಿ
- ಸುಸ್ಥಿರ ಕೃಷಿ ಪದ್ಧತಿಗಳ ಮೂಲಕ ಕೃಷಿ ಉತ್ಪನ್ನಗಳು ಮತ್ತು ಆದಾಯ ವೃದ್ಧಿ. ಮತ್ತು,
- ಹೆಚ್ಚುವರಿ ಮಾರುಕಟ್ಟೆ ಆಧಾರಿತ ಹಾಗೂ ಕೃಷಿಯೇತರ ಆದಾಯ ಪಡೆಯುವುದು

"ಈ ಗಾಂಧೀ ತತ್ವಗಳೇ ನಾವು ಸಮುದಾಯ ಆರೋಗ್ಯ, ಲಿಂಗ ಸಮಾನತೆ, ಸ್ತ್ರೀ ಸಬಲೀಕರಣ ಮತ್ತು ವಾತಾವರಣಕ್ಕೆ ಹೊಂದಿಕೊಳ್ಳುವ/ಅನುಗುಣವಾದ ಕ್ರಮಗಳ ಮೂಲಕ ಗ್ರಾಮಗಳಲ್ಲಿ ಸುಸ್ಥಿರ ಬದುಕನ್ನು ಹುಟ್ಟುಹಾಕಲು ಒತ್ತು ನೀಡುವಂತೆ ನಮ್ಮನ್ನು ಪ್ರೇರೇಪಿಸಿದವು," ಎನ್ನುತ್ತಾರೆ 'ಬರ್ಡ್–ಕೆ'ನ ಹೆಚ್ಚುವರಿ ಮುಖ್ಯ ಕಾರ್ಯಕ್ರಮ ಸಮನ್ವಯಕಾರರಾದ ಪಂಡಿತ್ ಜಿ. ಪಾಟೀಲ್.

**ಸ್ಥಳೀಯ ಸಂಪನ್ಮೂಲಗಳು**

"ಹಳ್ಳಿಗಳಿಂದ ಕಲಿಯಲು ಪ್ರಯತ್ನಿಸಬೇಕು. ಯಾವುದೇ ಪೂರ್ವ–ನಿರ್ಧಾರಿತ ಯೋಜನೆಗಳ ಸಂಗಡ ಗ್ರಾಮಗಳನ್ನು ಪ್ರವೇಶಿಸಬಾರದು, ಬದಲಿಗೆ 'ನ್ಯೂಟ್ರಲ್ ಮೈಂಡ್'ನೊಂದಿಗೆ ಗ್ರಾಮಗಳನ್ನು ಪ್ರವೇಶಿಸಬೇಕು ಎನ್ನುವುದು ದಿವಂಗತ ಗಾಂಧೀಜಿಯವರ ಭಾವನೆಯಾಗಿತ್ತು. ಪ್ರತಿಯೊಂದೂ ಗ್ರಾಮವೂ ಪ್ರತ್ಯೇಕ ಘಟಕವಾಗಿದ್ದು ನಾವು ವಿಭಿನ್ನ ಮಾದರಿ/ಕ್ರಮಗಳ ಮೂಲಕ ಅವುಗಳ ಸಮಸ್ಯೆಗಳನ್ನು ಪರಿಹರಿಸಬೇಕು. ನಮ್ಮ ಕಾರ್ಯಕ್ರಮಗಳಲ್ಲಿ ಹೆಚ್ಚುಹೆಚ್ಚಾಗಿ ತೊಡಗಿಸಿಕೊಳ್ಳಲು ಮತ್ತು ಸಮಗ್ರ ಯಶಸ್ಸಿಗಾಗಿ ನಾವು ಕೃಷಿಕರ ಸಾಂಪ್ರದಾಯಿಕ ಜ್ಞಾನವನ್ನು ಗೌರವಿಸುತ್ತೇವೆ ಮತ್ತು ಗ್ರಾಮ ಪಂಚಾಯಿತಿಗಳನ್ನು ಬಳಸಿಕೊಳ್ಳುತ್ತಿದ್ದೇವೆ," ಎನ್ನುತ್ತಾರೆ 'ಬರ್ಡ್–ಕೆ'ನ ಮುಖ್ಯ ಕಾರ್ಯಕ್ರಮ ಸಮನ್ವಯಕಾರರಾದ ಕೆ. ಮಲ್ಲಿಕಾರ್ಜುನಪ್ಪ.

BAIF ನ 'ವೃಕ್ಷಾಧಾರಿತ ಕೃಷಿ ತಂತ್ರ' ಸಹ ಸ್ಥಳೀಯ ಸಂಪನ್ಮೂಲಗಳ ಗರಿಷ್ಠ ಬಳಕೆಯ ಇದೇ ಯೋಜನೆಗಳಿಂದ ಕೂಡಿತ್ತು. "ಕೃಷಿಯು ಪರಿಸರದ ಸಂಗಡ ಜೊತೆಜೊತೆಯಾಗಿ ಸಾಗಬೇಕು ಎನ್ನುವುದು ನಮ್ಮ ತತ್ವ. ವೃಕ್ಷಾಧಾರಿತ ಕೃಷಿ ಪದ್ಧತಿಯು ಆರಂಭದಲ್ಲಿ ಹೆಚ್ಚು ಇಳುವರಿಯನ್ನು ನೀಡದೆ ಇರಬಹುದು, ಆದರೆ ಇದು ದೀರ್ಘಾವಧಿ ಲಾಭ ಮತ್ತು ಸುಸ್ಥಿರತೆಯನ್ನು ತಂದೊಡ್ಡುತ್ತದೆ," ಎನ್ನುತ್ತಾರೆ ಅವರು.

ಅವರ ಪ್ರಕಾರ, ಈ ಪದ್ಧತಿಯು ಸಂಕಷ್ಟಕರ ಪರಿಸ್ಥಿತಿ ನಿಭಾಯಿಸುವಲ್ಲಿ ಗ್ರಾಮಸ್ಥರಿಗೆ ನೆರವಾಗಿವೆ. "ವೃಕ್ಷಾಧಾರಿತ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡಿರುವ ಗ್ರಾಮಸ್ಥರು ಕೇವಲ ಒಂದೇ ಬೆಳೆಯ ಮೇಲೆ ಅವಲಂಬಿತವಾಗಬೇಕಿಲ್ಲ. ಒಂದು ಬೆಳೆ

ನಷ್ಟವಾದರೆ, ಮತ್ತೊಂದು ಉತ್ಪಾದನೆ ಅವರ ನೆರವಿಗೆ ಬರುತ್ತದೆ. ಈ ಪದ್ಧತಿಯು ಮಣ್ಣಿನ ಮೇಲ್ಮೈ ರಕ್ಷಣೆ, ಸವಕಳಿ ತಡೆ, ಉರುವಲು, ಪೀಠೋಪಕರಣಗಳಿಗಾಗಿ ಮರ, ಹಣ್ಣು ಮತ್ತು ಮೇವನ್ನೂ ನೀಡುತ್ತದೆ. ನೀವು ಬೆಳಗುಂಬ ಗ್ರಾಮಕ್ಕೆ ಭೇಟಿ ನೀಡಿದರೆ, ನೀವು ಎಲ್ಲಾ ಕಾಲದಲ್ಲಿಯೂ ಒಂದಲ್ಲಾ ಒಂದು ಹಣ್ಣನ್ನು ಪಡೆಯಬಹುದು," ಎಂದು ಅವರು ವಿವರಿಸುತ್ತಾರೆ.

ಮಹಿಳೆಯರನ್ನು ಮುಂಚೂಣಿಗೆ ತಂದಲ್ಲಿ ಯಾವುದೇ ಕಾರ್ಯಕ್ರಮಗಳ ಯಶಸ್ಸು ಶತಃಸಿದ್ಧ ಎನ್ನುವುದನ್ನು ಗಾಂಧೀಜಿ ಮತ್ತು ಮಣಿಭಾಯಿ ಇಬ್ಬರೂ ಮನಗಂಡಿದ್ದರು. ಪರಿಣಾಮವಾಗಿಯೇ BAIF ನ ಯೋಜನೆಗಳಲ್ಲಿ ಮಹಿಳೆಯರು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. "ಹೈನುಗಾರಿಕೆ ಅಭಿವೃದ್ಧಿಯೇ ಆಗಿರಲಿ ಅಥವಾ ಸಾವಯವ ಕೃಷಿಯೇ ಆಗಿರಲಿ ಇಲ್ಲವೇ ಮಳೆನೀರು ಕೊಯ್ಲೇ ಆಗಿರಲಿ, ನಾವು ಸದಾ ಮಹಿಳೆಯರ ಗರಿಷ್ಠ ಪಾಲ್ಗೊಳ್ಳುವಿಕೆಗೆ ಪ್ರಯತ್ನಿಸುತ್ತೇವೆ. ಸ್ತ್ರೀಯರ ಪಾಲ್ಗೊಳ್ಳುವಿಕೆಯಿಲ್ಲದೆ ನಮ್ಮ ಕಾರ್ಯಕ್ರಮಗಳ ಗುರಿ ತಲುಪಲು ಅಸಾಧ್ಯ ಎನ್ನುವ ಅರಿವು ನಮಗಿದೆ," ಎಂದು ಒತ್ತಿಹೇಳುತ್ತಾರೆ ಮಲ್ಲಿಕಾರ್ಜುನಪ್ಪ.

**ಪಾಲ್ಗೊಳ್ಳುವಿಕೆ**

ಮೈಸೂರು, ತಿಪಟೂರು, ಧಾರವಾಡ ಮತ್ತು ಗುಲ್ಬರ್ಗಾ ವಿಭಾಗಗಳಲ್ಲಿನ 22 ಜಿಲ್ಲೆಗಳಲ್ಲಿ 'ಬರ್ಡ್–ಕೆ'ಯು ಗಾಂಧೀಜಿಯವರ ಗುರಿಯನ್ನು 15 ವಿಭಿನ್ನ ಕಾರ್ಯಕ್ರಮಗಳ ಮೂಲಕ ಅನುಷ್ಠಾನಗೊಳಿಸುತ್ತಿದೆ. 'ತಾಂತ್ರಿಕವಾಗಿ ಸಮರ್ಥ ಸಂಸ್ಥೆ' ಎಂದು ರಾಜ್ಯ ಸರ್ಕಾರದಿಂದ ಪರಿಗಣಿಸಲ್ಪಟ್ಟಿರುವ BAIF ಸರ್ಕಾರದ ವಿವಿಧ ಇಲಾಖೆಗಳ ಸಂಗಡ ದೀರ್ಘಕಾಲೀನ ದೃಢ ಬಾಂಧವ್ಯವನ್ನು ಹೊಂದಿದ್ದು, ಪರಿಣಾಮಕಾರಿ ಹಾಗೂ ಸಮರ್ಥವಾಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ವಿಶ್ವಾಸಾರ್ಹ ಸಂಸ್ಥೆ ಎನ್ನುವ ಮನ್ನಣೆಗೂ ಪಾತ್ರವಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಹೈನುಗಾರಿಕೆ ಮತ್ತು ಪಶುಸಂಗೋಪನೆ ಸೇವೆ, ಕೃಷಿ, ಜಲಾನಯನ ಇಲಾಖೆ ಸೇರಿದಂತೆ ಅನೇಕ ಇಲಾಖೆಗಳ ಯೋಜನೆಗಳನ್ನು ಕರ್ನಾಟಕದ ನೂರಾರು ಗ್ರಾಮಗಳಿಗೆ ಸಂಸ್ಥೆಯು ಕೊಂಡೊಯ್ದಿದೆ. ಕಾರ್ಯಕ್ರಮಗಳ ಅನುಷ್ಠಾನದಲ್ಲಿ ವೃತ್ತಿಪರತೆ ಮತ್ತು ಪಾರದರ್ಶಕತೆಯ ದೆಸೆಯಿಂದಾಗಿಯೇ ಅನೇಕ ಬ್ಯಾಂಕುಗಳು, ಕಾರ್ಪೊರೇಟ್ ಮತ್ತು ದತ್ತಿ ಸಂಸ್ಥೆಗಳು 'ಬರ್ಡ್–ಕೆ' ಚಟುವಟಿಕೆಗಳನ್ನು ಪ್ರಾಯೋಜಿಸಿವೆ.

ತನ್ನ ಹೈನುಗಾರಿಕೆ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ 'ಬರ್ಡ್–ಕೆ' ಸ್ಥಳೀಯ (Local Breeds) ಮತ್ತು ಸಂಕರ (Cross Breeds) ತಳಿಯ ರಾಸುಗಳ ಪಾಲನೆಗೆ ಪ್ರೋತ್ಸಾಹಿಸುತ್ತಿದ್ದು, ಪರಿಣಾಮ ರಾಜ್ಯದಲ್ಲಿ ಕ್ಷೀರ ಉತ್ಪಾದನೆ ಗಮನಾರ್ಹ ಪ್ರಮಾಣದಲ್ಲಿ ಏರಿಕೆಯಾಗಿದೆ. ಚಿತ್ರಾಪುರ ಮಠ ಪ್ರಾಯೋಜಿತ 'ಪರಿಮೋರ್ಚನ' ಮತ್ತು ರಾಜ್ಯ ಸರ್ಕಾರದ 'ಸಾವಯವ ಭಾಗ್ಯ ಯೋಜನೆ' ಕಾರ್ಯಕ್ರಮಗಳ ಅನುಷ್ಠಾನ ಸಹಸ್ರಾರು ಗ್ರಾಮಸ್ಥರ ಮೊಗದಲ್ಲಿ ಸಂತೃಪ್ತಿಯ ನಗು ಮೂಡುವಂತೆ ಮಾಡಿವೆ. ತನ್ನ ಪ್ರಾಕೃತಿಕ ಸಂಪನ್ಮೂಲ ನಿರ್ವಹಣಾ ಯೋಜನೆ (Natural Resource Management Mission) ಕಾರ್ಯಕ್ರಮಗಳನ್ನು ಬರ್ಡ್ 493 ಗ್ರಾಮಗಳಲ್ಲಿ ವೃಕ್ಷಾಧಾರಿತ ಕೃಷಿ ಮೂಲಕ ಮತ್ತು 21,818 ಹೆಕ್ಟೇರ್‌ಗಳಲ್ಲಿ ಜಲಾನಯನ ನಿರ್ವಹಣೆ ಮೂಲಕ 1980ರಿಂದ ಅನುಷ್ಠಾನಗೊಳಿಸುತ್ತಿದೆ.

ಫ್ಲೋರೈಡ್ ಮುಕ್ತ ನೀರನ್ನು ಒದಗಿಸುವ ಬರ್ಡ್‌ನ 'ಸಚೇತನಾ' ಯೋಜನೆಯು ಅಸಂಖ್ಯ ಗ್ರಾಮಗಳಲ್ಲಿ, ವಿಶೇಷವಾಗಿ ತುಮಕೂರು ಜಿಲ್ಲೆಯ ಪಾವಗಡ, ಮಧುಗಿರಿ ಮತ್ತು ಸಿರಾ ತಾಲ್ಲೂಕುಗಳಲಿ, ಕ್ರಾಂತಿಯನ್ನೇ ಉಂಟುಮಾಡುತ್ತಿದೆ. ಈ ಪ್ರದೇಶಗಳ ಸುಮಾರು 7,500 ಕುಟುಂಬಗಳು ಸ್ವಚ್ಛ ಅಡುಗೆಮನೆ, ಔಷಧೀಯ ಸಸ್ಯಗಳ ತೋಟ ಮತ್ತು ಮಳೆನೀರು ಕೊಯ್ಲು ಘಟಕಗಳನ್ನು ಹೊಂದಲು ಬರ್ಡ್ ನೆರವಾಗಿದೆ. ಆರ್ಥಿಕ ನೆರವು ನೀಡುವ 'ನವಚೇತನ' ಯೋಜನೆಯು ನೂರಾರು ಕುಟುಂಬಗಳನ್ನು, ವಿಶೇಷವಾಗಿ ಮಹಿಳೆಯರು ಆರ್ಥಿಕವಾಗಿ ಸಬಲರಾಗಲು ನೆರವಾಗಿದೆ. ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನ ತನ್ಮೂಲಕದ ಯಶಸ್ಸಿಗಾಗಿ ಸಂಸ್ಥೆಯು ತಿಪಟೂರು, ಕಲಘಟಗಿ ಮತ್ತು ಮುಂಡರಗಿಯಲ್ಲಿರುವ ಸುಸಜ್ಜಿತ ತರಬೇತಿ ಕೇಂದ್ರಗಳನ್ನು ಆರಂಭಿಸಿದ್ದು, ಆ ಮೂಲಕ ತರಬೇತಿಗಳನ್ನು ನೀಡುತ್ತಿದೆ.

ಬರ್ಡ್ ತಿಪಟೂರು ಸಮೀಪದ ಲಕ್ಕಿಹಳ್ಳಿಯಲ್ಲಿ 500 ಎಕರೆ ಕ್ಯಾಂಪಸ್ ಹೊಂದಿದ್ದು, ಸುಸ್ಥಿರ ಅಭಿವೃದ್ಧಿಗಾಗಿ ತಂತ್ರಜ್ಞಾನ ಸಂಬಂಧಿಸಿದಂತೆ ಪ್ರಾತ್ಯಕ್ಷಿಕೆಗಳನ್ನು ನೀಡುವ ಆ ಕ್ಯಾಂಪಸ್ ಯಾವುದೇ ಕೃಷಿಕರು ಅಥವಾ ಸಂಶೋಧಕರಿಗೆ ಭೇಟಿ ನೀಡಲು ಪ್ರಶಸ್ತ ತಾಣ.

ಜಲಾನಯನ ಅಭಿವೃದ್ಧಿ ಮಾದರಿ, ಮಣ್ಣು ಮತ್ತು ಜಲ ಸಂರಕ್ಷಣೆ, ಛಾವಣಿ ಆಧಾರಿತ ಮಳೆನೀರು ಕೊಯ್ಲು, ಹೈನುಗಾರಿಕೆ, ಬಿದಿರು, ನರ್ಸರಿ, ಆರ್ಚರ್ಡ್, ಔಷಧೀಯ ಸಸ್ಯವನ, ಹನಿ ನೀರಾವರಿ ಆಧಾರಿತ ತೆಂಗು ಬೇಸಾಯ, ಎನರ್ಜಿ ಪ್ಲಾಂಟೇಷನ್, ಜೈವಿಕ ಇಂಧನದ ಸಂಗಡ ಪ್ರಯೋಗಗಳು, ವಿವಿಧ ಗೊಬ್ಬರ ತಾಂತ್ರಿಕತೆ ಸೇರಿದಂತೆ ರಾಜ್ಯದೆಲ್ಲೆಡೆ ಹರಡಿರುವ ಬರ್ಡ್‌ನ ಕಾರ್ಯಚಟುವಟಿಕೆಗಳ ಸಂಪೂರ್ಣ ಚಿತ್ರಣವನ್ನು ಈ 'ಗ್ರೀನ್ ಕ್ಯಾಂಪಸ್' ಕಟ್ಟಿಕೊಡುತ್ತದೆ.

**ಇಂದಿನ ತುರ್ತು ಅಗತ್ಯ**

"ಜಗದಲ್ಲಿ ಬದಲಾವಣೆಯನ್ನು ತರಲು ನೀವೇ ಕಾರಣರಾಗಿ" – ಇದು ಜಗತ್ತಿಗೆ ಮಹಾತ್ಮಾ ಗಾಂಧೀಜಿ ನೀಡಿದ ಸಂದೇಶ. ಮಹಾತ್ಮಾ ಗಾಂಧೀಜಿ ಹಾಕಿಕೊಟ್ಟ ಮಾರ್ಗದಲ್ಲಿಯೇ ಕಳೆದ 50 ವರ್ಷಗಳಿಂದ ಸಾಗುತ್ತಿರುವ ಬರ್ಡ್ ಮಹಾತ್ಮನ ಈ ಸಂದೇಶವನ್ನು ನಿಜಾರ್ಥದಲ್ಲಿ ಅಳವಡಿಸಿಕೊಂಡಿದೆ. ಭಾರತದ ಗ್ರಾಮಗಳು ಅಭಿವೃದ್ಧಿ ಮತ್ತು ಉದ್ಯೋಗ ಕ್ಷೇತ್ರಗಳಿಗೆ ಸಂಕಷ್ಟಗಳನ್ನು ಎದುರಿಸುತ್ತಿರುವ ಈ ದಿನಗಳಲ್ಲಿ ಗಾಂಧಿ ತತ್ವವಾದ ಗ್ರಾಮ ಸ್ವರಾಜ್ ಆಸರೆಯಾಗಿ ಬರಬೇಕಾಗಿದೆ. ಭಾರತದಲ್ಲಿ ಕೈಗಾರೀಕೀಕರಣದ ಪ್ರಮಾಣ ಎಷ್ಟೇ ಇರಲಿ, ಅದು ಹಳ್ಳಿಗಳನ್ನು ನಿರ್ಲಕ್ಷಿಸಿ ಯಶ ಸಾಧಿಸಲಾರವು. BAIF ನಂತಹ ಸಂಸ್ಥೆಗಳು ಗ್ರಾಮೀಣಾಭಿವೃದ್ಧಿ ಸಂಬಂಧಿತ ಕಾರ್ಯಕ್ರಮಗಳ ಯೋಜನೆ ಮತ್ತು ಅನುಷ್ಠಾನಗಳಲ್ಲಿ ಸರ್ಕಾರಗಳಿಗೆ ಮಾದರಿಯಾಗಬೇಕು.

Published by : The Director, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Lavanya Mudrana, #19, Vidyapeeta Circle, Banashankari 1st Stage, Bangalore - 560 050